ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಬಾಳ ಪಯಣ ಮುಗಿಸಿದ ಲಲಿತ ಕೃಷ್ಣ ಶೆಟ್ಟಿ



ಸಂಪುಟ 14 | ಸಂಚಿಕೆ 11 | ಮಾರ್ಚ್ 9–15, 2020 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com



ದಿಲ್ಲಿ ಹಿಂಸಾಚಾರ ಚುನಾವಣಾ ಸೋಲನ್ನು ದ್ವೇಷದ ವಿಜಯವಾಗಿ ಪರಿವರ್ತಿಸುವ ಪ್ರಯತ್ನ



ಆರ್ಥಿಕ ಚೇತರಿಕೆಗೆ ಸ್ಪಂದಿಸದ ಹಾಗೂ ಜನತೆಯ ಸಂಕಷ್ಟವನ್ನು ಹೆಚ್ಚಿಸಿದ ರಾಜ್ಯ ಬಜೆಟ್ : ಸಿಪಿಐ(ಎಂ)

ಕರ್ನಾಟಕದಲ್ಲಿ ರೈತ ಆತ್ಮಹತ್ಯಾ ಕುಟುಂಬಗಳಲ್ಲಿ ಮಹಿಳಾ ರೈತರ ಸ್ಥಿತಿಗತಿ



ಮನೆಗೆಲಸದವಳು ಸಿ.ಇ.ಒ ಆದಾಯ ಪಡೆಯಲು 22,277 ವರ್ಷ ದುಡಿಯಬೇಕು!!





ತಾಲಿಬಾನ್–ಅಮೆರಿಕ ದೋಹಾ ಒಪ್ಪಂದ ಅಫ್ಗಾನಿಸ್ತಾನ್ ಮತ್ತೆ ತಾಲಿಬಾನಿಸ್ತಾನ್?

ದಿಲ್ಲಿಯ ಕೋಮು ಹಿಂಸಾಚಾರ ಪೀಡಿತರಿಗೆ ಪರಿಹಾರ ಸಂಗ್ರಹ: ಸಿಪಿಐ(ಎಂ) ಮನವಿ



ದಿಲ್ಲಿಯಲ್ಲಿ ನಡೆದಿರುವ ಕೋಮುವಾದಿ ಹಿಂಸಾಚಾರದಿಂದ ಪೀಡಿತರಾದವರಿಗೆ ಪರಿಹಾರ ಮತ್ತು ಮರುವಸತಿಗಾಗಿ ನಿಧಿ ಸಂಗ್ರಹಗಳನ್ನು ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬುರೊ ಜನಗಳಿಗೆ, ಪಕ್ಷದ ಎಲ್ಲ ರಾಜ್ಯ ಸಮಿತಿಗಳಿಗೆ, ಹಿತೈಷಿಗಳಿಗೆ ಹಾಗೂ ಬೆಂಬಲಿಗರಿಗೆ ಮನವಿ ಮಾಡಿದೆ. ಈ ಉದ್ದೇಶದಿಂದ ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿ ಒಂದು ಸೌಹಾರ್ದ ಪರಿಹಾರ ಸಮಿತಿಯನ್ನು ರಚಿಸಿದೆ.

ದಿಲ್ಲಿಯಲ್ಲಿನ ಕೋಮುವಾದಿ ಹಿಂಸಾಚಾರದಿಂದಾಗಿ ಹಲವು ಪ್ರಾಣಹಾನಿಗಳಾಗಿವೆ, ಜೀವನಾಧಾರಗಳು, ಮನೆಗಳು ಮತ್ತು ಆಸ್ತಿಗಳ ನಾಶ ಉಂಟಾಗಿದೆ. ಹಿಂಸಾಚಾರ ನಡೆದ ಈಶಾನ್ಯ ದಿಲ್ಲಿಯ ಪ್ರದೇಶಗಳಲ್ಲಿ ಎರಡೂ ಸಮುದಾಯಗಳ ಅಸಂಘಟಿತ ಕಾರ್ಮಿಕರು, ಕಾರ್ಮಿಕ ವರ್ಗ ಮತ್ತು ಕೆಳ ಮಧ್ಯಮವರ್ಗದ ಕುಟುಂಬಗಳು ದೊಡ್ಡ ಸಂಖ್ಯೆಯಲ್ಲಿ ಇವೆ. ಸಾವಿರಾರು ಮಂದಿಯನ್ನು ಹಿಂಸಾಚಾರ ವಿವಿಧ ರೀತಿಗಳಲ್ಲಿ ಬಾಧಿಸಿದೆ. ಈ ಬಾಧಿತ ಪ್ರದೇಶಗಳಲ್ಲಿ ನೋವು ಮತ್ತು ಸಂಕಟ ವ್ಯಾಪಕವಾಗಿದೆ.

ಇಂತಹ ಸನ್ನಿವೇಶದಲ್ಲಿ ಪರಿಹಾರ ಕಾರ್ಯವು ಕೋಮುಗ್ರಸ್ತಗೊಳ್ಳಬಾರದು, ಜಾತ್ಯತೀತ ನಿಲುವಿನಿಂದ ತಲುಪಬೇಕು ಮತ್ತು ಎಲ್ಲ ಬಾಧಿತ ವಿಭಾಗಗಳಿಗೆ, ಅವರು ಯಾವುದೇ ಧಾರ್ಮಿಕ ನಂಬಿಕೆಗಳವರಾಗಿರಲಿ, ನೆರವು ಒದಗಿಸುವ ಗುರಿಯಿಂದ ನಡೆಯುವಂತೆ ಖಾತ್ರಿಪಡಿಸಬೇಕಾಗಿದೆ. ಈ ಕರೆಯನ್ನು ತುರ್ತಾಗಿ ಪರಿಗಣಿಸಬೇಕು ಮತ್ತು ಉದಾರವಾಗಿ ಕೊಡುಗೆ ನೀಡಬೇಕು ಎಂದು ಪೊಲಿಟ್‌ಬ್ಯುರೊ ಮನವಿ ಮಾಡಿದೆ. ಚೆಕ್‌ಗಳನ್ನು Communist Party of India(Marxist)ಗೆ ಬರೆಯಬೇಕು ಎಂದು ಅದು ಹೇಳಿದೆ.

ಪರಿಹಾರ ಸೌಹಾರ್ದ ಸಮಿತಿಯ ನಾಲ್ಕು ತಂಡಗಳಿಂದ ನೆರವು– ಪರಿಹಾರ ಕಾರ್ಯ ಮತ್ತು ಹಾನಿಗಳ ಸರ್ವೆ

ಪರಿಹಾರ ಸೌಹಾರ್ದ ಸಮಿತಿಯ ಸ್ವಯಂಸೇವಕರು ನಾಲ್ಕು ತಂಡಗಳಾಗಿ ಗಲಭೆ ಪೀಡಿತ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಸರ್ವೆ ತಂಡ ಮನೆ–ಮನೆಗೆ ಭೇಟಿ ನೀಡಿ ಈ ಹಿಂಸಾಚಾರ ಪೀಡಿತರ ನೋವು–ನಷ್ಟಗಳ ಅಂದಾಜು ಮಾಡುತ್ತಿದೆ ಜತೆಗೆ.

ದಿಲ್ಲಿ ರಾಜ್ಯ ಸರಕಾರ ಪರಿಹಾರವನ್ನು ಕುರಿತಂತೆ ಒಂದು ಅರ್ಜಿ ಫಾರಂನ್ನು ಪ್ರಕಟಿಸಿದೆ. ಇದರಲ್ಲಿ ಆಗಿರುವ ನಷ್ಟಗಳ ವಿವರಗಳನ್ನು ಕೇಳಲಾಗಿದೆ. ಹಿಂಸಾಚಾರ ಪೀಡಿತರಲ್ಲಿ ಹಲವರು ಎಲ್ಲವನ್ನೂ, ಮನೆಯಲ್ಲಿದ್ದ ದಸ್ತಾವೇಜುಗಳನ್ನೂ ಕಳೆದುಕೊಂಡಿರುವುದರಿಂದ ಇದನ್ನು ತುಂಬಿಸಲು ಅವರಿಗೆ ಬಹಳ ಕಷ್ಟವಾಗುತ್ತಿದೆ. ಈ ತಂಡ ಇದರಲ್ಲಿ ನೆರವು ನೀಡುತ್ತಿದೆ.ಅಲ್ಲದೆ ಈ ಫಾರಂನಿಂದ ನಷ್ಟದ ಪೂರ್ಣ ವಿವರಗಳು ಸಿಗುವಂತಿಲ್ಲ. ಮುಖ್ಯವಾಗಿ ಈ ಪೀಡಿತರ ಜೀವನೋಪಾಯಗಳಿಗೆ ಆಗಿರುವ ಹಾನಿ ಈ ಫಾರಂನಲ್ಲಿ ಬಿಂಬಿತವಾಗುವುದಿಲ್ಲ. ಈ ತಂಡ ಅದನ್ನು ಕುರಿತಂತೆ ಮಾಹಿತಿಗಳನ್ನು ಕಲೆ ಹಾಕುತ್ತಿದೆ.

ಎರಡನೇ ತಂಡ ಸಂಗ್ರಹಿಸಿದ ಪರಿಹಾರ ಸಾಮಗ್ರಿಗಳನ್ನು ಪೀಡಿತರ ಮನೆ–ಮನೆಗಳಿಗೆ ತಲುಪಿಸುತ್ತಿದೆ.

ಮೂರನೇ ತಂಡ ಬೃಂದಾ ಕಾರಟ್ ನೇತೃತ್ವದಲ್ಲಿ ಸಾವು ಸಂಭವಿಸಿರುವ ಮತ್ತು ಗಾಯಗೊಂಡವರ ಕುಟುಂಬಗಳನ್ನು ಭೇಟಿ ಮಾಡುತ್ತಿದೆ. ಮಾರ್ಚ್ 1ರಂದು ತೀವ್ರವಾಗಿ ಗಾಯಗೊಂಡ ಸ್ಥಿತಿಯಲ್ಲೂ ಪೋಲಿಸರು ರಾಷ್ಟ್ರಗೀತೆ ಹಾಡುವಂತೆ ಮಾಡಿದ, ನಂತರ ಸಮಯದಲ್ಲಿ ಶುಶ್ರೂಷೆ ಸಿಗದ್ದರಿಂದ ಸಾವಿಗೀಡಾದ ಫೈಝಾನ್‌ನ ತಯಿಯನ್ನು ಭೇಟಿಯಾದರು(ಪುಟ 7ರಲ್ಲಿರುವ ಬೃಂದಾ ಕಾರಟ್ ಅವರ ಲೇಖನವನ್ನು ನೋಡಿ)



ನಾಲ್ಕನೇಯದ್ದು ಕಾನೂನು ತಂಡ. ಇದು ಸತ್ತವರ, ಗಾಯಗೊಂಡವರ ಮತ್ತು ಹಾನಿಗೀಡಾದ ಕುಟುಂಬಗಳಿಗೆ ಕಾನೂನು ನೆರವು ಒದಗಿಸುತ್ತಿದೆ.

ಇದರೊಂದಿಗೆ ಸಿಪಿಐ(ಎಂ) ಕಾರ್ಯಕರ್ತರು ಮನೆ–ಮನೆಗೆ ಹೋಗಿ ಆರೆಸ್ಸೆಸ್–ಬಿಜೆಪಿಯ ದ್ವೇಷ ರಾಜಕೀಯದ ಅಜೆಂಡಾವನ್ನು ಬಯಲಿಗೆಳೆಯುತ್ತಿದ್ದಾರೆ. ಈ ದ್ವೇಷದ, ಹಿಂಸಾಚಾರದ ಅಜೆಂಡಾವನ್ನು ಅರಿತು ವಿಫಲಗೊಳಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತಿದ್ದಾರೆ.

ಜನಗಣತಿ ಕಾರ್ಯಗಳನ್ನು ಎನ್‌ಪಿಆರ್‌ನಿಂದ ಪ್ರತ್ಯೇಕಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ರಾಷ್ಟ್ರೀಯ ಜನಸಂಖ್ಯಾ ದಾಖಲಾತಿ (ಎನ್.ಪಿ.ಆರ್.)ಯ ಗಣತಿ ಪ್ರಕ್ರಿಯೆಯ ಬಗ್ಗೆ ಹಲವು ಮುಖ್ಯಮಂತ್ರಿಗಳು ವಿರೋಧ ವ್ಯಕ್ತಪಡಿಸಿರುವುದರಿಂದ, ಜನಗಣತಿ ಕಾರ್ಯಕ್ಕೆ ಮಾಹಿತಿ ಸಂಗ್ರಹ ಮತ್ತು ಎನ್.ಪಿ.ಆರ್. ಗಣತಿಯನ್ನು ಪ್ರತ್ಯೇಕಿಸಿವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಜನಗಣತಿ ಕಾರ್ಯಗಳು ಪ್ರತಿ ದಶಕದಲ್ಲಿ ಮಾಡಬೇಕೆಂದು ಸಂವಿಧಾನ ವಿಧಿಸಿರುವಂತವುಗಳಾದರೆ, ಎನ್.ಪಿ.ಆರ್. ಪೌರತ್ವ ತಿದ್ದುಪಡಿ ಕಾಯ್ದೆ, 2003ರ ಅಡಿಯಲ್ಲಿ ರೂಪಿಸಿದ ನಿಯಮಗಳಲ್ಲಿ ಬರುವಂತದ್ದು. ಆದ್ದರಿಂದ ಕಾನೂನು ಪ್ರಕಾರ ಇವೆರಡನ್ನು ಒಟ್ಟಿಗೆ ಜೋಡಿಸಬಾರದು ಎಂದಿರುವ ಪೊಲಿಟ್ ಬ್ಯುರೊ ಎನ್.ಪಿ.ಆರ್. ದತ್ತಾಂಶವನ್ನು ತಂತಾನೇ ರಾಷ್ಟ್ರೀಯ ಪೌರರ ರಿಜಿಸ್ಟರ್(ಎನ್.ಆರ್.ಖಖ.)ನ್ನು ಸಿದ್ಧಪಡಿಸಲು ಬಳಸಲಾಗುತ್ತದೆ ಎಂಬ ತನ್ನ ಅಭಿಪ್ರಾಯವನ್ನು ಪುನರುಚ್ಚರಿಸಿದೆ.

ಎನ್.ಆರ್.ಸಿ. ಯಲ್ಲಿ ಹೆಸರು ಕಾಣಿಸಿಕೊಳ್ಳದ ಕೋಟ್ಯಂತರ ಜನಗಳನ್ನು ಆಗ ದಸ್ತಾವೇಜುಗಳನ್ನು ಸಲ್ಲಿಸಿ ತಾವು ಭಾರತೀಯ ಪೌರರು ಎಂದು ಸಾಬೀತುಪಡಿಸಲು ಅನಗತ್ಯ ಕಿರುಕುಳಗಳಿಗೆ ಒಳಪಡಿಸಲಾಗುತ್ತದೆ, ಬಲಿಪಶುಗಳಾಗಿ ಮಾಡಲಾಗುತ್ತದೆ. ಈ ಹಿಂದೆ ನಡೆಸಿದ ಒಂದು ಪ್ರಾಯೋಗಿಕ ಅಧ್ಯಯನ 43ಶೇ. ದಷ್ಟು ಭಾರತೀಯರು ಮಾತ್ರವೇ ಯಾವುದೇ ದಸ್ತಾವೇಜಿನ ಸಾಕ್ಷ್ಯ ಹೊಂದಿದ್ದಾರೆ ಎಂಬ ತೀರ್ಮಾನಕ್ಕೆ ಬಂದಿತ್ತು ಎಂಬ ಸಂಗತಿಯತ್ತ ಗಮನ ಸೆಳೆಯುತ್ತ, ವಾಸ್ತವ ಪರಿಸ್ಥಿತಿ ಹೀಗಿರುವುದರಿಂದ ಸಿಪಿಐ(ಎಂ) ಪೊಲಿಟ್ ಬ್ಯುರೊ ಎನ್.ಪಿ.ಆರ್.ಗೆ ತನ್ನ ವಿರೋಧವನ್ನು ಪುನರುಚ್ಚರಿಸುವುದಾಗಿ ಹೇಳಿದೆ.

ಎನ್‌ಪಿಆರ್ ಮತ್ತು ಜನಗಣತಿಯನ್ನು ಪ್ರತ್ಯೇಕಿಸಿ–ಎನ್‌ಪಿಆರ್‌ನ್ನು ಕೈಬಿಡಿ ಮೋದಿ ಸರಕಾರಕ್ಕೆ 190 ಅರ್ಥಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರ ಆಗ್ರಹ

2021ರ ಜನಗಣತಿಗೆ ದತ್ತಾಂಶಗಳ ಸಂಗ್ರಹ ಮತ್ತು ಪ್ರಸ್ತಾವಿತ ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರೊಂದಿಗೆ ಅದನ್ನು ತಳುಕು ಹಾಕುವ ಪ್ರಯತ್ನ ಭಾರತದ ಅಂಕಿ–ಅಂಶಗಳ ವ್ಯವಸ್ಥೆಯ ಮೇಲೆ ಬಹಳಷ್ಟು ದುಷ್ಪರಿಣಾಮಗಳನ್ನು ಬೀರಬಹುದೆಂದು ದೇಶ ಮತ್ತು ವಿದೇಶಗಳ ಅರ್ಥಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಜನಗಣತಿ 2021ರ ಮಾಹಿತಿ ಸಂಗ್ರಹ ಅತ್ಯಂತ ಸುರಕ್ಷಿತ, ಸಮಗ್ರ ಮತ್ತು ಬೇರೆ ಯಾವುದೇ ಅಂಶಗಳಿಂದ ಕಲುಷಿತಗೊಳ್ಳಬಾರದು. ಆದ್ದರಿಂದ ಜನಗಳಲ್ಲಿ ಬಹಳಷ್ಟು ಭೀತಿ–ಸಂದೇಹಗಳನ್ನು ಹುಟ್ಟಿಸಿರುವ ಎನ್‌ಪಿಆರ್‌ನೊಂದಿಗೆ ಇದನ್ನು ತಳುಕು ಹಾಕುವುದು ಅಪಾಯಕಾರಿ. ಅಲ್ಲದೆ ಇದು ಜನಗಣತಿ ಕಾಯ್ದೆ, 1948ರ ಕಲಮು 15ನ್ನು ಉಲ್ಲಂಘಿಸುತ್ತದೆ. ಜನಗಣತಿ ಅಧಿಕಾರಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ದಾಖಲಿಸಿರುವ ಯಾವುದೇ ಪುಸ್ತಕ, ರಿಜಿಸ್ಟರ್ ಅಥವ ದಾಖಲಾತಿಯನ್ನು ಬೇರೆ ಯಾರಿಗೂ ಲಭ್ಯಗೊಳಿಸುವುದನ್ನು ಈ ಕಲಮು ಉಲ್ಲಂಘಿಸುತ್ತದೆ. ಈ ಪುಸ್ತಕ, ರಿಜಿಸ್ಟರ್ ಅಥವ ದಾಖಲಾತಿಯ ಯಾವ ಭಾಗವನ್ನೂ ಈ ಕಾಯ್ದೆಯ ಅಡಿ ಕಾನೂನು ಕ್ರಮಕ್ಕೆ ಬಿಟ್ಟು ಬೇರೆ ಯಾವುದಕ್ಕೂ ಸಾಕ್ಷ್ಯವಾಗಿ ಬಳಸಬಾರದು ಎಂದೂ ವಿಧಿಸಲಾಗಿದೆ ಎಂಬ ಸಂಗತಿಯತ್ತ ಈ ವಿಶೇಷಜ್ಞರ ಜಂಟಿ ಹೇಳಿಕೆ ಗಮನ ಸೆಳೆದಿದೆ.

ಆದ್ದರಿಂದ ಜನಗಣತಿ 2021ರ ಸಮಗ್ರತೆಯನ್ನು ಕಾಪಾಡಿಕೊಳ್ಳಲು, ಅದನ್ನು ಯಾವುದೇ ಎನ್‌ಪಿಆರ್ ಕಾರ್ಯದೊಂದಿಗೆ ಜೋಡಿಸದೆ ಸಂಪೂರ್ಣವಾಗಿ ಪ್ರತ್ಯೇಕಿಸಬೇಕು, ಅಲ್ಲದೆ ಎನ್‌ಪಿಆರ್‌ಗೆ ಮಾಹಿತಿ ಸಂಗ್ರಹದ ಪ್ರಯತ್ನವನ್ನೂ ಸದ್ಯಕ್ಕೆ ಕೈಬಿಡಬೇಕು ಎಂದು ಈ ಹೇಳಿಕೆ ಮೋದಿ ಸರಕಾರವನ್ನು ಆಗ್ರಹಿಸಿದೆ.

ಕೋಮು ಹಿಂಸಾಚಾರದಲ್ಲಿ ಬಂಧಿತರ ಹೆಸರುಗಳನ್ನು ಪ್ರದರ್ಶಿಸಿ ದಿಲ್ಲಿ ಪೋಲೀಸ್ ಕಮಿಶನರ್‌ಗೆ ಬೃಂದಾ ಕಾರಟ್ ಪತ್ರ

ದಂಡ ಸಂಹಿತೆಯ ಸೆಕ್ಷನ್ 41–ಸಿ ವಿಧಿಸಿರುವಂತೆ ರಾಜಧಾನಿಯ ಈಶಾನ್ಯ ಭಾಗವನ್ನು ಆವರಿಸಿದ ಕೋಮು ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಬಂಧಿಸಲ್ಪಟ್ಟವರ ಮತ್ತು ಸ್ಥಾನಬದ್ಧತೆಗೆ ಒಳಪಡಿಸಿದವರ ಮಾಹಿತಿಯನ್ನು ಪ್ರದರ್ಶಿಸಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸುವತ್ತ ಮುಂದುವರೆಯಬೇಕು ಎಂದು ದಿಲ್ಲಿಯ ಪೋಲೀಸ್ ಕಮಿಶನರ್ ಅವರನ್ನು ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಕೋರಿದ್ದಾರೆ.

ಈ ಕುರಿತು ಪೋಲೀಸ್ ಕಮಿಶನರ್‌ರಿಗೆ ಮಾರ್ಚ್ 2ರಂದು ಬರೆದ ಪತ್ರದಲ್ಲಿ ಅವರು “148 ಎಫ್‌ಐಆರ್‌ಗಳನ್ನು ಹಾಕಲಾಗಿದೆ ಮತ್ತು ಹಲವರನ್ನು ಬಂಧಿಸಲಾಗಿದೆ ಎಂದು ಪ್ರತಿಕಾ ವರದಿಗಳು ಹೇಳುತ್ತವೆ. ಈ ಹಿಂಸಾಚಾರದಲ್ಲಿ ಸತ್ತವರ ಮತ್ತು ಗಾಯಗೊಂಡವರ ಹಲವು ಕುಟುಂಬಗಳನ್ನು ನಾನು ಭೇಟಿ ಮಾಡಿದ್ದೇನೆ. ಅವರಿಗೆ ತಾವಾಗಿ ಎಫ್‌ಐಆರ್ ಸಲ್ಲಿಸಲು ಆಗಿಲ್ಲ, ಅಥವ ಅವರ ಮೇಲೆ ಮಾಡಿದ ಹಲ್ಲೆಗಳನ್ನು ಕುರಿತಂತೆ ಯಾವುದೇ ಎಫ್‌ಐಆರ್ ದಾಖಲಿಸಿರುವ ಬಗ್ಗೆ ಪೋಲಿಸರು ಮಾಹಿತಿಯನ್ನೂ ಕೊಟ್ಟಿಲ್ಲ ಎಂದು ಅವರು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಾನೂನು ಸ್ಪಷ್ಟವಾಗಿದೆ” ಎನ್ನುತ್ತ ಅದರತ್ತ ಗಮನ ಸೆಳೆದಿದ್ದಾರೆ.

ಭಾರತೀಯ ದಂಡ ಸಂಹಿತೆಯ ವಿಭಾಗ 41–ಸಿ “(1) ಎಲ್ಲ ಜಿಲ್ಲೆಗಳಲ್ಲಿ ಒಂದು ಪೋಲೀಸ್ ಕಂಟ್ರೋಲ್ ರೂಂ. ಸ್ಥಾಪಿಸಬೇಕು. (2) ಬಂಧಿಸಲ್ಪಟ್ಟವರ ಹೆಸರು ಮತ್ತು ವಿಳಾಸಗಳನ್ನು ಹಾಗೂ ಬಂಧಿಸಿದ ಪೋಲಿಸ್ ಅಧಿಕಾರಿ ಹೆಸರು ಮತ್ತು ಹುದ್ದೆಯನ್ನು ಪ್ರದರ್ಶಿಸಬೇಕು. (3) ರಾಜ್ಯ ಮಟ್ಟದಲ್ಲಿ ಪೋಲಿಸ್ ಮುಖ್ಯಾಲಯದ ಕಂಟ್ರೋಲ್ ರೂಂ ಸಮಯ ಸಮಯಕ್ಕೆ (ಬಂಧಿತರು,ಅಪರಾಧದ ಸ್ವರೂಪದ) ವಿವರಗಳನ್ನು ಪಡೆಯಬೇಕು ಮತ್ತು ಸಾರ್ವಜನಿಕರ ಮಹಿತಿಗೆ ಒಂದು ಡಾಟಾಬೇಸ್ ಇಡಬೇಕು” ಎಂದು ವಿಧಿಸಿದೆ.

“ಹೀಗೆ ಕಾನೂನು ಸ್ಫುಟವಾಗಿ ವಿಧಿಸಿದ್ದರೂ, ಬಂಧಿಸಿರುವ ಎಲ್ಲ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳನ್ನು ಪೋಲೀಸ್ ಕಂಟ್ರೋಲ್ ರೂಂನಲ್ಲಿ ಪ್ರದರ್ಶಿಸುತ್ತಿಲ್ಲ. ಅಷ್ಟೇ ಅಲ್ಲ, ಸಂಬಂಧಪಟ್ಟ ಪ್ರತಿ ಪೋಲಿಸ್ ಠಾಣೆಗಳಲ್ಲೂ ಪ್ರದರ್ಶಿಸುತ್ತಿಲ್ಲ. ಈಗ ನಡೆದಿರುವ ಘಟನೆಗಳಿಂದಾಗಿ, ಮತ್ತು ಈಗಿರುವ ಪರಿಸ್ಥಿತಿಗಳಿಂದಾಗಿ, ಇದನ್ನು ಕಟ್ಟುನಿಟ್ಟಾಗಿ ಪಾಲಿಸುವುರ ಅಗತ್ಯವನ್ನು ತಾವು ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಕಾನೂನು ವಿಧಿಸಿರುವುದನ್ನು ಪಾಲಿಸುವುದು ಎಲ್ಲ ಬಾಧಿತರ ಬದುಕುಗಳನ್ನು ಪೀಡಿಸುತ್ತಿರುವ ಊಹಾಪೋಹಗಳು ಮತ್ತು ಸುಳ್ಳುಮಾಹಿತಿಗಳನ್ನು ನಿವಾರಿಸುವಲ್ಲಿ ಬಹಳಷ್ಟು ಸಹಾಯಕವಾಗುತ್ತದೆ” ಎನ್ನುತ್ತ ಬೃಂದಾ ಕಾರಟ್ ಅವರು ಈ ಕಾನೂನಾತ್ಮಕ ಅಗತ್ಯವನ್ನು ಪಾಲಿಸುವಂತೆ ಖಾತ್ರಿಪಡಿಸಬೇಕು ಮತ್ತು ಈ ಪ್ರದೇಶದಲ್ಲಿ ಸಾಮಾನ್ಯ ಸ್ಥಿತಿ ಮತ್ತೆ ನೆಲೆಸುವಂತೆ ಮಾಡುವತ್ತ ಮುಂದುವರೆಯಬೇಕು ಎಂದು ತಮ್ಮ ಪತ್ರದಲ್ಲಿ ದಿಲ್ಲಿ ಪೋಲೀಸ್ ಕಮಿಶನರ್ ಅವರನ್ನು ಕೋರಿದ್ದಾರೆ.


ಸಂಪಾದಕೀಯ

ಟೌನ್‌ಹಾಲ್ ಮುಂದೆ ಪ್ರತಿಭಟನೆಗೆ ನಿರ್ಬಂಧ ಸಮರ್ಥನೀಯವಲ್ಲ

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸಾರ್ವಜನಿಕ ಪ್ರತಿಭಟನೆಗೆ ಬಳಕೆಯಾಗುತ್ತಿದ್ದ ಪುರಭವನದ ಮುಂದೆ ಇನ್ಮುಂದೆ ಯಾವುದೇ ಧರಣಿ, ಪ್ರತಿಭಟನೆ ಮಾಡುವಂತಿಲ್ಲ ಎಂದು ಬಿಬಿಎಂಪಿ ನಿರ್ಧರಿಸಿದೆ. ಟೌನ್‌ಹಾಲ್ ಮುಂಭಾಗದ ಬದಲು ಸ್ವಾತಂತ್ರ್ಯ ಉದ್ಯಾನವನದಲ್ಲೇ ಪ್ರತಿಭಟನೆಗಳನ್ನು ಮಾಡುವಂತೆ ಸೂಚಿಸಿದೆ.

ಪುರಭವನ ಮಹಾನಗರದ ಹೃದಯ ಭಾಗದಲ್ಲಿರುವುದರಿಂದ ಸಾರ್ವಜನಿಕರು, ರೈತರು, ಕಾರ್ಮಿಕರು, ಕಲಾವಿದರು, ವಿದ್ಯಾರ್ಥಿ ಯುವಜನರು, ಮಹಿಳೆಯರು ತಮ್ಮ ಪ್ರತಿಭಟನೆಗಳಿಗಾಗಿ ಇದೇ ಸ್ಥಳವನ್ನು ಬಳಸಿಕೊಂಡು ಬಂದಿದ್ದರು. ಈಗ ಏಕಾಏಕಿಯಾಗಿ ಇಲ್ಲಿ ಪ್ರತಿಭಟನೆಗಳಿಗೆ ಅವಕಾಶವನ್ನು ನಿರಾಕರಿಸುವುದು ಸಮರ್ಥನೀಯವಲ್ಲ. ಇಲ್ಲಿ ಸಾರ್ವಜನಿಕ ಧರಣಿ ಮೊದಲಾದ ಕಾರ್ಯಕ್ರಮಗಳನ್ನು ನಿರ್ಬಂಧಿಸಲು ನೀಡಲಾಗುತ್ತಿರುವ ಕಾರಣಗಳು ಸಹ ಅಸಮರ್ಥನೀಯವಾಗಿವೆ.

ಪುರಭವನದಲ್ಲಿ ಸಾರ್ವಜನಿಕರ ಸಭೆ ಸಮಾರಂಭಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಸಾವಿರಾರು ರೂಪಾಯಿ ಮುಂಗಡ ಪಾವತಿಸಿ ಅಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಪುರಭವನದ ಎದುರು ಧರಣಿ ಮುಷ್ಕರಗಳಿಗೆ ಅವಕಾಶ ಮಾಡಿಕೊಟ್ಟರೆ ಕಾರ್ಯಕ್ರಮಗಳ ಆಯೋಜನೆಗೆ ಅಡ್ಡಿ ಉಂಟಾಗುತ್ತದೆ. ಇದರಿಂದಾಗಿ ಮಹಾನಗರ ಪಾಲಿಕೆಗೆ ಆದಾಯ ಕಡಿಮೆಯಾಗುತ್ತದೆ ಎಂಬ ಕಾರಣ ನೀಡಲಾಗುತ್ತದೆ. ಆದರೆ ಪುರಭವನದ ಮುಂದೆ ಧರಣಿ ಮುಷ್ಕರವನ್ನು ಶಾಶ್ವತವಾಗಿ ನಿರ್ಭಂಧಿಸುವ ಬದಲಾಗಿ ಕೆಲವು ನಿಯಂತ್ರಣಗಳಿಗೆ ಒಳಪಡಿಸಬಹುದು. ಪ್ರತಿಭಟನೆಯ ಅವಧಿಯನ್ನು ಸೂಕ್ತವಾಗಿ ನಿಗದಿ ಪಡಿಸಬಹುದು. ಪುರಭವನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಅಡಚಣೆ ಉಂಟಾಗದಂತೆ ನೋಡಿಕೊಳ್ಳಬಹುದು. ಪುರಭವನದಲ್ಲಿ ಯಾವುದೇ ಪೂರ್ವನಿಯೋಜಿತ ಕಾರ್ಯಕ್ರಮ ಇಲ್ಲದಿರುವಾಗ ಪ್ರತಿಭಟನೆಗಳಿಗೆ ಅವಕಾಶ ನೀಡುವುದರಲ್ಲಿ ಯಾರಿಗೂ ಏನೂ ತೊಂದರೆಯಾಗದು. ಇಲ್ಲಿ ನಡೆಯುವ ಕಾರ್ಯಕ್ರಮಗಳು ಹೆಚ್ಚಾಗಿ ಕೆಲವು ಗಂಟೆಗಳ ಕಾರ್ಯಕ್ರಮಗಳಾಗಿರುತ್ತವೆ. ಒಬ್ಬ ಗಣ್ಯ ವ್ಯಕ್ತಿ ನಿಧನರಾದಾಗ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವನ್ನೂ ಪುರಭವನ ಮೆಟ್ಟಿಲುಗಳ ಮೇಲೆ ನಡೆಸಲಾಗುತ್ತಿರುತ್ತದೆ. ಕೆಲವೇ ಗಂಟೆಗಳ ಕಾರ್ಯಕ್ರಮ ಕನಿಷ್ಠ ಮಾಹಿತಿ ವಿನಿಮಯದೊಂದಿಗೆ ಇಲ್ಲಿ ನಡೆಸಲಾಗುತ್ತಿರುತ್ತದೆ. ಇಂತಹ ಸಣ್ಣಪುಟ್ಟ ಕಾರ್ಯಕ್ರಮಗಳನ್ನು ಸಾವಿರಾರು ರೂ. ಬಾಡಿಗೆ ಕೊಟ್ಟು ಪುರಭವನದ ಒಳಗೆ ನಡೆಸಲಾಗದ ಸಂಘಟನೆಗಳು ಪುರಭವನ ಮುಂದೆ ಇರುವ ಬಯಲು ಜಾಗವನ್ನು ಬಳಸಿಕೊಳ್ಳಲು ಬಿಬಿಎಂಪಿ ಅವಕಾಶ ನೀಡಬೇಕು.



ಪುರಭವನದ ಮುಂಭಾಗದಲ್ಲಿ ಸಂಘಟನೆಗಳು ಪ್ರತಿಭಟನೆ ನಡೆಸಿದಾಗ ವಾಹನದಟ್ಟಣೆ ಉಂಟಾಗುತ್ತದೆ ಮತ್ತು ಇತರ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂಬ ವಾದವನ್ನು ಮುಂದಿಡಲಾಗುತ್ತದೆ. ವಾಹನದಟ್ಟಣೆ ಕೇವಲ ಪುರಭವನ ಮುಂದಿನ ರಸ್ತೆಯ ಸಮಸ್ಯೆಯಲ್ಲ. ಇದು ಅನಿಯಂತ್ರಿತವಾಗಿ ಬೆಳೆಯುತ್ತಿರುವ ನಗರೀಕರಣದ ಸಮಸ್ಯೆ. ಇದರಿಂದ ವಾಹನದಟ್ಟಣೆಯ ಸಮಸ್ಯೆ ಮಾತ್ರವಲ್ಲ. ವಸತಿ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಕಸ ವಿಲೇವರಿಯ ಸಮಸ್ಯೆ, ಪರಿಸರದ ಸಮಸ್ಯೆ ಹೀಗೆ ಹತ್ತಾರು ಸಮಸ್ಯೆಗಳಿಗೆ ಪ್ರತಿದಿನವೂ ಜನ್ಮ ನೀಡುತ್ತಿರುವ ನಗರ ಬೆಂಗಳೂರು.

ಈ ಸಮಸ್ಯೆಗಳತ್ತ ಆಳುವವರ ಗಮನ ಸೆಳೆಯಲು ಹೋರಾಟ ಒಂದೇ ಉಳಿದಿರುವ ಮಾರ್ಗ. ಜನ ನಗರದಲ್ಲಾಗಲಿ, ಗ್ರಾಮೀಣ ಪ್ರದೇಶದಲ್ಲಾಗಲಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಅವರು ಹೋರಾಟಕ್ಕೆ ಇಳಿಯುವ ಮೊದಲೇ ಅರಿಯಲು ಸಾಧ್ಯವಿಲ್ಲವೆ? ಅವುಗಳ ಇತ್ಯರ್ಥಕ್ಕೆ ಮಾತುಕತೆ ನಡೆಸಲು ಸಾಧ್ಯವಿಲ್ಲವೆ? ಪ್ರತಿಭಟನೆಯ ನೋಟಿಸ್ ಕೈಸೇರಿದ ತಕ್ಷಣದಿಂದಲೇ ಸಮಸ್ಯೆಯ ಇತ್ಯರ್ಥಕ್ಕೆ ಪ್ರಾಮಾಣಿಕ ಪ್ರಯತ್ನ ಏಕೆ ಮಾಡಬಾರದು? ಹೋರಾಟಗಳನ್ನು ತಡೆಯುವುದು ಹೇಗೆ? ದಮಾನ ಮಾಡುವುದು ಹೇಗೆ? ಅನ್ಯಾಯಕ್ಕೆ ಒಳಪಟ್ಟವರ ಬಾಯಿ ಮುಚ್ಚಿಸುವುದು ಹೇಗೆ? ಇದಕ್ಕಾಗಿ ಗಮನ ಕೊಡುವ ನಮ್ಮ ಆಳುವ ವರ್ಗದವರು ಜನರ ಪ್ರೀತಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಪೋಲಿಸರಾದರೂ ಹೀಗೇ. ಪ್ರತಿಭಟನೆಗಳನ್ನು ಸುಲಭವಾಗಿ ಹತ್ತಿಕ್ಕುವುದು ಹೇಗೆ? 144 ಸೆಕ್ಷನ್ ಜಾರಿಮಾಡುವುದು, ಲಾಠಿಗಳಿಂದ ಹೊಡೆಯುವುದು, ಗುಂಡು ಹಾರಿಸಿ ಕೊಲ್ಲುವುದು. ಇದಷ್ಟೇ ಅವರಿಗೆ ತಿಳಿದಿರುವ ಸಮಸ್ಯೆ ಪರಿಹಾರದ ದಾರಿ!

ಕೇಂದ್ರ ಸರ್ಕಾರ ಜನತೆಯ ಮೇಲೆ ಸಿಎಎ ದಂತಹ ಸಂವಿಧಾನ ಬಾಹಿರ ಕ್ರಮವನ್ನು ಬಹುಮತದ ಬಲದಿಂದ ಹೇರಲು ಹೋರಾಟಾಗ ದೇಶ ಹೊತ್ತಿ ಉರಿಯಲಾರಂಭಿಸಿದೆ. ನೂರಾರು ಜನ ತಮ್ಮ ಅಮೂಲ್ಯ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇಂತಹ ಸಮಯದಲ್ಲಿ ಸಂಬಂಧ ಪಟ್ಟ ಎಲ್ಲ ವಿಭಾಗಗಳ ಜನರೊಂದಿಗೆ ಮಾತುಕತೆ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಮಾನವೀಯತೆಯನ್ನು ಕಳಕೊಂಡ ಕೇಂದ್ರ ಸರ್ಕಾರ ಹಠಕ್ಕೆ ಬಿದ್ದಿದೆ. ಇದರಿಂದಾಗಿ ಸರ್ಕಾರದ ದುರುದ್ದೇಶ ಹೆಚ್ಚು ಹೆಚ್ಚು ಬಯಲಾಗುತ್ತದೆ. ಹಾಗಾಗಿ ಸರ್ಕಾರಕ್ಕೆ ಜನರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ಅವರ ಪ್ರಶ್ನಿಸುವ ಹಕ್ಕನ್ನು, ಸಭೆ ನಡೆಸುವ ಅಧಿಕಾರವನ್ನು ಕಿತ್ತುಕೊಳ್ಳುವುದು ಮುಖ್ಯವಾಗಿದೆ. ಪುರಭವನ ಮುಂದೆ ಸಭೆ ಸೇರಲು, ಧಿಕ್ಕಾರ ಎನ್ನಲು ಯಾರಿಗೂ ಅವಕಾಶ ಕೊಡದಿರಲು ದೇಶವನ್ನು ಆಳುತ್ತಿರುವ ಸರ್ವಾಧಿಕಾರ ಮುಂದಾದಂತೆ ಕಾಣುತ್ತದೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದೇ ದೇಶದ್ರೋಹ ಎಂದು ಬಿಂಬಿಸಲಾಗುತ್ತದೆ ಈ ದೇಶಪ್ರೇಮಿ ಹೋರಾಟದಲ್ಲಿ ನಾವು ಗೆಲ್ಲಬೇಕಾಗಿದೆ. ನಮ್ಮ ಪ್ರಜಾಪ್ರಭುತ್ವ ಉಳಿಯಬೇಕಾಗಿದೆ. ಬಾರೀ ಬೆಲೆ ಕೊಟ್ಟು ಪಡೆದ ಸ್ವಾತಂತ್ರ್ಯವಿದು. ಶಾಂತಿಯುತ ಹೋರಾಟಗಳ ಮೂಲಕ ಈ ಸ್ವಾತಂತ್ರ್ಯವನ್ನು ಉಳಿಸಬೇಕಾಗಿದೆ. ಪುರಭವನ ಎದುರು ಇದುವರೆಗೆ ನಡೆದ ಹೋರಾಟಗಳೆಲ್ಲಾ ಶಾಂತಿಯುತವಾಗಿಯೇ ನಡೆದಿವೆ. ಬೇರೆ ಬೇರೆ ವಿಚಾರಧಾರೆಯ ವ್ಯಕ್ತಿಗಳು, ಸಂಘಟನೆಗಳು ಅಲ್ಲಿ ಸೇರಿದಾಗಲೂ ಶಾಂತಿಗೆ ಭಂಗ ಉಂಟಾಗಿಲ್ಲ. ಶಾಂತಿಯುತ ಹೋರಾಟಗಳ ಈ ಪರಂಪರೆಗೆ ಬಿಜೆಪಿ ಆಡಳಿತ ಚ್ಯುತಿ ತರದಿರಲಿ. ತಮ್ಮ ಹಠ ಸಾಧನೆಗೆ ಪೋಲಿಸರ ದುರ್ಬಳಕೆ ನಿಲ್ಲಲಿ. ರಾಜಕೀಯ ಒಡೆಯರ ತಪ್ಪು ಮಾತುಕೇಳಿ ನ್ಯಾಯಾಲದ ಚಾಟಿ ಏಟಿಗೆ ಪೋಲೀಸರು ಬಲಿಯಾಗದಿರಲಿ.

ಕಟ್ಟಡ ನಿರ್ಮಾಣ ಕಾರ್ಮಿಕರ ಸಾವು ತನಿಖೆಗೆ ಡಿವೈಎಫ್ಐ ಆಗ್ರಹ

ಮಂಗಳೂರಿನ ಬಂಟ್ಸ್ ಹಾಸ್ಟೆಲ್ ಬಳಿ ನಿರ್ಮಾಣ ಹಂತದ ಬಹು ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿಯ ಸಂದರ್ಭ ನಡೆದ ಅವಘಡದಲ್ಲಿ ಇಬ್ಬರು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದು, ಈ ಅವಘಡಕ್ಕೆ ಕಟ್ಟಡ ಮಾಲಕರು, ಗುತ್ತಿಗೆದಾರರು, ನಗರ ಪಾಲಿಕೆ ಅಧಿಕಾರಿಗಳ ಅಪವಿತ್ರ ಮೈತ್ರಿ ನೇರ ಕಾರಣವಾಗಿದೆ. ಈ ಕುರಿತು ಜಿಲ್ಲಾಡಳಿತ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ತರ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಪ್ರಾಣ ಕಳೆದು ಕೊಂಡ ಬಡ ವಲಸೆ ಕಾರ್ಮಿಕರ ಕುಟುಂಬಗಳಿಗೆ ನ್ಯಾಯಯುತ ಪರಿಹಾರ ಒದಗಿಸಬೇಕು ಎಂದು ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಆಗ್ರಹಿಸಿದ್ದಾರೆ.

ಮಂಗಳೂರಿನಲ್ಲಿ ಪದೇ ಪದೆ ನಿರ್ಮಾಣ ಕಾಮಗಾರಿ ಸ್ಥಳಗಳಲ್ಲಿ ಅವಘಡಗಳು ಸಂಭವಿಸುತ್ತಿವೆ. ಹತ್ತಾರು ಜನ ಕಟ್ಟಡ ಕಾರ್ಮಿಕರು ಇಂತಹ ದುರಂತಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಆದರೆ ಈ ಕುರಿತು ಸರಿಯಾದ ತನಿಖೆ ನಡೆಸದೆ ಬಹುತೇಕ ಪ್ರಕರಣಗಳನ್ನು ಮುಚ್ವಿಹಾಕಲಾಗಿದೆ. ಇಂತಹ ಅವಘಡಗಳು ಪದೇ ಪದೆ ಮರುಕಳಿಸಲು ಬಿಲ್ಡರ್‌ಗಳು, ಗುತ್ತಿಗೆದಾರರು, ಸರಕಾರಿ ಅಧಿಕಾರಿಗಳ ನಡುವಿನ ಅಪವಿತ್ರ ಮೈತ್ರಿ ಹಾಗೂ ನಿರ್ಲಜ್ಜ ಭ್ರಷ್ಟಾಚಾರ ನೇರ ಕಾರಣ. ಯಾವುದೇ ರೀತಿಯಲ್ಲಿ ನಿಯಮಗಳನ್ನು ಪಾಲಿಸದೆ, ಅಡ್ಡಾದಿಡ್ಡಿಯಾಗಿ ಬಹು ಮಹಡಿ ಕಟ್ಟಡಗಳನ್ನು ನಿರ್ಮಿಸುವುದು, ಅವೈಜ್ಞಾನಿಕವಾಗಿ ಭೂಮಿಯನ್ನು ಸಮತಟ್ಟುಗೊಳಿಸುವುದು ಇಂತಹ ದುರಂತಗಳಿಗೆ ಕಾರಣ. ನಗರ ಪಾಲಿಕೆ, ನಗರಾಭಿವೃಧಿ ಪ್ರಾಧಿಕಾರದ ಅಧಿಕಾರಿಗಳ ನೇರ ಶಾಮಿಲಾತಿಯಿಂದ ಇಂತಹ ಅಕ್ರಮಗಳು ನಡೆಯುತ್ತಿದ್ದು, ಈ ಅಕ್ರಮಗಳ ವಿರುದ್ಧ ಧ್ವನಿ ಎತ್ತಿದವರನ್ನು ಬಿಲ್ಡರ್ ಲಾಬಿ, ಅಧಿಕಾರಿಗಳು ಬಲವಂತವಾಗಿ ಬಾಯಿ ಮುಚ್ವಿಸುತ್ತಾರೆ. ಈ ರೀತಿಯ ಅವಘಡದಲ್ಲಿ ಪದೇ ಪದೆ ಹೊರ ಜಿಲ್ಲೆ, ಹೊರ ರಾಜ್ಯದ ಬಡಪಾಯಿ ವಲಸೆ ಕಟ್ಟಡ ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇಂತಹ ಬಡ ಕಾರ್ಮಿಕರ ಕುಟುಂಬಗಳ ಪರ ಯಾರೂ ಧ್ವನಿ ಎತ್ತುವವರಿಲ್ಲದೆ ಯಾವುದೇ ಪರಿಹಾರ ನೀಡದೆ ಪ್ರಕರಣವನ್ನು ಮುಚ್ವಿ ಹಾಕಲಾಗುತ್ತದೆ. ಪ್ರಾಣ ಕಳೆದು ಕೊಂಡ ಕಾರ್ಮಿಕರ ಕುಟುಂಬಗಳು ಬೀದಿಗೆ ಬೀಳುತ್ತವೆ.

ಇಂದು ಕರಂಗಲಪಾಡಿಯಲ್ಲಿ ನಡೆದ ಅವಘಡಲ್ಲಿಯೂ ಇಬ್ಬರು ವಲಸೆ ಕಾರ್ಮಿಕರು ಪ್ರಾಣ ಕಳೆದು ಕೊಂಡಿದ್ದಾರೆ. ಕಾಮಗಾರಿ ಸಂದರ್ಭ ಸ್ಥಳೀಯರು ನಿಯಮ ಉಲ್ಲಂಘನೆಯ ಕುರಿತು ದೂರು ನೀಡಿದ್ದರೂ, ಪ್ರಭಾವಿ ಬಿಲ್ಟರ್ ಗಳು ಅಧಿಕಾರಿಗಳ ಶಾಮಿಲಾತಿಯಿಂದ ದೂರುಗಳನ್ನು ಕಡೆಗಣಿಸಿದ್ದರು ಎಂಬ ಆರೋಪವಿದೆ. ಕರಂಗಲಪಾಡಿಯ ದುರಂತದ ಕುರಿತು ಜಿಲ್ಲಾಡಳಿತ ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಪ್ರಾಣ ಕಳೆದು ಕೊಂಡ ಕಾರ್ಮಿಕರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಪ್ರಕಟನೆಯಲ್ಲಿ ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

–ಸಂತೋಷ್ ಬಜಾಲ್



ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ ಕೇಂದ್ರ ಸರಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಿ ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿಯ ನೇತ್ರತ್ವದಲ್ಲಿ 26 ಫೆಬ್ರವರಿ 2020 ರಂದು ತೊಕ್ಕೋಟ್ಟು ಜಂಕ್ಷನ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಾಳ ಪಯಣ ಮುಗಿಸಿದ ಲಲಿತ ಕೃಷ್ಣ ಶೆಟ್ಟಿ



ಉಳ್ಳಾಲದ ಮಾಜಿ ಶಾಸಕರು, ಸ್ವಾತಂತ್ರ್ಯ ಹೋರಾಟಗಾರರು, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತ ನಾಯಕರು, ಕಮ್ಯುನಿಸ್ಟ್ ಚಳವಳಿಯ ಆರಂಭದ ದಶಕಗಳ ಪ್ರಭಾವಿ ಜನನಾಯಕರೂ ಆಗಿದ್ದ ಕಾಮ್ರೇಡ್ ಕೃಷ್ಣ ಶೆಟ್ಟರ ಮಡದಿ ಲಲಿತಾ ಶೆಟ್ಟಿಯವರು ತನ್ನ 91 ರ ಹರೆಯದಲ್ಲಿ ನಿಧನರಾದರು.

ಕಾಮ್ರೇಡ್ ಕೃಷ್ಣ ಶೆಟ್ಟಿ ಅಂದರೆ ಆ ದಿನಗಳಲ್ಲಿ ಬಹು ದೊಡ್ಡ ಹೆಸರು. ಒಂದೆಡೆ ಗೇಣಿದಾರ ರೈತರ ಸಂಘಟನೆ, ಮತ್ತೊಂದೆಡೆ ಸ್ವಾತಂತ್ರ್ಯ ಸಂಗ್ರಾಮ. ಪ್ರತಿಷ್ಠಿತ ಭೂಮಾಲಕ ಕುಟುಂಬದಲ್ಲಿ ಹುಟ್ಟಿ, ಫ್ಯೂಡಲ್ ಸಾಮಾಜಿಕ ಹಿನ್ನಲೆಯ ಶೆಟ್ಟರು ಆಕರ್ಷಿತರಾದದ್ದು ಮಾತ್ರ ಸಮತಾವಾದಿ ಸಿದ್ದಾಂತದ ಕಮ್ಯುನಿಸ್ಟ್ ಪಕ್ಷಕ್ಕೆ. ಅಜಾನುಬಾಹು ದೇಹ, ಅಪಾರ ಧೈರ್ಯ, ಆಕರ್ಷಕ ವ್ಯಕ್ತಿತ್ವ, ಪ್ರಭಾವಿ ಮನೆತನ ಹಿನ್ನಲೆಯ ಕೃಷ್ಣ ಶೆಟ್ಟರ ಆಗಮನ ಕಾರ್ಮಿಕರು, ಭೂಹೀನ ಗೇಣಿದಾರರನ್ನು ಸಂಘಟಿಸುತ್ತಾ, ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಶ್ರಮ ಪಡುತ್ತಿದ್ದ ಕಮ್ಯುನಿಸ್ಟ್ ಚಳವಳಿಗೆ ಬಹು ದೊಡ್ಡ ಬಲ ತಂದು ಕೊಟ್ಟಿತು. ಕೃಷ್ಣ ಶೆಟ್ಟರ ರೋಮಾಂಚನಕಾರಿ ನಾಯಕತ್ವದ ಕುರಿತು ದಂತ ಕತೆಗಳೆ ಇವೆ. ಗೇಣಿದಾರ ರೈತರ ಬೆಳೆಗಳನ್ನು ತೆರಿಗೆ ಬಾಕಿಯ ಹೆಸರಿನಲ್ಲಿ ಬಲವಂತವಾಗಿ ಕಟಾವು ಮಾಡುತ್ತಿದ್ದ ಭೂಮಾಲಕರಿಗೆ ಶೆಟ್ಟರು ಸಿಂಹಸ್ವಪ್ನರಾಗಿದ್ದರು. ಭೂಮಾಲಕರ ಗೂಂಡಾಗಳಿಗೆ ಎದುರಾಗಿ ರೈತ ಸಂಘದ ಕಮ್ಯುನಿಸ್ಟ್ ಗೇಣಿದಾರ ಕಾರ್ಯಕರ್ತರ ದಂಡು ಕಟ್ಟಿ ಗೇಣಿದಾರರ ಬೆಳೆಗಳನ್ನು ತಾನೆ ಮುಂದೆ ನಿಂತು ಕಟಾವು ಮಾಡಿಕೊಡುತ್ತಿದ್ದರು. ಅವರ ಹೋರಾಟದ ಖ್ಯಾತಿ ಎಷ್ಟಿತ್ತೆಂದರೆ ತೊಂದರೆ ಕೊಡುತ್ತಿದ್ದ ಭೂಮಾಲರಿಗೆ, ಗೇಣಿದಾರರ ಕೈಯಲ್ಲಿ ಮುಚ್ಚಿದ ಲಕೋಟೆಯ ಒಳಗಡೆ ಪತ್ರ ಇಟ್ಟು ಕಳುಹಿಸುತ್ತಿದ್ದರಂತೆ, ಆ ಪತ್ರ ಬಿಡಿಸಿ ಓದಿದ ಭೂಮಾಲಕ ಮರು ಮಾತಿಲ್ಲದೆ ಗೇಣಿದಾರನ ಬೆಳೆಗಳನ್ನು ಬಿಟ್ಟು ಕೊಡುತ್ತಿದ್ದರಂತೆ. ಇಂತಹ ದೀರೋದ್ದಾತ ಹೋರಾಟಗಳೆ ಮುಂದೆ ತುಳುನಾಡಿನಲ್ಲಿ ಭೂ ಸುಧಾರಣೆ ಪರಿಣಾಮಕಾರಿ ಅನುಷ್ಟಾನಕ್ಕೆ ಕಾರಣವಾಯಿತು.

ಕಾಮ್ರೇಡ್ ಕೃಷ್ಣ ಶೆಟ್ಟರ ಇಂತಹ ಕ್ರಾಂತಿಕಾರಿ ಹೋರಾಟಗಳಿಂದ ಪೊಲೀಸರ ಬಂಧನ, ಭೂಗತ ಜೀವನ ಅವರ ಬದುಕಿನಲ್ಲಿ ಸಾಮಾನ್ಯವಾಗಿತ್ತು. ಇದು ನಾಲ್ಕು ಮಕ್ಕಳನ್ನು ಹೊಂದಿದ್ದ ಕುಟುಂಬದ ಪಾಲಿಗೆ ಹಲವು ಕಷ್ಟ ನಷ್ಟಗಳನ್ನು ಸಹಜವಾಗಿ ತಂದೊಡ್ಡಿತ್ತು. ಇಂತಹ ಸವಾಲಿನ, ಕಡು ಕಷ್ಟದ ಸಂದರ್ಭದಲ್ಲೆಲ್ಲ ಕುಟುಂಬವನ್ನು ಸಹನೆಯಿಂದ ಕಾದದ್ದು, ಮಕ್ಕಳ ಬದುಕು ರೂಪಿಸಿದ್ದು ಕೃಷ್ಣ ಶೆಟ್ಟರ ಪ್ರೀತಿಯ ಮಡದಿ ಲಲಿತಾ ಶೆಟ್ಟಿ. ಕೃಷ್ಣ ಶೆಟ್ಟರ ಚಳವಳಿಯ ಬದುಕಿನ ಯಶಸ್ಸಿನ ಹಿಂದೆ ಲಲಿತಾ ಶೆಟ್ಟಿಯವರ ಬಹು ದೊಡ್ಡ ಕೊಡುಗೆಯಿದೆ. ಓರ್ವ ಪ್ರಖ್ಯಾತ ಕಮ್ಯುನಿಸ್ಟ್ ಜನ ನಾಯಕನ ಜೊತೆ ಬಾಳು ರೂಪಿಸುವುದು ಎಂದರೆ ಕಲ್ಲು ಮುಳ್ಳಿನ ಹಾದಿಯಲ್ಲಿ ನಡೆದಂತೆ, ಅದರಲ್ಲೂ ಆ ಕಾಲದ ಕಮ್ಯುನಿಸ್ಟ್ ನಾಯಕರದ್ದು ಜೈಲು, ಭೂಗತ ಜೀವನದ ಬದುಕು. ಅಂತಹ ಕಷ್ಟದ, ಸವಾಲಿನ ಬದುಕಿಗೆ ಪ್ರತಿಷ್ಟಿತ ದೆಪ್ಪುಣಿ ಗುತ್ತು ಮನೆತನದಿಂದ ಬಂದ ಹೆಣ್ಣು ಮಗಳು ಹೆಗಲು ಕೊಡುವುದು ತಮಾಷೆಯ ಮಾತಲ್ಲ. ಅಂತಹ ಮಹಾ ಮಾತೆ ಲಲಿತಾ ಶೆಟ್ಟಿ.

ಈಗ 91 ವರ್ಷಗಳ ತುಂಬು ಜೀವನ ನಡೆಸಿದ ಲಲಿತಾ ಶೆಟ್ಟಿ ಯಶಸ್ವಿಯಾಗಿ ತಮ್ಮ ಬಾಳ ಪಯಣ ಮುಗಿಸಿದ್ದಾರೆ. ಮಕ್ಕಳು, ಮೊಮ್ಮಕ್ಕಳು ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದಾರೆ. ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ. ಅಂದಿನ ಭೂಮಾಲಕ ಶೋಷಕ ವ್ಯವಸ್ಥೆ ಕೃಷ್ಣ ಶೆಟ್ಟರಂತಹ ಧೀಮಂತರ ಹೋರಾಟದಿಂದಾಗಿ ಇಂದಿಲ್ಲ. ಭೂಮಿ ಪಡೆದ ಗೇಣಿದಾರರ ಇಂದಿನ ತಲೆಮಾರಿಗೆ ಆ ಕಾಲದ ಶೋಷಣೆಯ ಅರಿವೂ ಇಲ್ಲ. ಕೃಷ್ಣ ಶೆಟ್ಟರು ಯಾರೆಂದೂ ತೀಳಿದಿಲ್ಲ. ಬ್ರಿಟಿಷರ ಕ್ರೌರ್ಯ, ಊಳಿಗಮಾನ್ಯ ವ್ಯವಸ್ಥೆಯ ದಬ್ಬಾಳಿಕೆ, ಅದರ ಎದುರಾಗಿ ನಡೆದ ಕ್ರಾಂತಿಕಾರಿ ಹೋರಾಟಗಳು, ಈ ಕಾಲದ ಪಲ್ಲಟ, ಈಗಿನ ಮತೀಯ ರಾಜಕಾರಣಕ್ಕೆಲ್ಲ ಸಾಕ್ಷಿ ಎಂಬಂತೆ ಉದ್ದಕ್ಕೂ ಮೌನವಾಗಿ ಬದುಕಿದ ಲಲಿತ ಶೆಟ್ಟಿಯವರ ಅಗಲಿಕೆ ಒಂದು ಇತಿಹಾಸದ ಪುಟದ ಮುಕ್ತಾಯ. ಇಂದು ನಿರ್ಜೀವವಾಗಿ ಮಲಗಿದ ಅವರ ಮುಖದಲ್ಲಿ ಅದೇ ಪ್ರಶಾಂತ ತಾಯ್ತನದ ಭಾವ ಎದ್ದು ಕಾಣುತ್ತಿತ್ತು. ಅವರ ಪಾರ್ಥಿವ ಶರೀರದ ಮುಂದೆ ನಿಂತು ಕೈ ಮುಗಿದಾಗ ಕಾಮ್ರೇಡ್ ಕೃಷ್ಣ ಶೆಟ್ಟರ ಗೇಣಿದಾರರ ಪರವಾದ, ಬ್ರಿಟಿಷರ ವಿರುದ್ದದ ಆ ಜಬರ್ದಸ್ತ್ ಹೋರಾಟದ ದಿನಗಳು ಕಣ್ಣ ಮುಂದೆ ಹಾದು ಹೋದಂತಾಯ್ತು. ಕಾಲ ಚಕ್ರ ತಿರುಗುತ್ತಲೇ ಇರುತ್ತದೆ. ಇತಿಹಾಸದ ಪುಸ್ತಕಕ್ಕೆ ಕೊನೆಯೆಂಬುದಿಲ್ಲ. ಒಂದು ಅಧ್ಯಾಯದ ಕೊನೆ, ಮತ್ತೊಂದು ಅಧ್ಯಾಯದ ಆರಂಭ. ಅಲ್ಲಿ ಮತ್ತೆ ಕಾಮ್ರೇಡ್ ಕೃಷ್ಣ ಶೆಟ್ಟರು, ಲಲಿತಾ ಶೆಟ್ಟಿಯವರು ಹುಟ್ಟುತ್ತಲೇ ಇರುತ್ತಾರೆ.

ಲಾಲ್ ಸಲಾಂ ಅಮ್ಮನಂತಹ ಲಲಿತಾ ಶೆಟ್ಟಿಯವರಿಗೆ.

–ಮುನೀರ್ ಕಾಟಿಪಳ್ಳ



ಗುತ್ತಿಗೆ ಮುನಿಸಿಪಲ್ ಕಾರ್ಮಿಕರ ಕಾಯಮಾತಿ, ನೇರಪಾವತಿಗೆ ಆಗ್ರಹ– ಕಾರ್ಮಿಕರ ಪ್ರತಿಭಟನೆ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಗುತ್ತಿಗೆ ಮುನಿಸಿಪಲ್ ಕಾರ್ಮಿಕರಾದ ಪೌರಕಾರ್ಮಿಕರು, ವಾಟರ್ ಮನ್‌ಗಳು, ಡ್ರೈವರ್‌ಗಳು, ಕಸ ಸಂಗ್ರಹ ಕಾರ್ಮಿಕರು, ಯುಜಿಡಿ ಕಾರ್ಮಿಕರು, ಅಕೌಂಟೆಂಟ್‌ಗಳು, ಎಲೆಕ್ಟ್ರೀಷಿಯನ್‌ಗಳು, ಮತ್ತಿತರೆ ನೌಕರರ ಸೇವೆಗಳನ್ನು ಹಂತಹಂತವಾಗಿ ಕಾಯಂಗೊಳಿಸಬೇಕು. ಅದುವರೆಗೂ ಸುಪ್ರೀಂಕೋರ್ಟಿನ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯು ನೇತೃತ್ವದಲ್ಲಿ ದಿನಾಂಕ 26–02–2020ರಂದು ಬೆಳಗ್ಗೆ ನೂರಾರು ಮುನಿಸಿಪಲ್ ಕಾರ್ಮಿಕರು ಬೆಂಗಳೂರು ನಗರದ ಕೆಂಪೇಗೌಡ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನ ವನದವರೆಗೂ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದ ಬಳಿ ನಡೆದ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಸಂಘ ರಾಜ್ಯಾಧ್ಯಕ್ಷ ಹರೀಶ್ ನಾಯ್ಕ್, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಹಾಸನದ ಪ್ರಕಾಶ್, ಬೆಳಗಾವಿಯ ಬಸವರಾಜ್ ಕಾಂಬ್ಳೆ, ವಿಜಯಪುರದ ಲಕ್ಷ್ಮಣ್ ಹಂದ್ರಾಳ್, ತುಮಕೂರಿನ ಎನ್.ಕೆ.ಸುಬ್ರಮಣ್ಯ, ಉತ್ತರ ಕನ್ನಡದ ಸ್ಯಾಮ್‌ಸನ್ ಮತ್ತಿತರರು ಮಾತನಾಡಿದರು.

ಗುತ್ತಿಗೆ ಮುನಿಸಿಪಲ್ ಕಾರ್ಮಿಕರಿಗೆ ದಿನದಲ್ಲಿ ಎಂಟು ಗಂಟೆ ದುಡಿಮೆ, ಹೆಚ್ಚುವರಿ ದುಡಿಮೆಗೆ ಹೆಚ್ಚುವರಿ ವೇತನ, ವಾರದಲ್ಲಿ ಒಂದು ಸಂಬಳಸಹಿತ ಪೂರ್ಣ ರಜೆ, ಅನಾರೋಗ್ಯ ರಜೆ, ಹಬ್ಬದ ರಜೆ, ಹಾಗೂ ಗಳಿಕೆಯ ರಜೆಗಳನ್ನು ಕಾನೂನಿನಂತೆ ನೀಡಬೇಕು. ಇವ್ಯಾವುದನ್ನೂ ನೀಡದೆ ಕಾರ್ಮಿಕರನ್ನು ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮುನಿಸಿಪಲ್ ಕಾರ್ಮಿಕರಿಗೆ ತಾರತಮ್ಯ ಇಲ್ಲದೆ ಎಲ್ಲರಿಗೂ ಬೆಳಗಿನ ಉಪಾಹಾರ ನೀಡಬೇಕು. ಸಮವಸ್ತ್ರ ಮತ್ತು ಸುರಕ್ಷತಾ ಸಲಕರಣೆಗಳನ್ನು ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಎಲ್ಲಾ ಗುತ್ತಿಗೆ ಕಾರ್ಮಿಕರ ಪಿಎಫ್ ಮತ್ತು ಇಎಸ್‌ಐ ನ್ನು ನಗಸಭೆಯ ಖಾತೆಯಿಂದಲೇ ಜಮಾ ಆಗಬೇಕೆಂದು ಆಗ್ರಹಿಸಿದರು.

ಸಮಸ್ಯೆಗಳ ಪರಿಹಾರಕ್ಕೆ ಜಂಟಿ ಸಭೆ ಕರೆಯಲಾಗುವುದು – ಕಾವೇರಿ

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಪೌರಾಡಳಿತ ನಿರ್ದೇಶಕಿ ಶ್ರೀಮತಿ ಕಾವೇರಿ ಅವರು ಸಮಸ್ಯೆಗಳನ್ನು ಸಾವಧಾನದಿಂದ ಆಲಿಸಿದರು. ಬಳ್ಳಾರಿ ಜಿಲ್ಲೆಯ ವಾಟರ್ ಮನ್‌ಗಳಿಗೆ ಎರಡು ವರ್ಷದ ಸಂಬಳ ನೀಡದೇ ಇರುವುದು, ಹಾಗೆ ರಾಮದುರ್ಗದ ಕಾರ್ಮಿಕರಿಗೆ ಒಂದು ವರ್ಷದಿಂದ ಸಂಬಳ ನಿಡದೇ ಇರುವುದು, ಕೆಲಸ ಸ್ಥಳದಲ್ಲೇ ಮೃತನಾದ ತುಮಕೂರಿನ ನರಸಿಂಹಯ್ಯ ಹಾಗೂ ಚಳ್ಳಕೆರೆ ಲಕ್ಷ್ಮೀಪುತ್ರ ಅವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಬೇಕು. ಹಾಗೂ ಎಲ್ಲಾ ಪೌರ ಕಾರ್ಮಿಕರನ್ನು ಕಾಯಂಗೊಳಿಸಬೇಕು ಎಂಬ ಹಕ್ಕೊತ್ತಾಯಗಳ ಸುರಿಮಳೆಯನ್ನು ಪೌರಾಡಳಿತ ನಿರ್ದೇಶಕರ ಮುಂದೆ ಪ್ರತಿಭಟನಾಕಾರರ ಮಾಡಿದರು.

ಸಾವಧಾನದಿಂದ ಆಲಿಸಿದ ಅವರು ಕೆಲವು ಪ್ರಶ್ನೆಗಳ ನೀತಿ ನಿರೂಪಕ ಪ್ರಶ್ನೆಗಳಾಗಿದ್ದ ಅವುಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿ, ಸಂಬಳ ನೀಡದಿರುವ ಹಾಗೂ ಕಾನೂನು ಜಾರಿಯ ವಿಷಯಗಳ ಸಂಬಂಧ ಸಂಘದೊಂದಿಗೆ ಸಭೆ ನಡೆಸುವುದಾಗಿ ಆಶ್ವಾಸನೆ ನೀಡಿದರು. ಈ ಆಶ್ವಾಸನೆಯೊಂದಿಗೆ ಪ್ರತಿಭಟನೆ ಮುಕ್ತಾಯವಾಯಿತು.



ಸುರ್ಕುಂದ ಪ್ರದೇಶದಲ್ಲಿ ಕೃಷಿ ಕೂಲಿಕಾರರ ಸಭೆ

ಬೈಂದೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಸೂರ್ಕುಂದ ಪ್ರದೇಶದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ಸಭೆ ಯಶಸ್ವಿಯಾಗಿ ಜರಗಿತು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ವೆಂಕಟೇಶ ಕೋಣಿ ಹಾಗೂ ನಾಗರತ್ನ ನಾಡ ಸಭೆಯನ್ನುದ್ದೇಶಿಸಿ ಮಾತನಾಡಿ, ಕೂಲಿಕಾರರಾದ ನಾವು, ನರೇಗಾ ಕೂಲಿ ಕೆಲಸ ಮಾಡುವುದರಿಂದ ಊರಿನ ಅಭಿವೃದ್ಧಿ ಜತೆಯಲ್ಲಿ ಊರಿಗೊಂದು ಆಸ್ತಿ, ಕೈಗೊಂದು ಕೆಲಸ ಸಿಕ್ಕಿದಂತಾಗುವುದು. ಆದ್ದರಿಂದ ಕೇಂದ್ರ ಸರಕಾರದ ಕಾನೂನು ಬದ್ಧ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರಾದ ನಾವೆಲ್ಲರು ಸಕ್ರೀಯವಾಗಿ ಭಾಗ ವಹಿಸೋಣ ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಬೈಂದೂರು ಗ್ರಾಮದ ಕೆರೆಯ ಹೂಳೆತ್ತುವ ಅಭಿವೃದ್ಧಿ ಕಾಮಗಾರಿ ಕೆಲಸವನ್ನು ಆರಂಭಿಸುವುದಕ್ಕೆ ಸರ್ವಾನುಮತದ ತೀರ್ಮಾನ ಮಾಡಲಾಯಿತು. ಇಲ್ಲಿಯ ಪ್ರದೇಶ ಸಮಿತಿಗೆ ಶಾರದ ರಾಜುಅಧ್ಯಕ್ಷರಾಗಿ, ಶೈಲಜ ರಾಜೇಶ್ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.

ಆರ್ಥಿಕ ಚೇತರಿಕೆಗೆ ಸ್ಪಂದಿಸದ ಹಾಗೂ ಜನತೆಯ ಸಂಕಷ್ಟವನ್ನು ಹೆಚ್ಚಿಸಿದ ರಾಜ್ಯ ಬಜೆಟ್: ಸಿಪಿಐ (ಎಂ) ಖಂಡನೆ

ರಾಜ್ಯ ಸರ್ಕಾರದ 2020–21 ರ ಸಾಲಿನ ಬಜೆಟ್ ರಾಜ್ಯವು ತೀವ್ರ ಆರ್ಥಿಕ ಹಿನ್ನಡೆ ಅನುಭವಿಸುತ್ತಿರುವುದನ್ನು ತೋರಿದೆ. ರಾಜ್ಯದ ಆಂತರಿಕ ಉತ್ಪನ್ನದ ಅಭಿವೃದ್ಧಿ ದರವು 7.8 ರಿಂದ 6.8ಕ್ಕೆ ಕುಸಿದಿದೆ. ಸತತ ಬರ ಹಾಗು ನೆರೆಗೆ ರಾಜ್ಯದ ಜನತೆ ತುತ್ತಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ ರಾಜ್ಯ ಬಜೆಟ್, ಆರ್ಥಿಕ ಹಿನ್ನಡೆಯಿಂದ ಚೇತರಿಕೆಗಾಗಲಿ ಅಥವಾ ಜನತೆಯ ಸಂಕಷ್ಟ ನಿವಾರಣೆಗಾಗಲೀ ಸ್ಪಂದಿಸುವಲ್ಲಿ ವಿಫಲವಾಗಿದೆ ಮಾತ್ರವಲ್ಲಾ, ಬದಲಿಗೆ ಸಂಕಷ್ಟದಲ್ಲಿರುವ ಜನತೆಯ ಮೇಲೆ ಮತ್ತಷ್ಟು ಹೊರೆಯನ್ನು ಹೇರಿದೆಯೆಂದು ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ರಾಜ್ಯ ಸರಕಾರದ ಈ ಜನ ವಿರೋಧಿ ನಡೆಯನ್ನು ಬಲವಾಗಿ ಖಂಡಿಸಿದೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಬೇಕಾದ 8887 ಕೋಟಿ ರೂಗಳ ಅನುದಾನವನ್ನು ಮತ್ತು 11 ಸಾವಿರ ಕೋಟಿ ರೂಗಳ ಜಿ.ಎಸ್.ಟಿ. ಯನ್ನು ಕಡಿತ ಮಾಡಿದೆ. ಕೇಂದ್ರದಿಂದ ಸಿಗಬೇಕಿದ್ದ 3 ಸಾವಿರ ಕೋಟಿ ರೂಗಳ ಜಿ.ಎಸ್.ಟಿ. ಪರಿಹಾರವು ಕಡಿತವಾಗಿದೆ.

ರಾಜ್ಯ ಸರ್ಕಾರದ 35169 ಕೋಟಿ ರೂಗಳ ನೆರೆ ಪರಿಹಾರ ಕೋರಿಕೆಗೆ ಕೇಂದ್ರ ಸರ್ಕಾರವು ಕೇವಲ 1869.85 ಕೋಟಿ ರೂಗಳ ಪರಿಹಾರ ನೀಡಿರುವ ಕೇಂದ್ರದ ಬಿಜೆಪಿಯ ಸರ್ಕಾರವು, ರಾಜ್ಯವನ್ನು ಮತ್ತಷ್ಟು ಆರ್ಥಿಕ ಸಂಪನ್ಮೂಲಗಳ ಕೊರತೆಗೆ ದೂಡಿದೆ.

ಕೇಂದ್ರ ಮತ್ತು ರಾಜ್ಯ ಎರಡರಲ್ಲೂ ಬಿಜೆಪಿಯ ಸರ್ಕಾರ ಇದ್ದರೆ ರಾಜ್ಯದ ಜನತೆಯ ಸಂಕಷ್ಟಕ್ಕೆ ಪರಿಹಾರ ಸಿಗಲಿದೆ ಎಂಬ ಬಿಜೆಪಿಯ ವಾದವನ್ನು ಎರಡೂ ಸರ್ಕಾರಗಳೂ ಸೇರಿ ಅಣಕಿಸಿವೆ.

ಹಣಕಾಸು ಆಯೋಗದಂತೆ ಕೇಂದ್ರ ತೆರಿಗೆಯಲ್ಲಿನ ರಾಜ್ಯದ ಪಾಲು 11215 ಕೋಟಿ ರೂಗಳು ಕಡಿತವಾಗಲಿದೆ ಎಂಬ ಅಂಶವು ರಾಜ್ಯವನ್ನು ಮತ್ತಷ್ಟು ಆರ್ಥಿಕ ಸಂಪನ್ಮೂಲಗಳ ಕೊರತೆಗೆ ದೂಡಲಿದೆ. 4759 ರೂಗಳ ಕೊರತೆ ಬಜೆಟ್ ಮಂಡಿಸಿರುವ ಬಿಜೆಪಿ ಸರಕಾರವು 3,68,692 ಕೋಟಿ ರೂಗಳ ಒಟ್ಟು ಸಾಲದ ಹೊಣೆಗಾರಿಕೆಯನ್ನು ರಾಜ್ಯದ ಮೇಲೆ ಹೊರಿಸಿದೆ.

ಕೇಂದ್ರ ಸರಕಾರವನ್ನು ಎದುರಿಸಲಾಗದೆ, ರಾಜ್ಯದ ಜನತೆಯ ಮೇಲೆ ಮತ್ತಷ್ಟು ಬೆಲೆ ಏರಿಕೆಯ ಹೊರೆಯನ್ನು ಹೇರಿದೆ. ಅದಾಗಲೇ ಕೇಂದ್ರ ಸರಕಾರ ಗ್ಯಾಸ್ ಬೆಲೆಯನ್ನು ವಿಪರೀತವಾಗಿ ಹೆಚ್ಚಿಸಿದೆ. ರಾಜ್ಯ ಸರಕಾರವೂ ಬಜೆಟ್ ಪೂರ್ವದಲ್ಲಿಯೇ ಬಸ್ ಪ್ರಯಾಣದರ ಹಾಗೂ ವಿದ್ಯುತ್ ದರಗಳನ್ನು ಹೆಚ್ಚಿಸಿದೆ. ಇದೀಗ ಈ ಬಜೆಟ್ ನಲ್ಲಿ ಮತ್ತೆ ಪೆಟ್ರೋಲ್ ಬೆಲೆಯನ್ನು 1.60 ರೂ ಹಾಗು ಡೀಸಲ್ ಬೆಲೆಯನ್ನು 1.59 ರೂ ಹೆಚ್ಚಿಸಿದೆ. ಈ ಎಲ್ಲವುಗಳಿಂದಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಮತ್ತಷ್ಟು ಗಗನಮುಖಿಯಾಗಲಿವೆ.

ಪಡಿತರ ಚೀಟಿಗೆ ನೀಡಲಾಗುತ್ತಿದ್ದ ಅಕ್ಕಿಯನ್ನು ತಲಾ ವ್ಯಕ್ತಿಗೆ ಎರಡು ಕೇಜಿಯಷ್ಟು ಕಡಿತಗೊಳಿಸಿ ಮುಕ್ತ ಮಾರುಕಟ್ಟೆಯ ಕಡೆ ದೂಡಿದೆ ಮತ್ತು ಅದಕ್ಕಾಗಿ ನೀಡಲಾಗುತ್ತಿದ್ದ ಬಜೆಟ್ ಅನುದಾನವನ್ನು 1,234 ಕೋಟಿ ರೂ ಕಡಿತಗೊಳಿಸಿದೆ.

ಇದರೊಂದಿಗೆ ಕೊರತೆ ಬಜೆಟ್ ಹಾಗೂ ಸುಮಾರು 53 ಸಾವಿರ ಕೋಟಿ ರೂಪಾಯಿಗಳ ಹೊಸ ಸಾಲದ ಭಾರವನ್ನು ಜನತೆ ಭರಿಸಬೇಕಾಗಿದೆ.

ರಾಜ್ಯದಲ್ಲಿ ತಲಾ ಆದಾಯ ಪ್ರತಿ ದಿನ 35–40 ರೂಗಳಿಗಿಂತ ಕಡಿಮೆ ಇರುವ ಕೋಟ್ಯಾಂತರ, ಕೃಷಿಕೂಲಿಕಾರರು, ಬಡ ರೈತರು, ಕಾರ್ಮಿಕ ಕುಟುಂಬಗಳ ಆದಾಯವನ್ನು ಹೆಚ್ಚಿಸುವ ಯಾವುದೇ ಕ್ರಮಕೈಗೊಳ್ಳದ ಬಜೆಟ್, ಸಂಕಟಗಳ ಹೊರೆಯ ಸರಮಾಲೆಯನ್ನು ಹೇರಲು ಮಾತ್ರವೇ ಸಫಲವಾಗಿದೆ. ಅದೇ ವೇಳೆ, ಸೇವಾ ವಲಯಕ್ಕೆ ನೀಡಿರುವ ತೆರಿಗೆ ರಿಯಾಯಿತಿಯನ್ನು ರದ್ದುಪಡಿಸಲಾಗದ ಅಸಹಾಯಕತೆಯನ್ನು ತೋರಿದೆ.

ಜನತೆ ಪರಿಹಾರಕ್ಕಾಗಿ ಹಾತೊರೆಯುತ್ತಿರುವಾಗ ನೆರೆ ಪರಿಹಾರಕ್ಕೆ ಮೀಸಲಿಟ್ಟ 6108 ಕೋಟಿ ರೂಗಳಲ್ಲಿ ಕೇವಲ 3423 ಕೋಟಿ ರೂಗಳನ್ನು ಮಾತ್ರ ಇದುವರೆಗೆ ಖರ್ಚು ಮಾಡಿರುವ ಅಂಶವು ರಾಜ್ಯ ಬಿಜೆಪಿಯ ಅದಕ್ಷ ಆಡಳಿತವನ್ನು ಬಹಿರಂಗ ಪಡಿಸಿದೆ. ಒಟ್ಟಾರೆ ಕೇಂದ್ರ ಹಾಗು ರಾಜ್ಯ ಬಿಜೆಪಿಯ ಸರ್ಕಾರಗಳು ರಾಜ್ಯವನ್ನು ದಿವಾಳಿಯತ್ತ ದೂಡುತ್ತಿವೆ ಎಂಬದನ್ನು ಬಜೆಟ್ ತೋರುತ್ತದೆ.

ಕೃಷಿ ಕೂಲಿಕಾರರು, ದಲಿತರು ಬಡರೈತರು ಕೃಷಿ ಭೂಮಿಗಾಗಿ ಬಾಯಿ, ಬಾಯಿ ಬಿಡುತ್ತಿರುವಾಗ, ಲೂಟಿಕೋರ ಬಹು ರಾಷ್ಟ್ರೀಯ ಕಂಪನಿಗಳ ಕಂಪನಿ ಕೃಷಿಗೆ ನಮ್ಮ ರೈತಾಪಿ ಕೃಷಿಯನ್ನು ತೆರೆಯುವುದನ್ನು ಮುಂದುವರೆಸಿದೆ. ಇನ್ನೂ 500 ರೈತ ಉತ್ಪಾದಕರ ಕಂಪನಿಗಳ ರಚನೆಗೆ ಕ್ರಮವಹಿಸಿದೆ. ರಾಜ್ಯವನ್ನು ಆರ್ಥಿಕ ಬಿಕ್ಕಟ್ಟು ಬಾಧಿಸುತ್ತಿರುವಾಗ ಮತ್ತು ಅದಾಗಲೇ ಪಡೆದ ಕೃಷಿ ಭೂಮಿಯಲ್ಲಿ ಕೈಗಾರಿಕೆಗಳು ನಿರ್ಮಾಣಗೊಳ್ಳದಿರುವಾಗ, ಕೃಷಿ ಭೂಮಿಯನ್ನು ಅತ್ಯಂತ ವೇಗವಾಗಿ ಕಂಪನಿಗಳಿಗೆ ವರ್ಗಾಯಿಸಲು ಭೂ ಸುಧಾರಣಾ ಕಾಯ್ದೆಗೆ ತಿದ್ದಪಡಿ ಕ್ರಮವಹಿಸಲಾಗಿದೆ.

ರಾಜ್ಯದಾದ್ಯಂತ ನಗರ ವ್ಯಾಪ್ತಿಯ ಲಕ್ಷಾಂತರ ಬಡ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ನಗರ ಪ್ರದೇಶದ ಭೂಕಬಳಿಕೆ ನಿಷೇಧದ ಹೆಸರಲ್ಲಿ ಸರಕಾರಿ ಭೂಮಿ ಸಂರಕ್ಷಣಾ ಸಮಿತಿ ರಚನೆಗೆ ಕ್ರಮವಹಿಸಿದೆ

ರೈತರು, ಕಾರ್ಮಿಕರು, ವಿಧ್ಯಾರ್ಥಿ ಯುವಜನರ ದಲಿತರ, ಅಲ್ಪ ಸಂಖ್ಯಾತರ ಬೇಡಿಕೆಗಳಿಗೆ ಸ್ಪಂದಿಸದ ರಾಜ್ಯ ಬಜೆಟ್ ತನ್ನ ನವ ಉದಾರವಾದಿ ಆರ್ಥಿಕ ನೀತಿಗಳ ಭಾಗವಾಗಿ ಬಂದರುಗಳ, ಮೆಟ್ರೋ, ಆರೋಗ್ಯ ಯೋಜನೆ, ಮುಂತಾದವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಹೆಸರಿನಲ್ಲಿ ಖಾಸಗೀಕರಣಕ್ಕೆ ನಾಂದಿಯಾಡಿದೆ.

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ಶೇ 27 ರಷ್ಟಿರುವ ಅವರ ಜನಸಂಖ್ಯೆಗನುಗುಣವಾಗಿ ನೀಡದೇ ಕಳೆದ ಬಜೆಟ್ನಲ್ಲಿ ನೀಡಿದ್ದ ಹಣಕ್ಕಿಂತ ಸುಮಾರು 3,000 ಕೋಟಿ ಕಡಿಮೆ ಹಣ ನೀಡಿದೆ. ದಲಿತರು ಮತ್ತು ದಲಿತ ಮಹಿಳೆಯರ ಸಾಲಮನ್ನಾ ಹಾಗೂ ದೇವದಾಸಿ ಮಹಿಳೆಯರ ನೆರವು ಘೋಷಿಸಿಲ್ಲ.

ಅದೇ ರೀತಿ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ನೀಡಲಾಗುತ್ತಿದ್ದ ಅನುದಾನವನ್ನು ಕಡಿತಗೊಳಿಸಿದೆ.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡಿಲ್ಲ. ಬೀದಿ ಬದಿ ವ್ಯಾಪಾರಿಗಳ ಕಾಯಕ ನಿಧಿ ಯೋಜನೆ ರದ್ದುಪಡಿಸಿದೆ. ಉದ್ಯೋಗ ಸೃಷ್ಟಿಗೆ ಯಾವುದೆ ಕ್ರಮಗಳಿಲ್ಲ. ಬದಲಾಗಿ ಆರ್.ಎಸ್.ಎಸ್ ಕಾರ್ಯಕರ್ತರಿಗೆ ಸರ್ಕಾರದ ಹಣ ನೀಡಲು ಜನ ಸೇವಕ ಯೋಜನೆಯನ್ನು ಬೆಂಗಳೂರಿನ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಮತ್ತು ಇತರೆ ಮಹಾನಗರ ಪಾಲಿಕೆಗಳಿಗೆ ವಿಸ್ತರಿಸಲು ಬಜೆಟ್ ಮುಂದಾಗಿದೆ.

ಆತ್ಮಹತ್ಯೆಗಳನ್ನು ತಡೆಯಲು ರೈತರ ಹಾಗೂ ಕೃಷಿಕೂಲಿಕಾರರ ಸಾಲ ಮನ್ನಾ ಬದಲು, ಕೇವಲ ರೈತರ ಸಾಲದ ಬಡ್ಡಿ ಸುಸ್ತಿ ಬಡ್ಡಿ ಮನ್ನಾಕೆ ಮುಂದಾಗಿದೆ. ಗ್ರಾಮೀಣ ಜನತೆಯನ್ನು ಸಾಲಬಾಧೆಯಿಂದ ಮುಕ್ತಗೊಳಿಸಲು, ಕೂಲಿ ಕೆಲಸದ ದಿನಗಳ ವಿಸ್ಥರಣೆಗೆ ಮತ್ತು ಕನಿಷ್ಠ ಕೂಲಿಯ ಹೆಚ್ಚಳಕ್ಕೆ ಮತ್ತ್ರ ಕೃಷಿ ಉತ್ಪನ್ನಗಳ ವೈಜ್ಞಾನಿಕ ಬೆಲೆ ನಿಗದಿ ಮತ್ತು ಅದನ್ನು ಖಾತರಿಯಾಗಿ ದೊರೆಯಿಸುವ ಕ್ರಮದ ಬದಲು, ತನ್ನ ಹಿಂದಿನ ಕಿಸಾನ್ ಸಮ್ಮಾನ್ ಯೋಜನೆಯನ್ನೆ ರಾಜ್ಯ ಬಜೆಟ್ ಪುನರುಚ್ಚರಿಸಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಟೀಕಿಸಿದೆ.

ಕೂಡಲೇ ಬೆಲೆ ಏರಿಕೆಯ ಹೊರೆಯನ್ನು ಹಿಂಪಡೆಯಲು, ಹಾಗೂ ಕಂಪನಿ ಕೃಷಿಯ ಧಾಳಿಯಿಂದ ರೈತರ ಕೃಷಿ ಭೂಮಿ ಉಳಿಸಲು ಮತ್ತು ದಲಿತರ ಜನಸಂಖ್ಯೆಗನುಗುಣವಾಗಿ ಅನುದಾನವನ್ನು, ಬಡವರ ತಲಾ ಆದಾಯ ಹೆಚ್ಚಳಕ್ಕೆ ಅಗತ್ಯ ಕ್ರಮವಹಿಸಲು ಸಿಪಿಐಎಂ ಒತ್ತಾಯಿಸಿದೆ.

ಯು. ಬಸವರಾಜ, ಕಾರ್ಯದರ್ಶಿಗಳು



ದುಡಿಯುವ ಜನತೆಯ ಕಡೆಗಣಿಸಿರುವ ರಾಜ್ಯ ಬಜೆಟ್: ಸಿಐಟಿಯು

2020–21 ರ ರಾಜ್ಯ ಸರ್ಕಾರದ ಬಜೆಟ್ ರಾಜ್ಯದ ದುಡಿಯುವ ಜನತೆಯನ್ನು ಕಡೆಗಣಿಸಿದೆ ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ರಾಜ್ಯ ಸಮಿತಿಯು ಖಂಡಿಸಿದೆ.

ರಾಜ್ಯದ ಕೈಗಾರಿಕಾ ವಲಯವು ಆರ್ಥಿಕ ಹಿಂಜರಿತಕ್ಕೆ ಬಲಿಯಾಗಿದೆ. ಕಾರ್ಖಾನೆಗಳು ಮುಚ್ಚುತ್ತಿವೆ. ಉತ್ಪಾದನೆ ಕುಂಟಿತಗೊಂಡಿದೆ, ಕಾರ್ಮಿಕರು ಲೇ ಆಫ್, ರಿಟ್ರಂಚ್ಮೆಂಟ್, ಕೆಲಸ ಕಳೆದು ಕೊಳ್ಳುವ ಹಂತ ತಲುಪಿದ್ದರೆ. ಪರಿಣಾಮವಾಗಿ ರಾಜ್ಯ ಆಂತರಿಕ ಉತ್ಪನ್ನಕ್ಕೆ ಕೈಗಾರಿಕಾ ವಲಯದ ಕೊಡುಗೆ 5.6 ರಿಂದ 4.8 ಶೇಕಡಕ್ಕೆ ಹಾಗು ಸೇವಾ ವಲಯದ ಕೊಡುಗೆ 9.8 ರಿಂದ 7.9 ಶೇಕಡಕ್ಕೆ ಕುಸಿದಿದೆ. ಪರಿಣಾಮವಾಗಿ ರಾಜ್ಯದ ಬೆಳವಣಿಗೆ ದರವು 7.8 ರಿಂದ 6.8 ಶೇಕಡಕ್ಕೆ ಕುಸಿದು ಇತ್ತೀಚಿನ ವರ್ಷಗಳಲ್ಲಿ ತೀವ್ರ ಇಳಿಮುಖವನ್ನು ಮೊದಲ ಭಾರಿಗೆ ಕಂಡಿದೆ. ಇಂಥಹ ಗಂಭೀರ ಪರಿಸ್ಥಿತಿಯಲ್ಲಿ ದುಡಿಯುವ ಜನತೆಯ ನೆರವಿಗೆ ದಾವಿಸದ ರಾಜ್ಯ ಬಜೆಟ್ ದುಡಿಯುವ ಜನರನ್ನು ವಂಚಿಸಿದೆ.

ಕೇಂದ್ರ ಸರ್ಕಾರದ ಅನುದಾನ ಹಂಚಿಕೆಯ ಅವಕೃಪೆಗೆ ಒಳಗಾಗಿ ಸಂಪನ್ಮೂಲಗಳ ಕೊರತೆ ಎದುರಿಸುತ್ತಿರುವ ರಾಜ್ಯ ಸರ್ಕಾರ ಪೆಟ್ರೋಲ್ ಡೀಸಲ್ ಬೆಲೆಗಳ ಹೆಚ್ಚಳಕ್ಕೆ ಮುಂದಾಗಿ ಬೆಲೆ ಏರಿಕೆಯ ಉಡುಗೊರೆಯನ್ನು ದುಡಿಯುವ ಜನತೆಗೆ ನೀಡಿದೆ.

ಕಾರ್ಮಿಕರ ಬೇಡಿಕೆಗಳಾದ ಬೆಲೆ ಏರಿಕೆ ನಿಯಂತ್ರಣ, ನವ ಉದಾರವಾದಿ ಆರ್ಥಿಕ ನೀತಿಗಳಿಗೆ ಕಡಿವಾಣ, 21 ಸಾವಿರ ರೂ. ಗಳ ಸಮಾನ ಕನಿಷ್ಠ ವೇತನ ನಿಗದಿ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡಿ ಕಲ್ಯಾಣ ಯೋಜನೆ ರೂಪಿಸಿ ಜಾರಿಗೊಳಿಸುವ, ಭವಿಷ್ಯ ನಿಧಿಗೆ ಶಾಸನ, ಸ್ಕೀಂ ನೌಕರರನ್ನು ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸ ಬೇಕು ಎಂಬ ಯಾವುದೆ ಅಂಶಗಳನ್ನು ಪರಗಣಿಸದೆ ಕಾರ್ಮಿಕರಿಗೆ ದ್ರೋಹವೆಸಗಿದೆ.

ಆಯಕಟ್ಟಿನ ಮಾವಿನಕುರುವೆ ಮತ್ತು ಬೆಲಿಕೆರಿ ಬಂದರುಗಳ ಮತ್ತು ರಿಂಗ್ ರೋಡ್ ಮೆಟ್ರೋ ಖಾಸಗೀಕರಣಕ್ಕೆ ಬಜೆಟ್ ನಾಂದಿ ಹಾಡಿರುವುದು ಖಂಡನೀಯ ಕ್ರಮಗಳಾಗಿವೆ. ಸೇವಾ ವಲಯಕ್ಕೆ ನೀಡಿರುವ ತೆರಿಗೆ ರಿಯಾಯಿತಿಯನ್ನು ರದ್ದುಪಡಿಸಲಾಗದ ಅಸಹಾಯಕತೆಯನ್ನು ತೋರಿಸುವುದು ದುರ್ಬಲ ನಾಯಕತ್ವದ ಪ್ರತೀಕವಾಗಿದೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಲಿ ಹಣದ ಯೋಜನೆಗಳನ್ನು ತನ್ನ ಯೋಜನೆಯಂತೆ ಬಿಂಬಿಸಲು ಮುಂದಾಗಿದೆ. ಬೀದಿ ಬದಿ ವ್ಯಾಪಾರಿಗಳ ಕಾಯಕ ನಿಧಿಗೆ ಕೋಕ್ ನೀಡಿದೆ. ತನ್ನ ಹಿಂದಿನ ರೈತ ಸಮ್ಮಾನ ಯೋಜನೆಯನ್ನೆ ಪುನರುಚ್ಚರಿಸಿದೆ. ಅವರ ಸಾಲ ಮನ್ನಾ, ಸರ್ಮಪಕ ಬೆಲೆ ನಿಗದಿಗೆ ಕ್ರಮವಹಿಸದೆ, ರೈತರನ್ನು ಕಡೆಗಣಿಸಿದೆ. ಆಟೊ ಚಾಲಕರ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡುವ ಕ್ರಮ ಅಲ್ಪ ಪರಿಹಾರವಾದರು ಅವರ ಮೂಲಭೂತ ಪ್ರಶ್ನೆಯಾದ ವಿದ್ಯುತ್ ಚಾಲಿತ ವಾಹನಗಳಿಗೆ ಮಾರ್ಪಾಡಿಸಲು ಸಹಾಯಧನ ಒದಗಿಸುವ ಯಾವುದೇ ಚಕಾರ ಎತ್ತದೆ ಒಟ್ಟಾರೆ ದುಡಿಯುವ ಜನತೆಯನ್ನು ರಾಜ್ಯ ಬಜೆಟ್ ಕಡೆಗಣಿಸಿದೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷರು ಎಸ್. ವರಲಕ್ಷ್ಮಿ ಮತ್ತು ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದ್ದಾರೆ.

ಗ್ರಾಮೀಣ ಕರ್ನಾಟಕವನ್ನು ಮರೆತ ರಾಜ್ಯ ಬಜೆಟ್

ಸುಮಾರು 238,000 ಕೋಟಿ ರೂಪಾಯಿ ಬಜೆಟ್ ನಲ್ಲಿ ಗ್ರಾಮೀಣ ಅಭಿವೃದ್ಧಿ ಗೆ ಮಿಸಲಿರಿಸಿದ ಹಣ ತೀರಾ ಕಡಿಮೆ. ಇದರಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೂಡಿಕೆಯ ತಾರತಮ್ಯ ಹೆಚ್ಚಲಿದೆ ಎಂದು ಸಿಪಿಐಎಂ ಉಡುಪಿ ಜಿಲ್ಲಾ ಸಮಿತಿ ಆಪಾದಿಸಿದೆ. ಉಡುಪಿ ಜಿಲ್ಲೆಯಲ್ಲಿ ಮೇಲ್ನೋಟಕ್ಕೆ ಕೇವಲ 250ರಿಂದ 300 ಕೋಟಿ ರೂಪಾಯಿ ವರೆಗಿನ ಹೂಡಿಕೆ ಕಾಣುತಿದೆ.

ಪೆಟ್ರೋಲ್, ಡೀಸೆಲ್ ಮತ್ತು ಲಘು ವಾಹನಗಳ ಮೇಲೆ ಹಾಕಿದ ತೆರಿಗೆ ಜನ ಸಾಮಾನ್ಯರಿಗೆ ತೀವ್ರ ತೊಂದರೆಯಾಗಲಿದೆ. ಈಗಾಗಲೇ ವಿಪರೀತ ದರ ಹೆಚ್ಚಳವಾಗಿ ರುವ ಪೆಟ್ರೋಲ್, ಡೀಸೆಲ್ ಮೇಲೆ ತೆರಿಗೆ ಹಾಕಿ 1500ಕೋಟಿ ರೂಪಾಯಿ ಸಂಗ್ರಹಿಸುವ ಬದಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದಿಂದ ಬರಬೇಕಾಗಿರುವ 15000 ಕೋಟಿ ರೂಪಾಯಿ ಸಂಗ್ರಹಿಸಲು ಒತ್ತಡ ಹೇರಬೇಕು.

ಒಟ್ಟಾರೆಯಾಗಿ ರಾಜ್ಯ ಬಜೆಟ್ ಜನ ಸಾಮಾನ್ಯರಿಗೆ ಪರಿಹಾರ ನೀಡದೆ, ಖಾಸಗಿ ಉದ್ದಿಮೆದಾರರಿಗೆ ಅನುಕೂಲವಾಗಿದೆ. ಇದನ್ನು ವಿರೋಧಿಸಬೇಕಾಗಿದೆ.

ಬಾಲಕೃಷ್ಣ ಶೆಟ್ಟಿ ಕಾರ್ಯದರ್ಶಿ
ಸಿಪಿಐಎಂ, ಉಡುಪಿ ಜಿಲ್ಲಾ ಸಮಿತಿ

ನಿಖರತೆ ಇಲ್ಲದ ಬಜೆಟ್

ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್ ಆಕರ್ಷಕವೆನಿಸುವ ಆದರೆ ಆಚರಣೆಗೆ ಅಗತ್ಯವಾದ ನಿಖರತೆ ಇರದ ಬಜೆಟ್ ಎಂದು ಜನವಾದಿ ಮಹಿಳಾ ಸಂಘಟನೆ ಹೇಳ ಬಯಸುತ್ತದೆ. ರಾಜ್ಯದ ಮಹಿಳೆಯರ ಹಲವು ಆತಂಕಗಳಿಗೆ ಅಗತ್ಯಗಳಿಗೆ ಸಮಾಧಾನ ನೀಡುವ ಯಾವ ಅಂಶಗಳೂ ಕಾಣುತ್ತಿಲ್ಲ.

ಮಹಿಳಾ ಸುರಕ್ಷೆಯನ್ನು ಆ್ಯಪ್ ಮೂಲಕ ದೃಢಪಡಿಸಲು ಮುಖ್ಯಮಂತ್ರಿಗಳು ಹೊರಟಿದ್ದಾರೆ. ಆದರೆ ಬೇಕಿದ್ದುದು ಮಹಿಳೆಯರನ್ನು ಗೌರವದಿಂದ ನೋಡುವ ವಾತಾವರಣ ನಿರ್ಮಾಣ. ಆ ಕುರಿತ ಯಾವ ಮಾತುಗಳೂ ಬಜೆಟ್‌ನಲ್ಲಿ ಇಲ್ಲ.

ಸಮರ್ಪಕವಾದ ಸಾರಿಗೆ ವ್ಯವಸ್ಥೆ, ಸುರಕ್ಷಿತ ವಾತಾವರಣ, ಶೀಘ್ರ ಪ್ರಕರಣ ವಿಲೇವಾರಿಗೆ ಪೂರ್ಣ ಸೌಲಭ್ಯಗಳ ತ್ವರಿತ ನ್ಯಾಯಾಲಯಗಳ ಸ್ಥಾಪನೆ, ಎಲ್ಲ ಹಂತಗಳಲ್ಲಿ ಲಿಂಗ ಸಂವೇದನೆಗೆ ಒತ್ತು, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಗಳು ಮಾತ್ರವೇ ಪರಿಹಾರ ಮಾರ್ಗಗಳಾಗಬಲ್ಲವು.

ಮಹಿಳಾ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ಪ್ರಸ್ತಾಪವಿದೆ. ಆದರೆ ಅದು ಬೆಂಗಳೂರಿಗೆ ಮಾತ್ರ ಸೀಮಿತ, ರಾಜ್ಯಾದ್ಯಂತ ಮಹಿಳೆಯರು ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿದ್ದು ಸುಧಾರಣಾ ಕೇಂದ್ರಗಳು ದುಸ್ಥಿತಿಯಲ್ಲಿವೆ. ಆದರೆ ಬೆಂಗಳೂರಿನಲ್ಲಿರುವ ಸುಧಾರಣಾ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿ ಪಡಿಸುವುದು ಇವು ಗ್ರಾಮೀಣ ಪ್ರದೇಶದ ಮಹಿಳೆಯರ ಕುರಿತು ಇರುವ ಅವಜ್ಞೆಗೆ ಉದಾಹರಣೆಯಾಗಿದೆ.

ಹಾಗೆಯೇ ಕೆರೆಗಳ ಅಭಿವೃದ್ಧಿ ಕೂಡಾ ಬೆಂಗಳೂರಿಗೆ ಮಾತ್ರ ಕೇಂದ್ರಿತವಾಗಿ ತೋರುತ್ತದೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಜನ ಬವಣೆ ಪಡುತ್ತಿದ್ದಾರೆ. ಮನೆ ಮನೆಗೆ ಗಂಗೆ ಎಂಬ ಪ್ರಾಸಬದ್ಧ ಯೋಜನೆ ಕಾರ್ಯಗತವಾಗಲು ಜಲಮೂಲ ಯಾವುದೆಂದು ಪ್ರಸ್ತಾಪವಿಲ್ಲ. ಹಾಗೆಯೇ ಕುಡಿಯುವ ನೀರಿನ ಬೃಹತ್ ಯೋಜನೆಯ ಪ್ರಸ್ತಾಪವಿದೆ. ಬಂದ ಮಳೆ ನೀರನ್ನು ಸಂಗ್ರಹಿಸಲು ಅಗತ್ಯವಾದ ತಯಾರಿ ಮತ್ತದಕ್ಕೆ ಪೂರಕವಾಗಿ ಉದ್ಯೋಗ ಖಾತ್ರಿ ಯೋಜನೆಯನ್ನು ನಗರಕ್ಕೂ ವಿಸ್ತರಿಸುವ ಪ್ರಯತ್ನ ಮಾಡಿದ್ದರೆ ಅಹುದೆನ್ನಬಹುದಿತ್ತು.

ಈ ಬಜೆಟ್ ನಲ್ಲಿ ಉದ್ಯೋಗ ಸೃಷ್ಟಿಯ ಪ್ರಸ್ತಾಪವಿಲ್ಲ. ಆರೋಗ್ಯಕ್ಕೆ ಮೀಸಲಿರಿಸಿರುವ ಬಜೆಟ್ ಇಂದಿನ ಆರೋಗ್ಯವಲಯದ ವಸ್ತುಸ್ಥಿತಿಯನ್ನು ಬದಲಾಯಿಸದು. ಇನ್ನು ಎಲ್ಲಕ್ಕೂ ಸೇರಿ ಒಟ್ಟಿಗೇ ಬರೆ ಇಟ್ಟಂತೆ ಸಂಪನ್ಮೂಲ ಶೇಖರಣೆಗೆ ಪೆಟ್ರೋಲ್ ಡಿಸೇಲ್ ಬೆಲೆ ಏರಿಸಿ ಜನರ ಮೇಲೆ ಪ್ರಹಾರ ನಡೆಸಲಾಗಿದೆ. ಒಂದು ಕೈ ಬೆರಳ ತುದಿಯಲ್ಲಿ ಕೊಟ್ಟಂತೆ ಮಾಡಿ ಎರಡೂ ಕೈಗಳಿಂದ ಬಾಚಿ ಬಳಿದುಕೊಳ್ಳುವ ಜಾಣತನದ ಬಜೆಟ್ ಇದು.

ಎಸ್.ಎಚ್.ಜಿ. ಮಹಿಳೆಯರ ಸಾಲ ಸೌಲಭ್ಯಗಳ ಬಗ್ಗೆ ಯಾವುದೆ ಪ್ರಸ್ತಾಪವಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಇಡುವ 37259 ಕೋಟಿಯ ಹಣದ ವಿಲೇವಾರಿಯ ಬಗ್ಗೆ ಸ್ಪಷ್ಟತೆ ಕಾಣುತ್ತಿಲ್ಲ. ಸಂಗ್ರಹಕ್ಕೆ ದಾರಿ ಇಲ್ಲ, ಕೇಂದ್ರದಿಂದ ನ್ಯಾಯವಾಗಿ ಬರಬೇಕಾದ ನಮ್ಮ ಪಾಲು ಪಡೆಯುವ ಸಾಮರ್ಥ್ಯವಿಲ್ಲ ಹಾಗಿದ್ದೂ ಜನರ ತೆರಿಗೆಯ ಹಣವನ್ನು ಕಂಚು ಹಿತ್ತಾಳೆಗಳ ಪ್ರತಿಮೆಗೆ ಸುರಿಯುವುದು ಅಗತ್ಯವೇ ಎನ್ನುವ ಪ್ರಶ್ನೆ ಕಾಡಬೇಕು.

ಈ ಬಜೆಟ್ ನಲ್ಲಿ ಜನರ ಜೀವನ ಮಟ್ಟವನ್ನು ಉತ್ತಮ ಪಡಿಸುವ ಯಾವುದೇ ಕ್ರಮಗಳಿಲ್ಲವೆಂದು ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ದೇವಿ ಅಧ್ಯಕ್ಷರು,
ಗೌರಮ್ಮ ಪ್ರಧಾನ ಕಾರ್ಯದರ್ಶಿ

"ಬೆಂಗಳೂರಿನ ಅಗತ್ಯವನ್ನು ಮನಗಾಣದ ಬಜೆಟ್-ಸಿಪಿಐ(ಎಂ)"

ರಾಜ್ಯ ಬಿಜೆಪಿ ಸರ್ಕಾರದ 2020-21ರ ಸಾಲಿನ ಬಜೆಟ್ ಬೆಂಗಳೂರಿನ ಅಗತ್ಯವನ್ನು ಮನಗಾಣುವಲ್ಲಿ ವಿಫಲವಾಗಿದೆ ಎಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಖಂಡಿಸಿದೆ.

ನಗರದಲ್ಲಿ ಹೆಚ್ಚುತ್ತಿರುವ ಸಾರಿಗೆ ದಟ್ಟಣೆ ಪರಿಹಾರಕ್ಕೆ 'ನಮ್ಮ ಮೆಟ್ರೋ' ಯೋಜನೆಯನ್ನು ನಗರದ ಎಲ್ಲಾ ದಿಕ್ಕುಗಳಲ್ಲೂ ಹೊರವಲಯದ ಕೈಗಾರಿಕಾ ಪ್ರದೇಶಗಳಿಗೆ ವಿಸ್ತರಿಸುವ ತುರ್ತು ಅಗತ್ಯವಿದೆ ಮಾತ್ರವಲ್ಲದೆ ಒತ್ತಾಯವಿದೆ. ಉತ್ತರ-ದಕ್ಷಿಣದ ಮೆಟ್ರೋವನ್ನು ಉತ್ತರದ ದಾಬಸಪೇಟೆಗೆ, ದಕ್ಷಿಣದ ಅತ್ತಿಬೆಲೆವರೆಗೆ, ಪೂರ್ವದಲ್ಲಿ ಬಿಡದಿವರೆಗೆ, ಪಶ್ಚಿಮದಲ್ಲಿ ಪಿಳಗುಂಪಾವರೆಗೆ ಹಾಗೂ ದೊಡ್ಡಬಳ್ಳಾಪುರ, ಜಿಗಣಿವರೆಗೆ ವಿಸ್ತರಿಸಬೇಕಾಗಿದೆ. ಅಂತೆಯೇ ರಿಂಗ್‌ರೋಡ್ ಮೆಟ್ರೋದ ಅನಿವಾರ್ಯವಿದೆ. ಅದೇ ರೀತಿ ನಾಗರೀಕ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಸಮರ್ಪಕವಾಗಿ ಜಾರಿಗೊಳಿಸಲು ಮಹಾನಗರ ಪಾಲಿಕೆಯನ್ನು 4 ಪಾಲಿಕೆಯನ್ನಾಗಿ ವಿಭಜಿಸಿ, ಅಗತ್ಯ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಹಾಗೂ ಘನ ತ್ಯಾಜ್ಯ ವಿಲೇವಾರಿಗೆ ಕ್ರಮಗಳಾಗಬೇಕಿದೆ. ಆದರೆ ಆ ಯಾವುದೇ ಮುನ್ನೋಟವಾಗಲಿ, ಕಣ್ಣೋಟವಾಗಲಿ ರಾಜ್ಯ ಬಿಜೆಪಿ, ಕೇಂದ್ರ ಬಿಜೆಪಿ ಅಥವಾ ಬಿಬಿಎಂಪಿ ಆಡಳಿತಾರೂಢ ಬಿಜೆಪಿಗೆ ಇಲ್ಲವಾಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

2019-20ರ ಸಾಲಿನ 8344 ಕೋಟಿ ರೂಗಳನ್ನು ಸಮರ್ಪಕವಾಗಿ ಬಳಕೆ ಮಾಡಿಲ್ಲ ಮಾತ್ರವಲ್ಲದೆ ಅದನ್ನು 2020-21ರಲ್ಲಿ ಬಳಕೆ ಮಾಡುವ ಮಾತನಾಡಿದೆ. ಅದೇ ವೇಳೆ 2020-21ರ ಸಾಲಿಗೆ 8772 ಕೋಟಿ ರೂಗಳನ್ನು ನೀಡಿರುವುದಾಗಿ ಹೇಳಿದೆ. ಅಂತೆಯೇ ಸಿಲ್ಕ್ ಬೋರ್ಡ್‌ನಿಂದ ಏರ್‌ಪೋರ್ಟ್‌ವರೆಗಿನ ಮೆಟ್ರೋವನ್ನು ಖಾಸಗಿ ಸಹಭಾಗಿತ್ವದ ಹೆಸರಿನಲ್ಲಿ ಮೆಟ್ರೋ ಯೋಜನೆಯ ಖಾಸಗೀಕರಣಕ್ಕೆ ಮುಂದಾಗಿದೆ. ಉಪನಗರ ರೈಲು ಯೋಜನೆಗೆ 2020-21 ರಲ್ಲಿ ಮೀಸಲಿರಿಸಿರುವ 500 ಕೋಟಿ ರೂಗಳು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಿದೆ.

ಅಂತೆಯೇ ನಗರದ ಅಸಂಘಟಿತ ಕಾರ್ಮಿಕರ ಕಲ್ಯಾಣ ಯೋಜನೆಗೆ ಅಗತ್ಯ ನಿಧಿ ನೀಡಿಲ್ಲ. ಮಾತ್ರವಲ್ಲದೆ ಬಹುದಿನಗಳ ಶಾಸನಾತ್ಮಕ ಭವಿಷ್ಯನಿಧಿಗೆ ಕ್ರಮವಹಿಸಿಲ್ಲ. ಕಟ್ಟಡ ಕಾರ್ಮಿಕರ ಸಾಮಾಜಿಕ ಭದ್ರತಾನಿಧಿ ಹಣದ ಯೋಜನೆಯನ್ನು ರಾಜ್ಯ ಬಜೆಟ್ ಯೋಜನೆಯಂತೆ ಬಿಂಬಿಸಲು ಮುಂದಾಗಿದೆ. ಅಸಂಘಟಿತ ವಸತಿಯ ಪ್ರಶ್ನೆಗೆ ಪರಿಹಾರ ಕಾಣುವಲ್ಲಿ ವಿಫಲವಾಗಿದೆ. ನಗರದ ಜನತೆಯ ಕುಡಿಯುವ ನೀರಿನ ಪ್ರಶ್ನೆಗೆ ಸುಸ್ಥಿರ ಯೋಜನೆಯ ಕಣ್ಣೋಟವಿಲ್ಲದ ಬಜೆಟ್ ಇದಾಗಿದೆ.

ಮಹಾನಗರ ಮೂಲಸೌಕರ್ಯ ಅಭಿವೃದ್ಧಿಗೆ, ಪಾದಚಾರಿ ಮಾರ್ಗ ವಿಸ್ತರಣೆಗೆ, ಪಾರ್ಕ್ ಹಾಗೂ ಮುಂತಾದ ಯೋಜನೆಗಳಿಗೆ ನಗರದ ಹಸಿರನ್ನು ಹೆಚ್ಚಿಸಲು ಮಾತ್ರವಲ್ಲದೆ ಮುಂಬರುವ ದಿನಗಳಲ್ಲಿ ಪರಿಸರಸ್ನೇಹಿ, ವಿದ್ಯುತ್ ಚಾಲಿತ ಸಾರಿಗೆಯನ್ನು ತುರಿತವಾಗಿ ವಿಸ್ತರಿಸಲು ಬಲಪಡಿಸಲು ಯಾವುದೇ ಯೋಜನೆಯಿಲ್ಲದೆ, ಚಿಂತನ ಮತ್ತು ಬದ್ಧತೆ ಎರಡರಲ್ಲೂ ಬರಡಾಗಿರುವ ಬಜೆಟ್ ಇದಾಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ. ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆಯಿಂದ ಜನತೆಯು ಎದುರಿಸುತ್ತಿರುವ ಬೆಲೆ ಏರಿಕೆ ಸಂಕಷ್ಟದ ಮೇಲೆ ಮತ್ತಷ್ಟು ಹೊರೆಯನ್ನು ಈ ಬಜೆಟ್ ಹೊರಿಸಲಿದೆ ಎಂದು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ.

ಕೆ.ಎನ್. ಉಮೇಶ್

ದಲಿತರ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ ಬಜೆಟ್

ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು 2020 ರ ಬಜೆಟ್ ಅನ್ನು ವಿಧಾನ ಸಭೆಯಲ್ಲಿ ಮಂಡಿಸಿದ್ದಾರೆ ಇದು ದಲಿತರ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ ಬಜೆಟ್ ಎಂದು ದಲಿತ ಹಕ್ಕುಗಳ ಸಮಿತಿ **(DHS)** ರಾಜ್ಯ ಸಮಿತಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಎಸ್‌ಸಿ/ಎಸ್‌ಟಿ ವಿಶೇಷ ಘಟಕದ ಯೋಜನೆಗೆ ಕಳೆದ ವರ್ಷ 2019ನೇ ಸಾಲಿನಲ್ಲಿ ರೂ. 30,402 ಕೋಟಿ ಹಣವನ್ನು ಹಿಂದಿನ ಸರ್ಕಾರ ಒದಗಿಸಿತ್ತು. ಆದರೆ 2020 ನೇ ಸಾಲಿನಲ್ಲಿ ರೂ. 26,930 ಕೋಟಿ ನೀಡಿ ರೂ. 3472 ಕೋಟಿ ಕಡಿತ ಮಾಡಿದ್ದಾರೆ. ಜನಸಂಖ್ಯೆ ಆಧಾರದಲ್ಲಿ ಹೆಚ್ಚಿನ ಹಣ ನೀಡುವ ಬದಲು ಕಡಿತ ಮಾಡಿರುವುದು ದಲಿತರ ಅಭಿವೃದ್ಧಿ ನಿರ್ಲಕ್ಷ ಮಾಡಿರುವುದಕ್ಕೆ ಸಾಕ್ಷಿಯಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಾದ ಹಣವನ್ನು ದುರ್ಬಳಕೆ ಮಾಡಲಾಗುತ್ತದೆ. ಈ ದುರ್ಬಳಕೆ ತಡೆಯಲು ಕಾಯ್ದೆ ಕಟ್ಟು ನಿಟ್ಟಾಗಿ ಜಾರಿಗೊಳಿಸುವ ಬಗ್ಗೆ ತೀರ್ಮಾನವಿಲ್ಲ.

ತಳ ಮಟ್ಟದಲ್ಲಿ ದಲಿತರು ಬದುಕಲು ಬೇಕಾದ ಕೃಷಿ ಭೂಮಿ, ಭೂಮಿಗೆ ನೀರು, ಮನೆ ಇಲ್ಲದ ದಲಿತರಿಗೆ ನಿವೇಶನ ಸಹಿತ ಮನೆ, ಶವ ಹೂಳಲು ಸ್ಮಶಾನ, ದಲಿತ ಯುವಕರಿಗೆ ಸ್ವಯಂ ಉದ್ಯೋಗ ಇತ್ಯಾದಿಗಳ ಬಗ್ಗೆ ನಿರ್ಧಿಷ್ಟ ಸೂಚನೆಗಳಿಲ್ಲದ ಯಡಿಯೂರಪ್ಪನವರ ಬಜೆಟ್ ಬರಡಾಗಿದೆ. ಇಂತಹ ದಲಿತ ವಿರೋಧಿ ತೋರಿಕೆಯ ಬಜೆಟ್‌ನಿಂದ ದಲಿತರ ಅಭಿವೃದ್ಧಿ ಅಸಾಧ್ಯ. ಈ ಜನ ವಿರೋಧಿ ಬಜೆಟ್ಟನ್ನು ಖಂಡಿಸಿ ದಲಿತ ಹಕ್ಕುಗಳ ಸಮಿತಿ (DHS) ರಾಜ್ಯದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದೆ.

ಗೋಪಾಲಕೃಷ್ಣ ಹರಳಹಳ್ಳಿ

ಕೃಷಿ ಕೂಲಿಕಾರರನ್ನು ಕಡೆಗಣಿಸಿದ ಬಜೆಟ್

ಕರ್ನಾಟಕದ ಗ್ರಾಮೀಣ ಪ್ರದೇಶದ ಕೃಷಿ ರಂಗದಲ್ಲಿ ಒಂದು ಕೋಟಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕೂಲಿಕಾರರು ಕೆಲಸ ನಿರ್ವಯಿಸುತ್ತಿದ್ದಾರೆ. ದಿನೇ ದಿನೇ ಅವರ ಸಂಖ್ಯೆಯು ಹೆಚ್ಚಾಗುತ್ತಿದೆ. ಬಹುತೇಕ ದಲಿತರ ಸಮುದಾಯಕ್ಕೆ ಸೇರಿದವರಾದ ಕೂಲಿಕಾರರನ್ನು ರಾಜ್ಯದ ಮುಖ್ಯಮಂತ್ರಿಯವರು ತಮ್ಮ ಬಜೆಟ್‌ನಲ್ಲಿ ಕಡೆಗಣಿಸಿದನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ವಲಸೆ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವರಲ್ಲಿ ಬಹುತೇಕರು ಅಮಾನವೀಯ ಪರಿಸ್ಥಿತಿಗಳಲ್ಲಿ ಜೀವಿಸುತ್ತಿದ್ದಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಕೃಷಿ ಭೂಮಿಯಲ್ಲಿ ಕೆಲಸ ಮಾಡುವ ವಲಸೆ ಕಾರ್ಮಿಕರಿಗೆ ಯಾವುದೇ ಸಾಮಾಜಿಕ ಸುರಕ್ಷಾ ಸೌಲಭ್ಯ ಇಲ್ಲ. ಕೃಷಿ ಕೂಲಿಕಾರರಿಗೆ ಸ್ಥಳೀಯವಾಗಿ ವರ್ಷ ಪೂರ್ತಿ ಕೆಲಸಗಳು ದೊರೆಯುವುದಿಲ್ಲ. ಅದ್ದರಿಂದ ಅವರು ಗುಳೆ ಹೋಗುವ ಸಂದರ್ಭಗಳು ಹೆಚ್ಚಾಗುತ್ತಿವೆ. ಅವರಿಗೆ ಸ್ಥಳೀಯವಾಗಿ ಕೆಲಸ ದೊರೆಯುವಂತಹ ಯಾವುದೇ ಯೋಜನೆಗಳನ್ನು ಘೋಷಿಸಿಲ್ಲ. ಕೂಲಿಕಾರರಿಗೆ ಸಮಗ್ರ ಕಾನೂನು ಮತ್ತು ಕೂಲಿಕಾರರ ಕಲ್ಯಾಣ ಮಂಡಳಿಯಂತಹ ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಲ್ಪಿಸಿಕೊಡುವಲ್ಲಿ ಸರ್ಕಾರ ವಿಫಲವಾಗಿದೆಯೆಂದು ಸಂಘ ವಿಷಾದ ವ್ಯಕ್ತಪಡಿಸುತ್ತದೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಗೊಳಿಸಲು, ಸಾರ್ವತ್ರಿಕ ರೇಷನ್ ಪದ್ಧತಿ ಮತ್ತು ನಿವೇಶನ ರಹಿತ ಬಡ ಕೂಲಿಕಾರರಿಗೆ ಮನೆಗಳನ್ನು ನಿರ್ಮಿಸುವಂತಹ ಯೋಜನೆಗಳಿಗೆ ಹೆಚ್ಚಿನ ಹಣ ವಿನಿಯೋಗಿಸಲು ಈ ಬಜೆಟ್‌ನಲ್ಲಿ ಘೋಷಿಸಿಲ್ಲ. ಅವರ ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸುವ ಉಲ್ಲೇಖವಿಲ್ಲ.

ಈ ಬಜೆಟನ್ ಚರ್ಚೆಯಲ್ಲಿ ಕೂಲಿಕಾರರ ಪರವಾದ ಯೋಜನೆ ಜಾರಿಗೆ ತರಲು ಮುಂದಾಗಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ಸರ್ಕಾರವನ್ನು ಆಗ್ರಹಿಸುತ್ತದೆ.

ಚಂದ್ರಪ್ಪ ಹೊಸ್ಕೇರಾ

ಅಡುಗೆ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಳ ಖಂಡನೆ

ಜನವಾದಿ ಮಹಿಳಾ ಸಂಘಟನೆ ಹಗರಿಬೊಮ್ಮನಹಳ್ಳಿ ತಾಲೂಕು ಸಮಿತಿಯು ಈ ಪ್ರತಿಭಟನಾ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳಿಂದ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಲೆ ಇದೆ. ಇನ್ನೊಂದು ಕಡೆ ಜನರಲ್ಲಿ ಕೊಂಡುಕೊಳ್ಳುವ ಶಕ್ತಿ ಕ್ಷೀಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಬಡಜನ ಸಾಮಾನ್ಯರ ಹಿತ ಕಡೆಗಣಿಸಿ ಅಡುಗೆ ಅನಿಲ ಸಿಲಿಂಡರ್‌ನ ಬೆಲೆ ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರದ ಕ್ರಮ ಖಂಡನೀಯವಾಗಿದೆ.

ಹೆಚ್ಚಳವಾದ ಸಿಲಿಂಡರ್‌ನ ಬೆಲೆ ಸುಮಾರು 1000 ರೂ. ಬಡ ಜನಸಾಮಾನ್ಯರಿಗೆ ತುಂಬಾ ಹೊರೆಯಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉಜ್ವಲ ಯೋಜನೆಯಿಂದ ಬಡ ಜನರಿಗೆ ಯಾವ ನೆರವು ಇಲ್ಲ. ಇದು ಕೇವಲ ಪ್ರಚಾರಕ್ಕೆ ಸೀಮಿತ ಎಂಬುದು ಇದು ಎತ್ತಿ ತೋರಿಸಿದೆ.

ದುಬಾರಿ ಬೆಲೆಗೆ ಸಿಲಿಂಡರ್ ಕೊಂಡುಕೊಳ್ಳಲು ಬಡಜನರು ತುಂಬಾ ಸಂಕಷ್ಟ ಅನುಭವಿಸುತ್ತಿದ್ದಾರೆ ಮತ್ತು ಸಿಲಿಂಡರ್‌ನ ಬೆಲೆ ಏರಿಕೆಯು ಹೋಟೆಲ್, ಡಾಬ್ ಮತ್ತು ಬೇಕರಿಗಳಲ್ಲಿನ ಆಹಾರ, ತಿಂಡಿ, ತಿನಿಸು ಪದಾರ್ಥಗಳ ಬೆಲೆ ಏರಿಕೆಗೂ ದಾರಿ ಮಾಡಿಕೊಟ್ಟಿದೆ. ಆದ್ದರಿಂದ ಈ ಕೂಡಲೇ ಹೆಚ್ಚಳವಾದ ಸಿಲಿಂಡರ್ ದರವನ್ನು ಕಡಿತಗೊಳಿಸುವುದರ ಜೊತೆಗೆ ದಿನನಿತ್ಯದ ಅಗತ್ಯವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವಂತೆ ಜನವಾದಿ ಮಹಿಳಾ ಸಂಘಟನೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.





ದಿಲ್ಲಿ ಹಿಂಸಾಚಾರ ಚುನಾವಣಾ ಸೋಲನ್ನು ದ್ವೇಷದ ವಿಜಯವಾಗಿ ಪರಿವರ್ತಿಸುವ ಪ್ರಯತ್ನ

ಈ ಹಿಂಸಾಚಾರ ಇದ್ದಕ್ಕಿದ್ದಂತೆ ಎದ್ದು ಬಂದದ್ದಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.. ಇನ್ನೂ ಅಪಾಯಕಾರಿಯೆಂದರೆ, ಚುನಾವಣಾ ಪರಾಭವದ ಒಂದು ರಾಜಕೀಯ ದೃಶ್ಯವನ್ನು ಒಂದು ದ್ವೇಷ ಮತ್ತು ಕೋಮುವಾದ ಚಾಲಿತ ಸಿದ್ಧಾಂತದ ವಿಜಯವಾಗಿ ಪರಿವರ್ತಿಸುವ ಕಾರ್ಯತಂತ್ರ ಇದಾಗಿತ್ತು. ಒಂದು ವಾರದೊಳಗೇ, ಸಂಘ ಪರಿವಾರ ಮುಂದೊತ್ತುವ ಕೋಮುವಾದಿ ಧ್ರುವೀಕರಣದ ಅಜೆಂಡಾದ ದಾಳಿ ನಡೆದಿದೆ, ಅದರ ಕೈಮೇಲಾಗಿದೆ. ಮೂರು ದಿನಗಳ ಕಾಲ ಪ್ರಧಾನ ಮಂತ್ರಿಗಳು ಮೌನವಾಗುಳಿದರು. ಗೃಹಮಂತ್ರಿಗಳಂತೂ ಗೈರು ಹಾಜರಾಗಿದ್ದರು. ಇದು ವಿಫಲತೆಯೇ ಅಥವ ಕೃಪಾಪೋಷಣೆಯೇ? ಆದರೆ ದಿಲ್ಲಿಯ ಜನತೆ ತಮ್ಮ ನಗರವನ್ನು ದ್ವೇಷದ ಕೊರೊನ ವೈರಸ್‌ನಿಂದ ಕಾಪಾಡಿಕೊಳ್ಳುತ್ತಾರೆ

ಬೃಂದಾ ಕಾರಟ್

ಒಂದು ಹಾರರ್ ಮೂವಿಯ(ಭೀತಿ ಹುಟ್ಟಿಸುವ ಚಲನಚಿತ್ರದ) ಧ್ವಂಸ ದೃಶ್ಯವನ್ನು ಹೋಲುವ (ದಿಲ್ಲಿಯ) ಶಿವ ವಿಹಾರ ಪ್ರದೇಶದ ಒಂದು ಮೂಲೆಯಲ್ಲಿದೆ ಈ ಪ್ರದೇಶದ ಬಿಜೆಪಿಯ ಅಲ್ಪಸಂಖ್ಯಾತ ಸೆಲ್‌ನ ಅಧ್ಯಕ್ಷ ಅಶ್ರಫ್‌ರ ಮನೆ. ಬಹುಶಃ ಅದೊಂದು ದೊಡ್ಡ ಕಟ್ಟಡವಾಗಿತ್ತು. ಇಂದು ಅದು ಬೆಂಕಿಗಾಹುತಿಯಾಗಿ ಕರಕಲಾಗಿದೆ, ಕಿಟಕಿಗಳು ಧ್ವಂಸಗೊಂಡಿವೆ, ಮನೆ ಖಾಲಿಯಿದೆ. ನಾನು ಅವರನ್ನು ಭೇಟಿಯಾಗಲಾಗಿಲ್ಲ. ಈ ಪ್ರದೇಶದ ಇತರ ಹಲವರಂತೆ ಅವರೂ ಧ್ವಂಸಕಾರ್ಯಕ್ಕಿಳಿದ ದೊಂಬಿಯಿಂದ ಪಾರಾಗಲು ಓಡಿಹೋಗಿದ್ದಾರೆ ಎಂದು ತಿಳಿಯಿತು. ಆತನ ರಾಜಕೀಯ ಸಂಪರ್ಕ ಆತನ ಮನೆಯನ್ನು ಉಳಿಸಲು ಸಾಕಾಗಲಿಲ್ಲ. ಪೋಲಿಸ್ ನೆರವು ಪಡೆಯಲೂ ಸಾಲದಾಯಿತು. ಬಹಳ ಸಲ ಪೋಲೀಸ್‌ಗೆ ಕರೆ ಮಾಡಿದರಂತೆ. ಆದರೆ ಪಡೆದ ಉತ್ತರ: "ನೀವು ಒಬ್ಬ ಬಿಜೆಪಿ ಮುಖಂಡರಾಗಿರಬಹುದು. ಆದರೆ ಈಗ ನಿಮ್ಮನ್ನು ನೀವೇ ಕಾಪಾಡಿಕೊಳ್ಳಿ".

ದೊಂಬಿಗೆ, ಬೆಂಕಿ ಹಚ್ಚಲು ಇಳಿದವರ ರಕ್ತದಲ್ಲಿ ಉರಿಯುತ್ತಿದ್ದ ದ್ವೇಷ ಒಂದು ಆಕ್ರಾಮಕ ಮತೀಯ ಐಡೆಂಟಿಟಿಯಾಗಿ ವ್ಯಕ್ತಗೊಂಡಿತ್ತು, ಸಾಂಕೇತಿಕ ಅಲ್ಪಸಂಖ್ಯಾತ ಸೆಲ್‌ಗಳು, ಮುಖಂಡರೆಂಬ ಸೂಕ್ಷ್ಮತೆಗಳ ಪರಿವೆ ಅದಕ್ಕಿರಲಿಲ್ಲ. ಈ ಪ್ರದೇಶದಲ್ಲಿ ನಿರ್ದಿಷ್ಟವಾಗಿ ಎರಡು ಮಸೀದಿಗಳ ಮೇಲೆ ಗುರಿಯಿಡಲಾಗಿತ್ತು. ಇದು ಎರಡೂ ಸಮುದಾಯಗಳವರು ಇರುವ ಪ್ರದೇಶ. ಹಲವು ಮಸೀದಿಗಳಿಗೆ ಹಾನಿಗಳಾಗಿವೆ, ಆದರೆ ಮಂದಿರಗಳು ಸುರಕ್ಷಿತವಾಗಿವೆ. ಯಾವ ದೇವರುಗಳ ಹೆಸರಲ್ಲಿ ಈ ಹಿಂಸಾಚಾರ ನಡೆದಿದೆಯೋ ಆ ದೇವರುಗಳನ್ನೇ ಅಣಕಿಸುವ ಸಂಗತಿಯಿದು.

ದಿಲ್ಲಿಯ ಚುನಾವಣಾ ಪ್ರಚಾರದಲ್ಲಿ ಬಿಜೆಪಿಯ ಉನ್ನತ ಮುಖಂಡರುಗಳು ಬಿತ್ತಿದ ದ್ವೇಷದ ಬೀಜಗಳು ತಮ್ಮ ವಿಷಮಯ ಫಲವನ್ನು ನೀಡಿವೆ. ದಿಲ್ಲಿಯ ಈಶಾನ್ಯ ಭಾಗವನ್ನು ದೇಶ ವಿಭಜನೆಯ ನಂತರದ ಅತ್ಯಂತ ಕೆಟ್ಟ ಹಿಂದೂ–ಮುಸ್ಲಿಂ ಹಿಂಸಾಚಾರ ಅಪ್ಪಳಿಸಿತು. ಚುನಾವಣಾ ಪ್ರಚಾರದ ಸಮಯದಲ್ಲೇ ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ವಿರುದ್ಧ ಚಳುವಳಿಯನ್ನು ಧ್ವಂಸ ಮಾಡುವ, ಪ್ರತಿಭಟನಾ ಸ್ಥಳಗಳ ಮೇಲೆ ಗುರಿಯಿಡುವ, ಪ್ರತಿಭಟನಾಕಾರರನ್ನು ರಾಕ್ಷಸರೆಂಬಂತೆ ಚಿತ್ರಿಸುವ ಗುರಿ ಸಾಕಷ್ಟು ಸ್ಪಷ್ಟವಾಗಿಯೇ ಕಾಣುತ್ತಿತ್ತು. ಆದರೆ ಬಿಜೆಪಿಯ ಕಪಿಲ್ ಮಿಶ್ರ ಪ್ರಚೋದನೆಯ ನಂತರ ಪ್ರತಿಭಟನೆಗಳು ನಡೆಯುತ್ತಿದ್ದ ಸ್ಥಳಗಳಲ್ಲಿ ಸಾಲುಸಾಲಾಗಿ ದೈಹಿಕ ಹಲ್ಲೆಗಳನ್ನು ನಡೆಸಿದ ರೀತಿ , ಈ ಹಿಂಸಾಚಾರ ಇದ್ದಕ್ಕಿದ್ದಂತೆ ಎದ್ದು ಬಂದದ್ದಲ್ಲ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಒಂದು ರೀತಿಯಲ್ಲಿ ಇದು ಚುನಾವಣಾ ಫಲಿತಾಂಶಗಳಿಗಾಗಿ ದಿಲ್ಲಿಯ ಜನಗಳ ಮೇಲೆ ಸೇಡು ತೀರಿಸಿಕೊಂಡಂತಾಗಿದೆ. ಇನ್ನೂ ಅಪಾಯಕಾರಿಯೆಂದರೆ, ಚುನಾವಣಾ ಪರಾಭವದ ಒಂದು ರಾಜಕೀಯ ದೃಶ್ಯವನ್ನು ಒಂದು ದ್ವೇಷ ಮತ್ತು ಕೋಮುವಾದ ಚಾಲಿತ ಸಿದ್ಧಾಂತದ ವಿಜಯವಾಗಿ ಪರಿವರ್ತಿಸುವ ಕಾರ್ಯತಂತ್ರ ಇದಾಗಿತ್ತು. ಒಂದು ವಾರದೊಳಗೇ, ಸಂಘ ಪರಿವಾರ ಮುಂದೊತ್ತುವ ಕೋಮುವಾದಿ ಧ್ರುವೀಕರಣದ ಅಜೆಂಡಾದ ದಾಳಿ ನಡೆದಿದೆ, ಅದರ ಕೈಮೇಲಾಗಿದೆ.

ಹಿಂದುತ್ವ ಪಡೆಗಳು ಸಿಎಎ–ವಿರೋಧಿ ಪ್ರತಿಭಟನಾಕಾರರು ಅಡ್ಡಗಟ್ಟಿದ್ದರೆನ್ನಲಾದ ಸಾರ್ವಜನಿಕ ರಸ್ತೆಗಳನ್ನು ಮುಕ್ತಗೊಳಿಸುವ ಹೆಸರಲ್ಲಿ ಹರಿಯಬಿಟ್ಟ ಹಿಂಸಾಚಾರದ ಮೊದಲ ಘಟ್ಟದಲ್ಲಿ ಪ್ರತಿ–ಹಿಂಸಾಚಾರವಿತ್ತು, ಎರಡು ಸಮುದಾಯಗಳ ನಡುವೆ ತಿಕ್ಕಾಟಗಳಾದವು. ಈ ಘಟ್ಟದಲ್ಲಿ, ದ್ವೇಷ ಭಾಷಣಗಳು ಹರಿಯಬಿಟ್ಟ ಜನಜಂಗುಳಿ ಅಲ್ಪಸಮಖ್ಯಾತರು ಬಹುಸಂಖ್ಯೆಯಲ್ಲಿದ್ದ ಪ್ರದೇಶಗಳಲ್ಲಿ ರಂಪಾಟ ನಡೆಸಿದಾಗ, ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಶಾಲೆಗಳು, ಅಂಗಡಿಗಳು, ಮನೆಗಳು ಸೇರಿದಂತೆ ಹಿಂದೂ ಒಡೆತನದ ಆಸ್ತಿಗಳ ಮೇಲೂ ದಾಳಿ, ಬೆಂಕಿ ಹಚ್ಚುವುದು ನಡೆಯಿತು. ಸಾವುಗಳ ಪಟ್ಟಿಯಲ್ಲಿ ಹಲವು ಹಿಂದೂಗಳಿದ್ದಾರೆ. ಒಬ್ಬ ರಿಕ್ಷಾವಾಲ, ಒಬ್ಬ ಸಾಮಾಜಿಕ ಕಾರ್ಯಕರ್ತನ ಚಿಕ್ಕ ಮಗ, ವ್ಯಾಸಂಗದಲ್ಲಿ ಮೊದಲ ಸ್ಥಾನ ಗಳಿಸಿದ್ದ, ಪಿಎಸ್‌ಸಿ ಪರೀಕ್ಷೆಯ ಫಲಿತಾಂಶ ಕಾಯುತ್ತಿದ್ದ ಒಬ್ಬ ವಿದ್ಯಾರ್ಥಿ,, ಬೇಹುಗಾರಿಕೆ ಸಂಸ್ಥೆ ಐಬಿಯ ಒಬ್ಬ ಯುವ ನೌಕರ ಮತ್ತು ಒಬ್ಬ ಪೋಲಿಸ್ ಕಾನ್‌ಸ್ಟೇಬಲ್ ಹೀಗೆ ಬಲಿಯಾದವರ ಪಟ್ಟಿಯಲ್ಲಿದ್ದಾರೆ. ಗಾಯಗೊಂಡವರಲ್ಲೂ ಹಿಂದೂಗಳಿದ್ದಾರೆ.

ಇದಕ್ಕೆ ಹೊಣೆ ಯಾರು?

"ನಾವು ಸದಾ ಸಾಮರಸ್ಯದಿಂದ ಬದುಕಿದ್ದೆವು.. ಇದೆಲ್ಲ ನಡೆಯಲು ಹೇಗೆ ಸಾಧ್ಯವಾಯಿತು?" – ನಾವು ಭೇಟಿ ನೀಡಿದ ಪ್ರತಿಯೊಂದು ಕಡೆ, ಪ್ರತಿಯೊಂದು ಬಹುಸಂಖ್ಯಾತ ಕೋಮಿನ ಬಾಧಿತ ಕುಟುಂಬದಲ್ಲಿ ಮತ್ತು ಅವರ ನೆರೆಕರೆಯಲ್ಲಿ ಸಾಮಾನ್ಯವಾಗಿ ಇಂತಹ ಮಾತೇ ಕೇಳಬಂತು.

ತನ್ನ ಗಂಡ ಎಲ್ಲಿದ್ದಾನೆಂದು ಹುಡುಕುವುರಲ್ಲೇ ಮೂರು ದಿನ ಕಳೆದ ಒಬ್ಬ ರಿಕ್ಷಾವಾಲಾನ ವಿಧವೆ ಸುನೀತಾ "ಅವನಿಗೆ ಎಂದೂ ಯಾವ ಸಮಸ್ಯೆಯೂ ಎದುರಾಗಿರಲಿಲ್ಲ. ತನ್ನ ರಿಕ್ಷಾದಲ್ಲಿ ಹಿಂದೂಗಳನ್ನು, ಮುಸ್ಲಿಮರನ್ನು ಕರೆದೊಯ್ಯುತ್ತಿದ್ದ. ಕಷ್ಟಪಟ್ಟು ಕೆಲಸ



ಮಾಡುವವ. ತಾನು ಬಾಡಿಗೆಗೆ ಕರೆದೊಯ್ಯುವವರಲ್ಲಿ ಯಾವ ವ್ಯತ್ಯಾಸವೂ ಅವನಿಗೆ ಕಾಣಿಸಿರಲ್ಲಿಲ್ಲ" ಎಂದಳು. ಮೂರು ಚಿಕ್ಕ ಮಕ್ಕಳನ್ನು ಅಪ್ಪಿಕೊಂಡು ಅಳುತ್ತಿದ್ದಳು. ಈಗ ಎಂಟು ತಿಂಗಳ ಗರ್ಭಿಣಿಯಾಗಿರುವ ಅವಳಿಗೆ ಯಾವುದೇ ಆದಾಯದ ದಾರಿಗಳಿಲ್ಲ.

ಕರಾಳ, ವಿಭಜನಕಾರಿ, ಧ್ವಂಸಕಾರಿ ಶಕ್ತಿಗಳಿಗೆ ಹಿಂದೂ ಜೀವಗಳ ಹಾನಿ ಒಂದು ಆನುಷಂಗಿಕ ನಷ್ಟ ಅಷ್ಟೇ. ಹಿಂಸಾಚಾರ ಪ್ರಚೋದಿಸಲು ಹೊಣೆಗಾರರಾದ ಅವರು, ಈಗ ಮತ್ತೆ ಅವೇ ಬಾಧಿತ ಕುಟುಂಬಗಳ ದುರಂತಗಳನ್ನು ಬಳಸಿಕೊಂಡು ಮತ್ತಷ್ಟು ಕೋಮು ವಿಭಜನೆ ನಡೆಸಲು ಪ್ರಯತ್ನ ನಡೆಸಿದ್ದಾರೆ. ದಿಲ್ಲಿಯ ಇತರ ಜಿಲ್ಲೆಗಳಲ್ಲಿ, ಈ ರೀತಿ ಕೊಲ್ಲಲ್ಪಟ್ಟ ಹಿಂದೂಗಳ ಹೆಸರು ಹೇಳಿಕೊಂಡು ಉದ್ರೇಕಕಾರಿ ಘೋಷಣೆಗಳೊಂದಿಗೆ ಮುಯ್ಯಿ ತೀರಿಸುವ ಕರೆಗಳೊಂದಿಗೆ ಮೆರವಣಿಗೆಗಳನ್ನು ನಡೆಸಲಾಗುತ್ತಿದೆ. ಬಿಜೆಪಿ–ಆರೆಸ್ಸೆಸ್‌ಗೆ ಸಂವಿಧಾನಿಕ ಮೌಲ್ಯಗಳು, ಪ್ರಜಾಪ್ರಭುತ್ವ ಮತ್ತು ಮಾನವ ಶಿಷ್ಟತೆಯ ಮೇಲೆ

ಪುಟ 15 ನೋಡಿ





ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಕರ್ನಾಟಕದಲ್ಲಿ ರೈತ ಆತ್ಮಹತ್ಯಾ ಕುಟುಂಬಗಳಲ್ಲಿ ಮಹಿಳಾ ರೈತರ ಸ್ಥಿತಿಗತಿ

2011ರ ಜನಗಣತಿಯಲ್ಲಿ ದೇಶದ ಒಟ್ಟೂ ರೈತರ 5.5% ಭಾಗ ಮಾತ್ರ ಕರ್ನಾಟಕದ ರೈತರಿದ್ದರು. ದೇಶದ ಒಟ್ಟೂ ಕೂಲಿಕಾರರಲ್ಲಿ ಕರ್ನಾಟಕದ ಪಾಲು ಕೇವಲ 4.9% ಇತ್ತು. ಆದರೆ ರೈತರ ಆತ್ಮಹತ್ಯೆಗಳನ್ನು ಲೆಕ್ಕ ಹಾಕಿದಾಗ ಕಳೆದ 20 ವರ್ಷಗಳಲ್ಲಿ ದೇಶದಲ್ಲಾದ ಒಟ್ಟೂ ರೈತ ಆತ್ಮಹತ್ಯೆಗಳಲ್ಲಿ ಕರ್ನಾಟಕದ ಪಾಲು 13.5%, ಇತ್ತೀಚಿನ ವರ್ಷಗಳಲ್ಲಿ ಅದು ಇನ್ನೂ ಹೆಚ್ಚಾಗಿ 18–20% ಗೇರಿದೆ. ಚಿಕ್ಕಮಗಳೂರು, ದಾವಣಗೆರೆ, ಮಂಡ್ಯ, ಮೈಸೂರು, ಶಿವಮೊಗ್ಗ ಜಿಲ್ಲೆಗಳು ಅತಿ ಹೆಚ್ಚು ರೈತ ಆತ್ಮಹತ್ಯೆಗಳನ್ನು ಕಂಡಿವೆ. ಇದರಲ್ಲೂ ಪೊಲೀಸ್ ದಾಖಲೆಗಳ ಅಂಕಿ ಅಂಶಗಳೇ ಬೇರೆ ಹೇಳುತ್ತವೆ, ಕೃಷಿ ಇಲಾಖೆಯ ಅಂಕಿ ಅಂಶಗಳೇ ಬೇರೆ ಹೇಳುತ್ತವೆ. ಕೃಷಿ ಇಲಾಖೆಯು ಸ್ವಂತ ಭೂಮಿಯನ್ನು ಹೊಂದಿರುವವರಿಗೆ ಮಾತ್ರ ಆ ಕೇಸಿನ ಬಗ್ಗೆ ತನಿಖೆ ನಡೆಸಿ ಪರಿಹಾರ ಮತ್ತು ಬೆಂಬಲ ನೀಡಲು ಮುಂದಾಗುತ್ತದೆ. ಸ್ಥಳೀಯರ ವಿವೇಚನೆಗೆ ಬಹಳಷ್ಟನ್ನು ಬಿಟ್ಟುಬಿಡುತ್ತದೆ. ಬೇರೆ ಬೇರೆ ಕಾರಣಗಳಿಂದಾಗಿ ಅನೇಕ ಕೇಸುಗಳಿಗೆ ಅತ್ಯಂತ ಅವಶ್ಯಕತೆ ಇದ್ದೂ ಪರಿಹಾರವಾಗಲೀ ನ್ಯಾಯವಾಗಲೀ ದೊರೆಯುವುದಿಲ್ಲ. ರಾಷ್ಟ್ರೀಯ ಕ್ರೈಮ್ ಬ್ಯುರೋದ ಮಾಹಿತಿಯ ಪ್ರಕಾರ ಕರ್ನಾಟಕದಲ್ಲಿ 2016–18ರ ವರೆಗೆ ಕೇವಲ 41.9% ರೈತ ಆತ್ಮಹತ್ಯೆ ಕುಟುಂಬಗಳಿಗೆ ಪರಿಹಾರ ದೊರೆತಿದೆ. ಬಹುಶಃ ಕೃಷಿ ಇಲಾಖೆಯ ಅಂಕಿ ಅಂಶಗಳನ್ನು ತೆಗೆದು ನೋಡಿದರೆ ಈ ಸಂಖ್ಯೆ ಇನ್ನೂ ಕಡಿಮೆಯಾಗಬಹುದು.



ರೈತ ಕುಟುಂಬಗಳಲ್ಲಿ ಆತ್ಮಹತ್ಯೆಗಳು ಯಾಕಾಗುತ್ತವೆ ಎಂಬುದರ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿರಬಹುದು, ಆತ್ಮಹತ್ಯೆಯ ಕುರಿತು ಸರಕಾರದಿಂದ ತನಿಖೆಗಳಾಗಿರಬಹುದು, ಕೃಷಿ ಬಿಕ್ಕಟ್ಟು ನಿವಾರಣೆಗೆ ಸರಕಾರದಿಂದ ಸಾಲಮನ್ನಾದಂಥ ಯೋಜನೆಗಳು ಬಂದಿರಬಹುದು, ಆದರೆ ರೈತ ಆತ್ಮಹತ್ಯೆಗಳಾಗುತ್ತವೆ, ಇಡೀ. ಕುಟುಂಬದ ಮೇಲೆ ಅದರ ಪರಿಣಾಮಗಳೇನೇನು ಎಂಬುದನ್ನು ಸಮಗ್ರವಾಗಿ ಮಹಿಳಾ ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನಗಳು ನಮಗೆ ಎಲ್ಲಿಯೂ ಕಾಣಸಿಗುವುದಿಲ್ಲ.

ಕರ್ನಾಟಕದ ಮಹಿಳಾ ಕಿಸಾನ್ ಅಧಿಕಾರ್ ಮಂಚ್ ಇಂಥಾದ್ದೊಂದು ಅಧ್ಯಯನವನ್ನು ಕೈಗೊಂಡು 2019ರಲ್ಲಿ ಕರ್ನಾಟಕದ 5 ಜಿಲ್ಲೆಗಳಲ್ಲಿ 50 ಕುಟುಂಬಗಳನ್ನು ಸಂದರ್ಶಿಸಿ ಅಲ್ಲಿ ರೈತ ಆತ್ಮಹತ್ಯೆಯ ಪರಿಣಾಮ ಅವರ ಮಹಿಳೆಯರ ಮೇಲೇನೇನಾಗಿದೆ ಎಂಬುದನ್ನು ಅಭ್ಯಾಸ ಮಾಡಿತು. ರಾಜ್ಯದ ಕೃಷಿ ಇಲಾಖೆಯು ಕೊಟ್ಟ ಅಂಕಿ ಅಂಶಗಳನ್ನೇ ಆಧರಿಸಿ, ಮಂಡ್ಯ, ಮೈಸೂರು, ತುಮಕೂರು, ಧಾರವಾಡ, ಕಲಘಟಗಿ ತಾಲೂಕುಗಳಲ್ಲಿ ಅಧ್ಯಯನ ನಡೆಸಿತು. ಈ ತಾಲೂಕುಗಳಲ್ಲಿ ಅಧ್ಯಯನ ಮಾಡಿದ್ದು ನಮ್ಮಲ್ಲಿರುವ ಸಂಪನ್ಮೂಲ ಬಳಸಿ ನಮ್ಮ ಅನುಕೂಲದಿಂದ ಮಾಡಿದ್ದೇ ಹೊರತು ಇನ್ನಾವ ಕಾರಣಕ್ಕೂ ಅಲ್ಲ. ಅಧ್ಯಯನದಲ್ಲಿ ಕಂಡುಬಂದ ಅಂಶಗಳು ಇಂತಿವೆ:

1. ಅಧ್ಯಯನದ ವ್ಯಾಪ್ತಿ:

ಒಟ್ಟೂ 5 ಜಿಲ್ಲೆಗಳ, 12 ತಾಲೂಕುಗಳ 42 ಹಳ್ಳಿಗಳ 52 ರೈತ ಆತ್ಮಹತ್ಯಾ ಕುಟುಂಬಗಳನ್ನು ಸಂದರ್ಶಿಸಲಾಯಿತು. ಆ ಕುಟುಂಬದ ಹೆಣ್ಣುಮಗಳ ಸಾಮಾಜಿಕ ಸ್ಥಿತಿಗತಿ, (ಅವರ ವಯಸ್ಸು, ಜಾತಿ, ಶಿಕ್ಷಣವೆಷ್ಟಾಗಿತ್ತು ಮುಂತಾದವು) ಹೆಣ್ಣುಮಗಳ ಆರ್ಥಿಕ ಸ್ಥಿತಿ ಹೇಗಿದೆ, (ಸದ್ಯಕ್ಕೆ ಏನು ಮಾಡಿಕೊಂಡಿದ್ದಾಳೆ, ಇನ್ನೂ ಇರುವ ಸಾಲವೆಷ್ಟು ಮುಂತಾದವು), ಜಮೀನು, ಮನೆ, ಸಾಕುಪ್ರಾಣಿಗಳ ಮಾಲಿಕತ್ವ ಎಷ್ಟರ ಮಟ್ಟಿಗೆ ಸಾಕಾರವಾಗಿದೆ, ಇಂದು ಹಳ್ಳಿಯಲ್ಲಿ ಅವಳಿಗೆ ಸಾಮಾಜಿಕ ಬೆಂಬಲ ಎಷ್ಟು ಸಿಕ್ಕಿದೆ (ಯಾವುದೇ ಕಳಂಕ ತಾರತಮ್ಯವಿದೆಯೆ, ಸ್ವಸಹಾಯ ಗುಂಪುಗಳಲ್ಲಿ ಸದಸ್ಯತ್ವವಿದೆಯೇ?), ಪರಿಹಾರ ಅವಳ ಕೈಗೆ ಸಿಕ್ಕಿದೆಯೇ ಮುಂತಾದ ವಿಚಾರಗಳ ಮೇಲೆ ಪ್ರಶ್ನಾವಳಿಗಳನ್ನಿಟ್ಟೊಂಡು ಅಧ್ಯಯನ ನಡೆಸಲಾಯಿತು. ಈ ಅಧ್ಯಯನದ ಆಧಾರದ ಮೇಲೆ ಈ ಕೆಳಗಿನ ಶಿಫಾರಸುಗಳನ್ನು ಕೈಗೊಳ್ಳಲಾಗಿದೆ.

2. ರೈತ ಮಹಿಳೆಯ ಸ್ಥಿತಿ:

ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ ಮತ್ತವನ ಹೆಂಡತಿ ಇಬ್ಬರೂ 31–55 ವರ್ಷ ವಯಸ್ಸಿನ ಪುರುಷನ ಮಧ್ಯೆ ಇದ್ದು ಸರಾಸರಿ ವಯಸ್ಸು 46.6 ಇದ್ದು, ಮಹಿಳೆಯ ಸರಾಸರಿ ವಯಸ್ಸು 43.1 ಇವೆ. 49% ಹೆಣ್ಣು ಮಕ್ಕಳು ಅಶಿಕ್ಷಿತರಿದ್ದಾರೆ. ಹೆಚ್ಚಿನ ದಂಪತಿಗಳಿಗೆ ಒಬ್ಬರೋ ಇಬ್ಬರೋ ಮಕ್ಕಳಿದ್ದು, ಗಂಡ ಆತ್ಮಹತ್ಯೆ ಮಾಡಿಕೊಂಡಾಗ ಆಸರೆಗೆ ಹೆಚ್ಚಿನ ಅವಕಾಶಗಳಿರಲಿಲ್ಲ. 63% ಮಹಿಳೆಯರು ತಮ್ಮಷ್ಟಕ್ಕೆ ತಾವಿದ್ದಾರೆ. 3 ಮಹಿಳೆಯರು ಸಂಪೂರ್ಣ ಏಕಾಂಗಿ ಜೀವನ ನಡೆಸುತ್ತಿದ್ದಾರೆ. 30% ಕೇಸುಗಳಲ್ಲಿ ಮಾತ್ರ ಮನೆಯ ಮಾಲಕತ್ವ ಆಕೆಗೆ ಲಭಿಸಿದೆ.

3. ಮದುವೆಯಾಗಿ ಎಷ್ಟು ವರ್ಷ, ಸಾಲ ತೆಗೆದುಕೊಳ್ಳುವ ವಿಚಾರದಲ್ಲಿ ಆಕೆಯ ಅಭಿಪ್ರಾಯ:

49% ಕೇಸುಗಳಲ್ಲಿ ಮದುವೆಯಾದ 16–30 ವರ್ಷಗಳ ನಂತರ ಈ ಅವಘಡ ಸಂಭವಿಸಿದ್ದು, ಕೇವಲ 28% ಕೇಸುಗಳಲ್ಲಿ ಮಾತ್ರ ಸಾಲ ತೆಗೆದುಕೊಳ್ಳುವ ಬಗ್ಗೆ ಆಕೆಗೂ ಪೂರ್ತಿಯಾಗಿ ಗೊತ್ತಿತ್ತು.

4. ಮಹಿಳೆಯ ಜೀವನೋಪಾಯ:

63% ಕೇಸುಗಳಲ್ಲಿ ಜೀವನೋಪಾಯಕ್ಕೆ ಆ ಮಹಿಳೆಯು ಕೃಷಿಯನ್ನೇ ಮುಂದುವರೆಸಿದ್ದಾಳೆ. ಅದರಲ್ಲೂ 47% ಮಹಿಳೆಯರು ರೈತರಾಗಿಯೇ ಮುಂದುವರೆದಿದ್ದಾರೆ. ಇನ್ನು ಕೆಲ ಮಹಿಳೆಯರು ಗಂಡನ ಆತ್ಮಹತ್ಯೆಯ ನಂತರ ಕೃಷಿಕೂಲಿಗಿಳಿದಿದ್ದಾರೆ.

5. ಮುಖ್ಯ ಬದಲಾವಣೆಗಳು:

ರೈತ ಆತ್ಮಹತ್ಯೆಯ ನಂತರ ಮಹಿಳೆಯ ಜೀವನದಲ್ಲಿ ಆದ ಪ್ರಮುಖ ಬದಲಾವಣೆಯ ಕುರಿತು ಆಕೆ ಹಂಚಿಕೊಂಡಿದ್ದಾಳೆ. ಅವಳಿಗೆ ಭೂಮಾಲಿಕತ್ವವನ್ನು ಕೊಡಲು ಹೆಚ್ಚಿನ ಕುಟುಂಬಗಳು ತಯಾರಾಗಿಲ್ಲ. ಹೊಲದಲ್ಲಿ ಏನೇನು ಬೆಳೆಯುತ್ತಿದ್ದರೋ ಅದೂ ಕಡಿಮೆಯಾಗಿದೆ. ಅದಕ್ಕೆ ಕಾರಣಗಳು ಬೇರೆ ಬೇರೆ ಇವೆ. ಹಾಗೆಯೇ ಮನೆಯಲ್ಲಿ ಪಶು ಸಾಕಾಣಿಕೆಯೂ ಕೂಡ ಕಡಿಮೆಯಾಗಿದೆ.

6. ಆ ಮಹಿಳೆಯ ಸ್ಥಿತಿಗತಿ:

49 ಕೇಸುಗಳಲ್ಲಿ 8 ಕೇಸುಗಳು ಅಂದರೆ 16% ಕೇಸುಗಳಲ್ಲಿ ಉಳುಮೆ ಮಾಡುತ್ತಿದ್ದ ರೈತರೀಗ ಕೃಷಿ ಕೂಲಿಕಾರರಾಗಿ ಪರಿವರ್ತನೆಯಾಗಿದ್ದಾರೆ. ಭೂಮಿಯನ್ನು ಒಂದೋ, ಬೇರೆಯವರಿಗೆ ಮಾಡಲು ಕೊಡಲಾಗಿದೆ ಅಥವಾ ಹಾಗೆಯೇ ಬೀಳು ಬಿಡಲಾಗಿದೆ ಅಥವಾ 'ಸಾಲಗಾರನ ಕೈಯಲ್ಲಿದೆ. 6% ಕೇಸುಗಳಲ್ಲಿ ಮಹಿಳೆಯು ತನ್ನ ತವರಿಗೆ ಹಿಂತಿರುಗಿಬಿಟ್ಟಿದ್ದಾಳೆ. ಗಂಡನ ಮನೆಯಿಂದ ಹೊರಹಾಕಲ್ಪಟ್ಟ ಉದಾಹರಣೆಗಳೂ ಇವೆ. 12% ಕೇಸುಗಳಲ್ಲಿ ಮನೆಯ ಸಾಮಾನುಗಳು ಜಪ್ತಿಯಾಗುವ ಭೀತಿಯಲ್ಲೇ ರೈತ ಮಹಿಳೆ ಇದ್ದಾಳೆ. 22% ಕೇಸುಗಳಲ್ಲಿ ತನಗೆ ಬಂದ ಪರಿಹಾರ ಧನವನ್ನು ಆತ್ಮಹತ್ಯೆ ಮಾಡಿಕೊಂಡ ರೈತ ಉಳಿಸಿಹೋದ ಸಾಲವನ್ನು ತೀರಿಸಲಿಕ್ಕಾಗಿಯೇ ಹೆಚ್ಚಿನ ಭಾಗವನ್ನೋ, ಪೂರ್ತಿ ಹಣವನ್ನೋ ವಿನಿಯೋಗಿಸಿದ್ದಾಳೆ. ಒಟ್ಟೂ 4 ಕೇಸುಗಳಲ್ಲಿ ಮಕ್ಕಳಿಗೆ ಶಾಲೆ ಬಿಡಿಸಲಾಗಿದೆ. ದೂರ ಕೆಲಸದಲ್ಲಿದ್ದ ಮಗ ಕೆಲಸವನ್ನು ಬಿಟ್ಟು ತಾಯಿಯ ಬೆಂಬಲಕ್ಕಾಗಿ ಹಳ್ಳಿಗೆ ಬಂದು ನಿಂತಿದ್ದಾನೆ. ಅಧ್ಯಯನದಲ್ಲಿ ತಂದೆ ಮಗ ಇಬ್ಬರೂ 11–18 ವರ್ಷಗಳ ಅಂತರದಲ್ಲಿ ಆತ್ಮಹತ್ಯೆ ಮಾಡಿಕೊಂಡಂಥ 3 ಕೇಸುಗಳೂ ಸಿಕ್ಕವು. ಮಹಿಳೆ ಮತ್ತವರ ಮಕ್ಕಳು ತೀವ್ರ ಆಘಾತವನ್ನನುಭವಿಸಿದ್ದು ಮಾನಸಿಕ ಒತ್ತಡ ಮತ್ತು ಆತಂಕದಲ್ಲೇ ಇದ್ದು ಅವರ ಜೊತೆಗೆ ಕುಳಿತು ಮಾತಾಡುವಂಥ ಪ್ರಯತ್ನಗಳಾಗಬೇಕಿದೆ.

7. ಸರಕಾರದ ಪರಿಹಾರ ಮತ್ತು ಪುನರ್ವಸತಿ ಯೋಜನೆಗಳು:

ಅದು ರೈತ ಆತ್ಮಹತ್ಯೆ ಎಂದು ನಿರ್ಧಾರವಾದ ಕೇಸುಗಳಲ್ಲಿ ಪರಿಹಾರ ಮತ್ತು ಹೆಚ್ಚಿನ, ವಿಧವಾ ವೇತನದ ಬಗ್ಗೆ ಜನರಿಗೆಲ್ಲ ಮಾಹಿತಿ ಇದ್ದರೂ ಕೂಡ ಸರಕಾರದಿಂದ ಶಿಕ್ಷಣಕ್ಕೆ, ಆರೋಗ್ಯಕ್ಕೆ ಸಹಾಯ ಕೃಷಿ ಇಲಾಖೆಯು ಅನೇಕ ಆತ್ಮಹತ್ಯೆಗಳನ್ನು ಬದಿಗೊತ್ತಿ ತನಗೆ ಸರಿ ಕಂಡುಬಂದ ಕೇಸುಗಳನ್ನಷ್ಟೇ ರೈತ ಆತ್ಮಹತ್ಯೆ ಎಂದು ಗುರುತಿಸಿದ್ದು ಅದರಲ್ಲೂ 71% ಕೇಸುಗಳಲ್ಲಿ ಮಾತ್ರ 5,00,000/– ರೂಪಾಯಿಗಳ ಪರಿಹಾರಧನ ದೊರೆತಿದೆ. ತಿಂಗಳಿಗೆ 2000/–ರೂ. ಪಿಂಚಣಿ ಒಟ್ಟೂ 43 ಮಹಿಳೆಯರು ಪಿಂಚಣಿಗೆ ಅರ್ಹರು ಎಂದು ಇಲಾಖೆ ಹೇಳುತ್ತಿದ್ದರೂ ಬರಿಯ 65% ಮಹಿಳೆಯರಿಗೆ ದೊರಕುತ್ತಿದೆ. ಅಂತಿಮ ಸಂಸ್ಕಾರಕ್ಕಾಗಿ ಸರಕಾರದಿಂದ ಧನಸಹಾಯ ದೊರೆತದ್ದು ಬಹಳ ಕಡಿಮೆ ಮನೆಗಳಿಗೆ ಮಾತ್ರ ಪರಿಚಾರ ಧನ ಸಿಗಲು ಧಾರವಾಡದಲ್ಲಿ ಸರಾಸರಿ 2.6 ತಿಂಗಳು ಆಗಿದ್ದರೆ ಮೈಸೂರು ತಿಂಗಳನ್ನು ತೆಗೆದುಕೊಂಡಿದೆ.

8. ಇನ್ನಿತರ ಹಕ್ಕುಗಳು:

ಎಲ್ಲಾ ಆತ್ಮಹತ್ಯಾ ಕುಟುಂಬಗಳಲೂ ರೇಶನ್ ಕಾರ್ಡುಗಳಿದ್ದರೂ ಕೇವಲ 22% ಮಾತ್ರ ಆ ಮಹಿಳೆಯರ ಹೆಸರಲ್ಲಿವೆ. 28.5% ಮಹಿಳೆಯರ ಬಳಿ ಮಾತ್ರ ಉದ್ಯೋಗ ಖಾತರಿ ಕಾರ್ಡುಗಳಿದ್ದು ಅದರಲ್ಲಿ ಕೆಲಸಕ್ಕೆ ಹೋಗಿ ಕೂಲಿ ಪಡೆಯುತ್ತಿರುವವರು ಇನ್ನೂ ಕಡಿಮ.

9. ಇನ್ನೂ ಉಳಿದುಕೊಂಡಿರುವ ಸಾಲ:

ಬಹಳಷ್ಟು ಕುಟುಂಬಗಳು–65.4%– ಖಾಸಗಿ ಸಾಲಗಾರರ ಹಿಡಿತದಲ್ಲಿ ಇನ್ನೂ ಇರುವುದು ಕಂಡುಬಂದಿದೆ. ಅದೇ ಕುಟುಂಬಗಳು ಕೋಆಪರೇಟಿವ್ ಸೊಸೈಟಿಗಳಲ್ಲಿಯೂ, ಖಾಸಗಿ ಬ್ಯಾಂಕುಗಳಲ್ಲಿಯೂ, ಮೈಕ್ರೋ ಫೈನಾನ್ಸ್ ಕಂಪನಿಗಳಲ್ಲಿಯೂ ಸಾಲಗಾರರಾಗಿವೆ. ಈ ವಾಣಿಜ್ಯ ಬ್ಯಾಂಕುಗಳು ಮತ್ತು ಕೋಆಪರೇಟಿವ್ ಸೊಸೈಟಿಗಳು ಮಾತ್ರ ಆತ್ಮಹತ್ಯೆ ಕುಟುಂಬಗಳ ಸಾಲದ ವಿಚಾರದಲ್ಲಿ ಸ್ವಲ್ಪವೂ ಮಾನವೀಯತೆ ತೋರಿಲ್ಲ.

10. ಒಂದು ಸಮಾಧಾನಕರ ವಿಚಾರವೆಂದರೆ ಈ ಹೆಣ್ಣು ಮಕ್ಕಳಾರೂ ತಾವು ಸಾಮಾಜಿಕ ಕಳಂಕವನ್ನು ಅನುಭವಿಸಿದ್ದನ್ನು ಹೇಳಲಿಲ್ಲ. ಸ್ಥಳೀಯ ಆರ್ಥಿಕತೆಗೆ ದೊಡ್ಡ ಕೊಡುಗೆ ಕೊಡುತ್ತಿರುವ ಸ್ವಸಹಾಯ ಸಂಘಗಳಲ್ಲಿ 39% ಹೆಣ್ಣು ಮಕ್ಕಳು ಮಾತ್ರ ಒಂದಲ್ಲ ಒಂದು ಸ್ವಸಹಾಯ ಸಂಘದ ಸದಸ್ಯರಾಗಿರುವುದು ಕೂಡ

ಪುಟ 10 ಕ್ಕೆ





ಆಕ್ಸ್‌ಫಾಮ್ ಗುರುತಿಸಿದಂತೆ ಸಾಮಾನ್ಯವಾಗಿ ಜಗತ್ತಿನ ಅಗರ್ಭ ಶ್ರೀಮಂತರು ಪುರುಷರು. ವಿಶ್ವದಲ್ಲಿ ಮಹಿಳೆಯರು ಮಾಡುವ ಪ್ರತಿದಿನದ 1250 ಕೋಟಿ ಘಂಟೆಗಳ ಮಹಿಳೆಯ ಕೆಲಸ ಗಣನೆಗೇ ಇಲ್ಲ. ಇದೇ ವೇಗದಲ್ಲಿ ಸಮಾಜದ ಆಲೋಚನಾ ಕ್ರಮ ಮುಂದುವರೆದರೆ ಮುಂದಿನ 210 ವರ್ಷಗಳು ಬೇಕಾಗಬಹುದು ಈ ಸ್ಥಿತಿಯಲ್ಲಿ ಸುಧಾರಣೆಯಾಗಿ ಪುರುಷ ಮಹಿಳೆಯರ ವೇತನ ರಹಿತ ದುಡಿಮೆ ಸಮಾನವೆಂದು ಎನಿಸಿಕೊಳ್ಳಲು.

ಭಾರತದ ಮನೆಗೆಲಸದ ಮಹಿಳೆಯು ಒಬ್ಬ ಕಂಪನಿಯ ಸಿ.ಇ.ಓ ಒಂದು ವರ್ಷಕ್ಕೆ ಪಡೆಯುವಷ್ಟು ಆದಾಯ ಪಡೆಯಲು 22,277 ವರ್ಷ ದುಡಿಯಬೇಕು!!! ಹಾಗೆಯೇ ಒಬ್ಬ ಸಿ.ಇ.ಓ ಆ ಮಹಿಳೆ ಒಂದು ವರ್ಷಕ್ಕೆ ಪಡೆಯುವ ವೇತನವನ್ನು ಹತ್ತು ನಿಮಿಷಕ್ಕೆ ಪಡೆಯುತ್ತಾರೆ.

ಅಂತರ್ರಾಷ್ಟ್ರೀಯ ಮಹಿಳಾ ದಿನ 2020

ಮನೆಗೆಲಸದವಳು ಸಿ.ಇ.ಓ ಆದಾಯ ಪಡೆಯಲು 22,277 ವರ್ಷ ದುಡಿಯಬೇಕು!!

ಕೆ.ಎಸ್. ವಿಮಲ

ಮಾರ್ಚ್ ಎಂಟು . . .


ಅರೆ .. ಮಾರ್ಚ್ ತಿಂಗಳು ಬಂದೇ ಬಿಟ್ಟಿದೆ . ಅದೆಷ್ಟು ಬೇಗ. ದಿನ ಕಳೆದಿದ್ದೇ ಗೊತ್ತಾಗಲಿಲ್ಲ. ಕಳೆದ ವರ್ಷಕ್ಕಿಂತ ಏನಾದರೂ ಭಿನ್ನ ವಿಷಯಗಳು, ಪ್ರಗತಿ, ಸ್ಪೂರ್ತಿ ಹೀಗೆ ಪ್ರಶ್ನೆಗಳು, ಸುಲಭವಾಗಿ ಉತ್ತರ ಸಿಗದ ಪ್ರಶ್ನೆಗಳು ಎದುರಿಗೆ ದಾಂಗುಡಿಯಿಡುತ್ತವೆ. ಯಾಕೆ ಉತ್ತರ ಸರಳವಲ್ಲ ಎಂದರೆ ಏನೂ ನಡೆದೇ ಇಲ್ಲ ಎಂದು ಹೇಳಲಾರೆ. ಹಾಗಂತ ಹೇಳು ಏನೇನು ಪ್ರಗತಿ ಸಾಧಿಸಲಾಯಿತು. ಅವುಗಳ ಫಲಾನುಭವಿಗಳು ಯಾರು ಎಂದರೆ. . . .ಥಟ್ಟಂತ ಹೇಳಲಾದೀತೆ.. ..ಊಹ್ಞೂಂ೦೦೦೦.

ಕಳೆದುಕೊಳ್ಳಬಾರದು ಕನಸುಗಳನ್ನು

ಆದರೂ ಮತ್ತೆ ಬಂತಾ ದಿನ. ಸೋಲುವ ಕಾಲುಗಳಿಗೆ ಬಲ ತುಂಬುವ, ಮುದುಡುವ ಮನಸ್ಸಿಗೆ ಸ್ಫೂರ್ತಿ, ಹೊಸ ಚೈತನ್ಯಕೊಡುವ ಆ ನೆನಪುಗಳ ದಿನ. ನಮಗಾಗಿ ತ್ಯಾಗ ಬಲಿದಾನ ಮಾಡಿದ ಆ ಮಹಿಳೆಯರು, ಅದೇ ಗಾರ್ಮೆಂಟ್ ಕಾರ್ಖಾನೆಯ ಮಹಿಳಾ ಕಾರ್ಮಿಕರು, ನಮಗಾಗಿ ಈ ದಿನವನ್ನು ಕಾದಿರಿಸಿದ ಆ ಮಹಿಳೆ ಕ್ಲಾರಾ ಝೆಟ್ಕಿನ್. .ಬಿಡುವುದಿಲ್ಲ ಇವರು ನಮ್ಮನ್ನು .. .. ವಿಮುಖರಾಗದಂತೆ ತಡೆಯುವ ಚೈತನ್ಯಗಳು. ಬೆನ್ನಟ್ಟಿ ಬರುತ್ತಾರೆ. ಹೊಣೆಯರಿತು ಮುಂದಡಿ ಇಡುವಂತೆ ಪ್ರೇರೇಪಿಸುತ್ತಾರೆ, ಇಲ್ಲವಾದಲ್ಲಿ ಇಂದು ಸುತ್ತೆಲ್ಲ ಕತ್ತಲೆ ಆವರಿಸುವಂತೆ, ಕತ್ತಲಲ್ಲಿಯೂ ಒಂದು ಮೌನದಲ್ಲಿ ಶಾಂತತೆಯನ್ನು ಅನುಭವಿಸಬಹುದಾದ ಕ್ಷಣಗಳನ್ನು ತಿಳಿಗೊಳದೊಳಕ್ಕೆ ಎಸೆಯುವ ಕಲ್ಲಿನಂತೆ ಕದಡುವ, ತಾಯಿಯಿಂದ ಅಗಲಿ ಬೆದರಿದ ಹುಲ್ಲೆಯಂತೆ ನಿಂತ ಶಾಹೀನ್ ಶಾಲೆಯ ಮಗು, ಪದ್ಯ ಬರೆದು ಓದಿದನೆಂದು ದೇಶದ್ರೋಹದ ಪಟ್ಟ ಕಟ್ಟಿಕೊಳ್ಳುವ ಕವಿ, ನಾವು ಇಲ್ಲಿಯವರೇ, ಇಲ್ಲೇ ಹುಟ್ಟಿದವರು ನಮ್ಮನ್ನೇಕೆ ಅನುಮಾನಿಸಿ ಅವಮಾನಿಸುತ್ತೀರಿ, ನೀವು ಕೇಳಿದ ಕಾಗದ ಕೊಡಲಾರೆವು ನಾವು, ಹಿಂತೆಗೆದುಕೊಳ್ಳಿ ನಿಮ್ಮ ಅಹಂಕಾರದ ಪ್ರತೀಕವಾದ ಕಾನೂನನ್ನು ಎಂದು ಶಾಂತರೀತಿಯಿಂದ ಕುಳಿತವರ ವಿರುದ್ಧ ಕತ್ತಿ ಮಸೆದು, ಅನ್ಯಾಯವಾಗಿ ಜೀವಬಲಿ ಬೇಡಿ ವಾರ ಕಾಲ ಉನ್ಮಾದಿಗಳ ಆಡಂಬೋಲವಾಗಿ ನಿಂತ ದೇಶದ ಹೆಮ್ಮೆಯ ರಾಜಧಾನಿ.. ಅಲ್ಲಿ ದೂರದಲ್ಲಿ ಅಸ್ಸಾಮಿನಲ್ಲಿ ಇಲ್ಲಿಯೇ ಹುಟ್ಟಿ ಬದುಕಿ ವರ್ಷಾನುಗಟ್ಟಲೆ ಇಲ್ಲಿಯೇ ದುಡಿದು ಬೆವರು ಹರಿಸಿ ಬಾಳಿ ಬದುಕಿದವರು ನಿನ್ನ ಹುಟ್ಟನ್ನು ದೃಢೀಕರಿಸಿಕೊ ಎನ್ನುವವರೆದುರು ಸೋತು, ನಿಂತ ನೆಲ ಕುಸಿದು ಬೋರಾಡಿ ಬಿಕ್ಕುತ್ತಿರುವ ಅಕ್ಕತಂಗಿಯರು – ಹೀಗೆ ಒಂದೇ ಎರಡೇ.. ..ಕನಸು ಕಳೆದುಕೊಳ್ಳಲು ಇದಕ್ಕಿಂತ ಹೆಚ್ಚೇನೂ ಬೇಕಿಲ್ಲ. ಆದರೆ ಕಳೆದು ಹೋಗದಂತೆ ತಡೆಯುವ ಆ ಚರಿತ್ರೆಯ ನಾರಿಯರು ಮತ್ತೆ ನೆನಪಿಸಿದ್ದಾರೆ. ಇದು ನಮ್ಮ ದಿನ ಅಂತರ ರಾಷ್ಟ್ರೀಯ ಮಹಿಳಾ ದಿನ.

ಈ ದಿನದ ಜೊತೆಗೆ ಹಲವು ಅಂಶಗಳು ತಳುಕು ಹಾಕಿಕೊಂಡಿವೆ. ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಹಕ್ಕುಗಳ ಜೊತೆಯೇ ಮಾನವಳಾಗಿ ಮಹಿಳೆಗೆ ಸಿಗಬೇಕಾದ ಅಸ್ಮಿತೆ, ಘನತೆ, ಗೌರವಗಳು ಈಗಲೂ ದಕ್ಕದಿರುವ, ಮತ್ತು ಇನ್ನಷ್ಟು ಅಧೋಗತಿಗೆ ಇಳಿಯುತ್ತಿರುವ ಸ್ಥಿತಿ ಇದೆ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ಪ್ರಕಟವಾದ ಒಂದು ಸಮೀಕ್ಷಾ ವರದಿಯೂ ಅದನ್ನು ದೃಢಪಡಿಸುತ್ತಿದೆ.

ಉದ್ಯೋಗಕ್ಕಾಗಿ ಮನೆಯಿಂದಾಚೆ ದುಡಿಯುವ ಮಹಿಳೆಯ ಕಷ್ಟ ಸಂಕಷ್ಟಗಳು ಕೆಲವು ಮಟ್ಟಿಗಾದರೂ ಕಣ್ಣಿಗೆ ಗೋಚರಿಸುತ್ತವೆ. ಆದರೆ ಕುಟುಂಬದ ನಾಲ್ಕು ಗೋಡೆಯ ಒಳಗೆ ದಣಿವರಿಯದ ದುಡಿತ, ದೈಹಿಕ ಮಾನಸಿಕ ಶ್ರಮ, ದೌರ್ಜನ್ಯಗಳು ಈಗಲೂ ನಡೆಯುತ್ತವೆ ಅಷ್ಟೇ ಅಲ್ಲ ಅವು ಸರ್ವೇ ಸಾಮಾನ್ಯವೆಂಬಂತೆ ಮೌನ ಸಮ್ಮತಿ ಸಮಾಜದಲ್ಲಿಯೂ, ಕೃತ್ಯ ಎಸಗುವವರಲ್ಲಿಯೂ ಹಾಗೂ ಬಲಿಯಾಗುವವರಲ್ಲಿಯೂ ಇದೆ ಎಂಬುದು ಮತ್ತೊಮ್ಮೆ ಈ ಸಮೀಕ್ಷೆಯಿಂದ ದೃಢಪಟ್ಟಿದೆ.



ಆಕ್ಸ್‌ಫಾಮ್ ಸಮೀಕ್ಷೆ ಹೊರತಂದ ಸತ್ಯಗಳು:

ಬಹಳ ಕುಟುಂಬಗಳಲ್ಲಿ ಮನೆವಾರ್ತೆ ಎಂಬುದು–ಮಕ್ಕಳ ಲಾಲನೆ ಪಾಲನೆ, ಗೃಹಕೃತ್ಯಗಳು, ಹಿರಿಯರ ವೃದ್ಧರ ದೇಖರೇಖೆ, ನೆಂಟರಿಷ್ಟರ ಯೋಗಕ್ಷೇಮ ಇವೆಲ್ಲವೂ ಆಕೆಗೆ ಮೀಸಲು. ಅವಳು ಮನೆಯ ಹೊರಗೂ ದುಡಿಯುವವಳಾಗಿದ್ದಾಗ್ಯೂ ಇದು ಸಹಜೀಕರಣದ ನೆಲೆಯಲ್ಲಿ ನಡೆಯುತ್ತದೆ. ಮತ್ತು ಅದಕ್ಕೆ ಪ್ರೀತಿಯ ಕರ್ತವ್ಯದ ಲೇಪನವೂ ಬಳಿದು ಬಣ್ಣ ಬಣ್ಣವಾಗಿ ಕಾಣಿಸುತ್ತದೆ. ಆಕೆಯ ಶ್ರಮ, ಮಾನಸಿಕ, ಭಾವನಾತ್ಮಕ ಇವಾವವೂ ಗಣನೆಗೆ ಇರುವುದಿಲ್ಲ. ಯಾಕೆಂದರೆ ಆಕೆ ಮಹಿಳೆ. ಕುಟುಂಬದ ಕಣ್ಣು. ಯಾವತ್ತೂ ಇದೊಂದು ವೇತನ ರಹಿತ ಕೆಲಸ, ಆದರೆ ಸಮಾಜದ ಪ್ರಗತಿಯಲ್ಲಿ ಅತ್ಯಮೂಲ್ಯ ಕೊಡುಗೆ ನೀಡುತ್ತದೆ ಎಂದು ಪರಿಗಣಿಸುವುದಿಲ್ಲ. ಇದು ಇಡೀ ವಿಶ್ವದ ಒಂದು ಪರಿಸ್ಥಿತಿ ಎಂದು ಸಮೀಕ್ಷೆ ಹೇಳುತ್ತದೆ. ಈ ವೇತನರಹಿತ ಮತ್ತು ಹೆಚ್ಚಿನ ಬಾರಿ ಯಾತನಾಮಯ ದುಡಿಮೆಯ ಅವಧಿ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ವಿಶ್ವದಲ್ಲಿ ಮಹಿಳೆಯರು ಮಾಡುವ ವೇತನ ರಹಿತ ಕೆಲಸ ದಿನವೊಂದಕ್ಕೆ 12.5 ಬಿಲಿಯನ್ ಘಂಟೆಗಳು! ಇದು 1.5 ಬಿಲಿಯನ್ ಜನ ಎಂಟುಘಂಟೆಗಳ ಕಾಲ ವೇತನವಿಲ್ಲದೇ ಮಾಡುವ ಕೆಲಸಕ್ಕೆ ಸಮ.

ಮಹಿಳೆಯರ ವೇತನ ಸಹಿತ ಮತ್ತು ವೇತನ ರಹಿತ ಈ ಎರಡೂ ಕೆಲಸಗಳನ್ನು ಸೇರಿಸಿ ಲೆಕ್ಕ ಹಾಕಿದರೆ ಅದು ಆರು ವಾರ ಪೂರ್ಣಕಾಲದ ಕೆಲಸವನ್ನು ಮಾಡುವ ಪುರುಷರಿಗಿಂತ ಹೆಚ್ಚಿನದು ಎಂದೂ ಸಮೀಕ್ಷೆ ಹೇಳುತ್ತದೆ. ಹೀಗೆ ಮಹಿಳೆಯರು ಮತ್ತು ಬಾಲಕಿಯರು ಮಾಡುವ ವೇತನ ರಹಿತ 'ಸೇವೆ'ಯ ಮೊತ್ತ ಜಾಗತಿಕವಾಗಿ ಪ್ರತಿ ವರ್ಷಕ್ಕೆ 10.8 ಟ್ರಿಲಿಯನ್ ಡಾಲರ್ ಎಂದರೆ ವಿಶ್ವದ ತಂತ್ರಜ್ಞಾನ ಕೈಗಾರಿಕೆಯ ಮೂರುಪಟ್ಟು ಎಂದು ಅಂದಾಜಿಸಲಾಗಿದೆ.

ಹೀಗೆ ಅನಿಯಮಿತ, ಅಸಮಾನ ನೆಲೆಯ ಕೆಲಸದ ಹೊರೆಯಿಂದ ಜರ್ಝರಿತಲಾಗುವುದರ ಜೊತೆ ಈ ಸ್ಥಿತಿ ಇನ್ನಷ್ಟು ಲಿಂಗ ಅಸಮಾನತೆಯನ್ನು, ಬಡತನ ದಾರಿದ್ರ್ಯ, ದೈಹಿಕ ಮಾನಸಿಕ ಹಿಂಸೆಯನ್ನು ಹೆಚ್ಚಿಸುತ್ತದೆ.

ಐ.ಎಲ್.ಓ ಪ್ರಕಾರ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ವಿಶ್ವದ 3/4 ರಷ್ಟು ವೇತನ ರಹಿತ ಸೇವೆಯ ಕೆಲಸ ಮಾಡುತ್ತಾರೆ. ಮತ್ತು ಮಹಿಳೆಯರು 2/3 ರಷ್ಟು ಕೆಲಸ ಮಾಡುತ್ತಾರೆ.

ಭಾರತದಲ್ಲಿ:

ಇಡೀ ವಿಶ್ವದಲ್ಲಿಯೇ ಹೀಗಿದೆ ಎಂದ ಮೇಲೆ ಭಾರತದಲ್ಲಿ ಭೋಜ್ಯೇಷು ಮಾತಾ ಶಯನೇಷು ರಂಭಾ ಎಂದು ವರ್ಣಿಸಿಕೊಳ್ಳುವ ದೇಶದಲ್ಲಿ ಪರಿಸ್ಥಿತಿ ಹೇಗಿದೆ ಎಂದು ನೋಡಬೇಕಲ್ಲವೇ?

ಇಲ್ಲಿ ಪುರುಷರಿಗಿಂತ 9 ಪಟ್ಟು ಹೆಚ್ಚು ಪಾಲು ಮಹಿಳೆಯರು ವೇತನರಹಿತ ಕೆಲಸ ಮಾಡುತ್ತಾರೆ. ಪುರುಷರು 31 ನಿಮಿಷ ಮಾಡಿದರೆ ಮಹಿಳೆಯರು 297 ನಿಮಿಷಗಳಷ್ಟು ಮಾಡುತ್ತಾರೆ ಎಂದು ವರದಿ ಹೇಳುತ್ತದೆ. ಇದು ನಗರ ಪ್ರದೇಶಗಳಲ್ಲಿ ಮಹಿಳೆಯರು 312 ನಿಮಿಷ ಪುರುಷರು 29 ನಿಮಿಷ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು 291 ನಿಮಿಷ ಪುರುಷರು 32 ನಿಮಿಷ.

ಹೀಗೆ ತನ್ನ ಸಮಯವನ್ನು ಅನಿವಾರ್ಯವಾಗಿ ವೇತನವೂ ಇಲ್ಲದೇ, ಪರಿಗಣನೆಯೂ ಇಲ್ಲದೇ ಕೆಲಸ ಮಾಡುವ ಮಹಿಳೆಯ ವಿದ್ಯಾಭ್ಯಾಸ, ಆಕೆಯ ಕೆಲಸದ ಕ್ಷಮತೆಗಳ ಮೇಲೆ ಕೂಡಾ ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಪುರುಷರು ಗೃಹಕೃತ್ಯದಲ್ಲಿ ಕೈಜೋಡಿಸುತ್ತಾರೆ ಎಂದರೂ ಅಲ್ಲೊಂದು ಅಘೋಷಿತ ಆಯ್ಕೆ ಸ್ವಾತಂತ್ರ್ಯವಿರುತ್ತದೆ. ತಮ್ಮ ಸಮಯ, ಅಗತ್ಯಗಳನ್ನನುಸರಿಸಿ ಅವರು ಅದನ್ನು ಮಾಡುತ್ತಾರೆ. ಆದರೆ ಮಹಿಳೆಗೆ ಅಂಥಹ ಲಕ್ಷುರಿ ಇರುವುದಿಲ್ಲ. ಎಂಥದ್ದೇ ಸಮಯದಲ್ಲಿಯೂ ಆಕೆ ಅದನ್ನು ನಿರ್ವಹಿಸಲೇ ಬೇಕಾದ ಒತ್ತಡಕ್ಕೆ ಒಳಗಾಗುತ್ತಾಳೆ. ಬಹಳ ಸಾರಿ ಅದು ಆಕೆಗೆ ಸಿಗಬಹುದಾದ ವೇತನ ಸಹಿತವಾದ ಕೆಲಸದ ಜೊತೆ ರಾಜಿ ಮಾಡಿಕೊಳ್ಳುವ ಮಜಬೂರಿಯನ್ನೂ ಸೃಷ್ಟಿಸುತ್ತದೆ. ಈ ಪರಿಗಣಿಸದ ಕೆಲಸದ ಒತ್ತಡಕ್ಕೆ ಸರಿ ಹೊಂದುವ ಕೆಲಸವನ್ನೇ ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆ ಹೊಂದಾಣಿಕೆ ಮಾಡಿಕೊಳ್ಳುವ ಬಲವಂತ ಒಳಗೇ ಎದ್ದೇಳುತ್ತದೆ.

ಮಹಿಳೆಯಾದರೆ ಹೊರೆ, ದಲಿತಳಾದರಂತು ಹೊರೆ ಹೊರೆಯ ಸಾಲು

ಇಲ್ಲಿ ಮತ್ತೆ ಶ್ರೇಣೀಕರಣ–ಒಂದು ಉದಾಹರಣೆ ತೆಗೆದುಕೊಂಡರೆ ಹೀಗೆ ಒತ್ತಡಕ್ಕೆ, ದುಡಿಮೆಯ ನೊಗಕ್ಕೆ ಸಿಲುಕಿ ನಲುಗುವ ಹೆಣ್ಣು ದಲಿತಳಾಗಿದ್ದರೆ.. .. ಆಕೆಯ ಹೆಸರು ಮುತ್ತಮ್ಮ. ಬೆಳಿಗ್ಗೆ 3 ಘಂಟೆಗೆ (ನಾವು ಬಹಳ ಜನ ಅದನ್ನು ಬೆಳಿಗ್ಗೆಯೆಂದು ಯೋಚಿಸಲಾರೆವು ಕೂಡ ಯಾಕೆಂದರೆ ಅದು ನಮ್ಮ

ಪುಟ 10 ಕ್ಕೆ



ಅಂತರ್ರಾಷ್ಟ್ರೀಯ ಮಹಿಳಾ ದಿನ 2020 .... ಪುಟ 9 ರಿಂದ

ಸುಖ ನಿದ್ರೆಯ ಘಳಿಗೆ) ಎದ್ದು ತನ್ನ ಕುಟುಂಬಕ್ಕೆ ಆಹಾರ ತಯಾರಿಸುತ್ತಾಳೆ. ಮೂರು ಕಿ.ಮೀ ನಡೆದು ಹೋಗಿ ಮನೆಗೆ ಬೇಕಾದ ನೀರು ಹೊತ್ತು ತರುತ್ತಾಳೆ. ಅದನ್ನು ದಿನಾಲೂ ಮೂರು ಬಾರಿ ಮಾಡುತ್ತಾಳೆ. ಎಂದರೆ ಮನೆಯ ಜನರಿಗೆ ಬೇಕಾದ ನೀರಿನ ವ್ಯವಸ್ಥೆಗಾಗಿ ಆಕೆ ದಿನವೊಂದಕ್ಕೆ 18 ಕಿಮೀ ನಡೆಯುತ್ತಾಳೆ. ಯಾಕಂದರೆ ಆಕೆ ದಲಿತಳು.. ..ಹಾಗಾಗಿ ಮನೆಯ ಸಮೀಪದ ಬಾವಿಯಲ್ಲಿ ನೀರು ತೆಗೆದುಕೊಳ್ಳಲು ಅವಳ ಜಾತಿಯವರಿಗೆ ನಿಷಿದ್ಧವಿದೆ. ನಂತರ ಅವಳು ದಿನಗೂಲಿಗೆ ಕೆಲಸಕ್ಕೆ ಹೋಗುತ್ತಾಳೆ. ಮತ್ತು ತಿರುಗಿ ಬಂದ ನಂತರ ಅದೇ ಚಕ್ರ ತಿರುಗುತ್ತದೆ. ಆಕೆಯ ದಿನ ಮುಗಿಯುವಾಗ ಮಧ್ಯರಾತ್ರಿಯಾಗುತ್ತದೆ. ಎಂದರೆ ಆಕೆಯ ಬದುಕಿನಲ್ಲಿ ರಾತ್ರಿ ಕಡಿಮೆ. ಹಗಲೇ ಹಗಲು ಬೆಳಕಿರದ ಹಗಲು. ಹಾಗೆಯೇ ಮನೆಗೆಸಲದ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಬಡ ಹೆಣ್ಣುಮಕ್ಕಳು. ಅವರೂ ಕೂಡಾ ದುಡಿಯುವ ಮನೆಯ ಕೆಲಸ, ತನ್ನ ಮನೆಯ ಕೆಲಸ ಮತ್ತು ಇತರ ಎಲ್ಲರಂತೆಯೇ ಕುಟುಂಬದ ಎಲ್ಲರ ಸೇವೆ ಹೆಣ್ಣಾಗಿ. ಹಾಗೆ ಕೆಲಸ ಮಾಡುವ ಮಹಿಳೆಯರು ವಿಶ್ವದಲ್ಲಿ 34 ಲಕ್ಷ ಮತ್ತು ಅವರ ವೇತನ ಯಾವ್ಯಾವುದೋ ಕಾರಣಗಳಿಗೆ ಕಡಿತಗೊಳ್ಳುವುದು ಸುಮಾರು 800 ಕೋಟಿ ಡಾಲರ್ ಗಳು ಎಂದರೆ ಅವರ ವೇತನದ 60%.

ಹಿಂಸೆ ಮತ್ತು ಬಡತನದ ಬಲಿಪಶುಗಳು

ಇಷ್ಟೆಲ್ಲ ಕೆಲಸ ಮಾಡಿದ ಆ ಮಹಿಳೆಗೆ ಎರಡು ಸಾಂತ್ವನದ ಮಾತು ಮನೆಯವರಿಂದಲೂ ಸಿಗುವುದಿಲ್ಲ. ಸಮಾಜವಂತೂ ಅವರನ್ನು ಪರಿಗಣೀಸುವುದೇ ಇಲ್ಲ. ಮುತ್ತಮ್ಮನಂಥವರು ಬೇಕಾದಷ್ಟು ಬಾರಿ ಹೇಳುತ್ತಾರೆ, ನನಗೆ ಯಾವುದಕ್ಕೂ ಸಮಯವಿಲ್ಲ. ಸಾಯಲೂ ಇಲ್ಲ. ನಾನು ಸತ್ತರೆ ಇವರೆಲ್ಲರಿಗೆ ದುಡಿದು ತಂದು ಮಾಡಿ ಹಾಕುವವರು ಯಾರು ಎನ್ನುತ್ತಾಳೆ. ಹೌದು ಆಕೆ ಉರುವಲು, ನೀರು ಮನೆಗೆ ಬೇಕಾದ ಪದಾರ್ಥಗಳನ್ನು ತಂದು ಹಾಕದಿದ್ದರೆ, ಹಾಗೆಯೇ ಅಕಸ್ಮಾತ್ ಆಕೆ ಮಾಡಿಲ್ಲವೆಂದರೆ ಗಂಡ ಕುಡಿದು ಬಂದು ಬಡಿಯುತ್ತಾನೆ.

ಆಕ್ಸ್‌ಫಾಮ್ ಭಾರತದ ಹಲವು ರಾಜ್ಯಗಳಲ್ಲಿ 2019ರಲ್ಲಿ ಮಾಡಿದ ಸಮೀಕ್ಷೆಯ ಪ್ರಕಾರ 1107 ಜನರಲ್ಲಿ 42.2% ಮಹಿಳೆಯರು ಉರುವಲು ನೀರು ತರಲಿಲ್ಲವೇಮಬ ಕಾರಣಕ್ಕೆ, 41.2% ಮಹಿಳೆಯರು ಅಡುಗೆ ಮಾಡಿಲ್ಲವೆಂಬ ಕಾರಣಕ್ಕೆ, 65 ರಿಂದ 68% ಮಹಿಳೆಯರು ಆ ಕಾರಣಕ್ಕೆ ಅವಾಚ್ಯವಾಗಿ ಬೈಸಿಕೊಳ್ಳುತ್ತಾರೆಂದು ತಿಳಿದು ಬಂದಿದೆ.

ಕುಟುಂಬದವರ ಮಾತಿಗೆ ಗೌರವ ಕೊಟ್ಟಿಲ್ಲವೆಂದು ಒದೆ ತಿನ್ನುವವರು 24.3% ಮಹಿಳೆಯರು, ಗಂಡನ ಅನುಮತಿ ಇಲ್ಲದೇಯೇ ಹಣ ಖರ್ಚು ಮಾಡಿದರೆ ಒದೆ ತಿನ್ನುವವರು 26.3%, ಅನಾರೋಗ್ಯದಲ್ಲಿರುವವರು, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ಹೊಡೆತ ತಿನ್ನುವವರು 36.2% ಹಾಗೂ 33% ಮಹಿಳೆಯರು.

ಈ ಹಿಂದೆ 1998–99 ರಲ್ಲಿ ಭಾರತದಲ್ಲಿ ಇಂಥಹ ಒಂದು ಸಮೀಕ್ಷೆ ನಡೆದಿತ್ತು. ಸಮಯದ ಅಭಾವದಿಂದ ಒತ್ತಡಕ್ಕೆ ಒಳಗಾಗುವ ಮಹಿಳೆಯರು ನಿದ್ರೆ ಕಡಿಮೆ ಮಾಡುತ್ತಾರೆ, ಆಹಾರ, ಪಾನೀಯಗಳ ಸೇವನೆಯ ಮಟ್ಟ ಸಹಜವಾಗಿಯೇ ಕಡಿಮೆಯಾಗುತ್ತದೆ ಯಾಕಂದರೆ ತಿನ್ನಲು ಸಮಯವಿರುವುದಿಲ್ಲ. ಜೊತೆಗೇ ತನ್ನ ವೈಯಕ್ತಿಕ ಅಗತ್ಯಗಳ ಬಗ್ಗೆಯೂ ಗಮನ ಹರಿಸದೇ ವ್ಯಾಯಾಮ, ಸ್ವಚ್ಛತೆಗಳೂ ಸಾಧ್ಯವಾಗದ ಸ್ಥಿತಿ ಬಂದೊದಗುತ್ತದೆ ಎಂದು ಆ ಸಮೀಕ್ಷೆ ಗುರುತಿಸಿತ್ತು. ಅತ್ಯಂತ ಬಡ ವರ್ಗಕ್ಕೆ ಸೇರಿದ ಪುರುಷರಿಗಿಂತ ಅದೇ ವರ್ಗದ ಮಹಿಳೆಯರು ವಾರಕ್ಕೆ 10ಘಂಟೆಗಳಷ್ಟು ಕಡಿಮೆ ಅವಧಿಯನ್ನು ಅವರ ವಿಶ್ರಾಂತಿಗೆ ಅಥವಾ ಖಾಸಗಿ ಕೆಲಸಕ್ಕೆ ಪಡೆಯುತ್ತಾರೆ ಎನ್ನುತ್ತದೆ ಸಮೀಕ್ಷೆ.

ಇಲ್ಲಿ ನಾವು ಯೋಚಿಸಬೇಕು. ಅಂದು ಆ ಮಹಿಳೆಯರು ಕೇಳಿದ ಎಂಟು ಘಂಟೆಗಳ ದುಡಿತ ಮತ್ತು ಸಮಾನ ಅವಕಾಶಗಳ ಬೇಡಿಕೆಯ ಜೊತೆ ಅಂತರ್ಗತವಾಗಿದ್ದ ಸಮಾಜವಾದಿ ವ್ಯವಸ್ಥೆ ಹಿರಿಯರ ಮಕ್ಕಳ ಲಾಲನೆ ಪಾಲನೆ, ಎಲ್ಲ ಜನರ ಶಿಕ್ಷಣ ಆರೋಗ್ಯಗಳನ್ನು ಸರ್ಕಾರದ ಹೊಣೆಯನ್ನಾಗಿ ವಿಧಿಸುತ್ತದೆ. ಸರ್ಕಾರ ಹೊತ್ತುಕೊಳ್ಳುತ್ತದೆ. ಆದರೆ ಉಳಿದೆಡೆ ಅದು ಸರ್ಕಾರಕ್ಕೆ ಸಂಬಂಧಪಟ್ಟ ಸಂಗತಿಯೇ ಅಲ್ಲ. ಹಾಗಾಗಿ ಅದು ಅವರವರ ವೈಯಕ್ತಿಕ ಬಾಧ್ಯತೆಯಾಗಿರುವುದರಿಂದ ಮಹಿಳೆಯ ಬಾಳು ಮಣ್ಣುಪಾಲು.

ಆಕ್ಸ್‌ಫಾಮ್ ಗುರುತಿಸಿದಂತೆ ಸಾಮಾನ್ಯವಾಗಿ ಜಗತ್ತಿನ ಅಗರ್ಭ ಶ್ರೀಮಂತರು ಪುರುಷರು. ವಿಶ್ವದಲ್ಲಿ ಮಹಿಳೆಯರು ಮಾಡುವ ಪ್ರತಿದಿನದ 1250 ಕೋಟಿ ಘಂಟೆಗಳ ಮಹಿಳೆಯ ಕೆಲಸ ಗಣನೆಗೇ ಇಲ್ಲ. ಅದೊಂದು ಅಗೋಚರ, ವೇತನ ರಹಿತ. ಇದು ಇನ್ನೂ ಎಷ್ಟು ಶತಮಾನಗಳು ಮುಂದುವರೆಯಲಿದೆಯೋ. ಇದೇ ವೇಗದಲ್ಲಿ ಸಮಾಜದ ಆಲೋಚನಾ ಕ್ರಮ ಮುಂದುವರೆದರೆ ಮುಂದಿನ 210 ವರ್ಷಗಳು ಬೇಕಾಗಬಹುದು ಈ ಸ್ಥಿತಿಯಲ್ಲಿ ಸುಧಾರಣೆಯಾಗಿ ಪುರುಷ ಮಹಿಳೆಯರ ವೇತನ ರಹಿತ ದುಡಿಮೆ ಸಮಾನವೆಂದು ಎನಿಸಿಕೊಳ್ಳಲು ಎಂದೂ ವರದಿ ಹೇಳುತ್ತಿದೆ.

ಶ್ರೀಮಂತ ಬಡವರ ಮಧ್ಯೆ ಇರುವ ಆರ್ಥಿಕ ನೆಲೆಯ ಅಸಮಾನತೆ, ಶ್ರೀಮಂತರಿಗೆ ಕಡಿಮೆ ತೆರಿಗೆ, ಬಡವರಿಗೆ ಹೆಚ್ಚು ಹೊರೆ, ಕಡಿಮೆ ಆದಾಯ, ಅಸಮಾನ ವೇತನಗಳ ಮೂಲಕ ಸಕಾರಗಳು ತಮ್ಮ ಕೊಡುಗೆ ನೀಡಿವೆ. ಇದನ್ನು ಗುರುತಿಸಿ ವರದಿ ಹೇಳುತ್ತಿದೆ ಶ್ರೀಮಂತರಿಗೆ ತೆರಿಗೆ ಹೆಚ್ಚು ವಿಧಿಸುವ, ಸಮಾನವಾಗಿ ಸಂಪನ್ಮೂಲ ಹಂಚಿಕೆ ಮಾಡುವತ್ತ ಸುಧಾರಣಾ ಕ್ರಮಗಳ ಅಗತ್ಯವೆನ್ನುತ್ತದೆ.

ಯಾಕೆಂದರೆ ಮೇಲಿನ 1% ಜನರ ಸಂಪತ್ತಿನಲ್ಲಿ 46% ಹೆಚ್ಚಳವಾಗಿದೆ. ಕೆಳಗಿನ 50% ಜನರ ಸಂಪತ್ತಿನಲ್ಲಿ 3% ಹೆಚ್ಚಳವಷ್ಟೇ ಆಗಿದೆ. 106 ಜನ ಶತಕೋಟ್ಯಾಧಿಪತಿಗಳ ಸಂಪತ್ತು ಭಾರತದ 2018–19 ರ ಬಜೆಟ್ ನ ಗಾತ್ರವಾದ 24.4 ಕೋಟಿ ಲಕ್ಷಕ್ಕಿಂತ ಹೆಚ್ಚು.

ಭಾರತದ ಮನೆಗೆಲಸದ ಮಹಿಳೆಯು ಒಬ್ಬ ಕಂಪನಿಯ ಸಿ.ಇ.ಓ ಒಂದು ವರ್ಷಕ್ಕೆ ಪಡೆಯುವಷ್ಟು ಆದಾಯ ಪಡೆಯಲು 22,277 ವರ್ಷ ದುಡಿಯಬೇಕು!!!!!!!!!!!! ಹಾಗೆಯೇ ಒಬ್ಬ ಸಿ.ಇ.ಓ ಆ ಮಹಿಳೆ ಒಂದು ವರ್ಷಕ್ಕೆ ಪಡೆಯುವ ವೇತನವನ್ನು ಹತ್ತು ನಿಮಿಷಕ್ಕೆ ಪಡೆಯುತ್ತಾರೆ.

ಈ ನಿಟ್ಟಿನಲ್ಲಿ ಸರ್ಕಾರ ಒಂದು ಸಾರ್ವತ್ರಿಕ ಸಾಮಾಜಿಕ ಸುರಕ್ಷಾ ಕ್ರಮಗಳನ್ನು ಕೈಗೆತ್ತಿಕೊಳ್ಳುವ, ಸ್ವಚ್ಛ ಕುಡಿಯುವ ನೀರಿನಂಥಹ ಮೂಲಭೂತ ಸೌಲಭ್ಯಗಳನ್ನು ಪೂರೈಕೆ ಮಾಡುವ, ಪ್ರಯಾಣಕ್ಕೆ ಅಗತ್ಯವಾದ ವ್ಯವಸ್ಥೆ ಕಲ್ಪಿಸುವ, ಸರ್ಕಾರೀ ಯೋಜನೆಗಳು ಅರ್ಹರಿಗೆ ಅಗತ್ಯವಾದ ರೀತಿಯಲ್ಲಿ ಲಭ್ಯವಾಗುವ ಕ್ರಮಕ್ಕೆ ಮುಂದಾಗಬೇಕು. ಎಂದು ಭಾರತವನ್ನು ಕುರಿತು ಆ ವರದಿ ಹೇಳಿದೆ.

ಎಂದರೆ ಎಂಟು ಘಂಟೆಗಳ ದುಡಿತದ ಮತ್ತಿತರ ಸೌಲಭ್ಯಗಳ ಬೇಡಿಕೆ ಉದ್ಯೋಗದ ಪ್ರದೇಶದಲ್ಲಿ ಮಾತ್ರವಲ್ಲ. ನಾವು ಗುರುತಿಸಲೇ ಬೇಕಾದ– ಯಾಕೆಂದರೆ ನಾವಿದನ್ನು ಹೀಗೂ ನೋಡಬೇಕು ಎಂದು ಸಮಾಜವಾದೀ ನೆಲೆಯಲ್ಲಿ ರೂಢಿಸಿಕೊಳ್ಳಲೇ ಇಲ್ಲ. ಈಗಲಾದರೂ ಇದು ಸಕಾಲ.

ಅಂತರ ರಾಷ್ಟ್ರೀಯ ಮಹಿಳಾ ದಿನದ ನೆನಪಿನಲ್ಲಿ ದುಡಿಮೆಗೆ ಇರುವ ಇನ್ನೊಂದು ಮಗ್ಗುಲಿನತ್ತಲೂ ನಮ್ಮನ್ನು ಹೊರಳಿಸಲಿ ಈ ವರದಿ. ಮತ್ತು ಸಮ ಸಮಾಜದ ಕಲ್ಪನೆ ನಾಲ್ಕುಗೋಡೆಗಳಾಚೆಯ ಪ್ರಗತಿಯ ನೋಟವಾಗದೇ ಒಳಗಿನ ಬೆಳಕನ್ನೂ ವಿಸ್ತರಿಸಿ ನೋಡಲಿ.

ಕರ್ನಾಟಕದಲ್ಲಿ ರೈತ ಆತ್ಮಹತ್ಯಾ ಕುಟುಂಬಗಳಲ್ಲಿ .... ಪುಟ 8 ರಿಂದ

ಆಶ್ಚರ್ಯದ ವಿಚಾರವೇ ಆಗಿದೆ.

11. ಶಿಫಾರಸುಗಳು:

ಈ ಅಧ್ಯಯನದಿಂದ ಕಂಡುಬಂದ ವಿಚಾರಗಳಿಗೆ ಸಂಬಂಧಪಟ್ಟಂತೆ ಮಹಿಳಾ ಕಿಸಾನ್ ಮಂಚ್ ಕೆಲವು ಶಿಫಾರಸುಗಳನ್ನು ಮಾಡಲು ಇಷ್ಟಪಡುತ್ತದೆ. ಮೊಟ್ಟಮೊದಲನೆಯದಾಗಿ ಇಂಥ ಆತ್ಮಹತ್ಯೆಗಳನ್ನು ತಡೆಯಲು ಬಲು ಗಟ್ಟಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯವಶ್ಯವಾಗಿದೆ. ಹಳ್ಳಿಗಳಲ್ಲಾಗುವ ಆತ್ಮಹತ್ಯೆಗಳು ರೈತ ಆತ್ಮಹತ್ಯೆಗಳೇ ನಿರ್ಧರಿಸುವ ಅಂಶಗಳನ್ನು ಇನ್ನಷ್ಟು ವಿಸ್ತೃತಗೊಳಿಸಬೇಕು. ಅವರ ಹೆಸರಿನಲ್ಲಿ ಭೂಮಿ ಇದ್ದರಷ್ಟೇ ರೈತ ಆತ್ಮಹತ್ಯೆ ಎಂದೇನೂ ಕರ್ನಾಟಕದ ನೀತಿಗಳು ಹೇಳುವುದಿಲ್ಲವಾದರೂ ನಿಜ ಸ್ಥಿತಿಯಲ್ಲಿ ಭೂಮಿ ಅವರ ಹೆಸರಿಗೆ ಇರುವುದು ಮಹತ್ವವನ್ನು ಪಡೆದುಕೊಳ್ಳುತ್ತದೆ. ಖಾಸಗಿಯಲ್ಲಿ ತೆಗೆದುಕೊಂಡಿರುವ ಸಾಲವನ್ನೂ ಕೂಡ ನೀತಿಗಳು ಗುರುತಿಸುತ್ತವಾದರೂ ನಿಜದಲ್ಲಿ ಪರಿಹಾರಕ್ಕೆ ಬ್ಯಾಂಕುಗಳ ಸಾಲಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುವುದು ನಡೆದಿದೆ. ಕೃಷಿ ಕೂಲಿಕಾರರು ಮತ್ತು ಮಹಿಳಾ ರೈತರ ಆತ್ಮಹತ್ಯೆಗಳನ್ನು ಗುರುತಿಸುವ ಅಗತ್ಯ ಬಹಳವಿದೆ. ಯಾಕೆಂದರೆ ಆ ಆತ್ಮಹತ್ಯೆಗಳ ಸಂಖ್ಯೆಗಳು ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿದೆ.

12. ಪುರ್ವಸತಿ ಒದಗಿಸುವಂಥ ಇಲಾಖೆ ಇಲಾಖೆಗಳ ಮಧ್ಯೆ ಸರಿಯಾದ ಸಮನ್ವಯ ಇರುವಂಥ ಒಂದು ಸುಲಭವಾಗಿ ಕೈಗೆಟುಕಬಲ್ಲ ಒಂದು ವ್ಯವಸ್ಥೆಯು ಹೋಬಳಿ ಮಟ್ಟದಿಂದಲೇ ಅಸ್ತಿತ್ವಕ್ಕೆ ಬರಬೇಕು. ಆತ್ಮಹತ್ಯೆಗಳನ್ನು ತಡೆಯಲು ಮತ್ತು ಆದಂಥ ಕುಟುಂಬಗಳ ಪರಿಹಾರ ಮತ್ತು ಪುನರ್ವಸತಿ ಸರಿಯಾಗಿ ಆಗುವಂತೆ ಮಾಡಲು ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಆಗಾಗ್ಗೆ ಸಭೆಗಳನ್ನು ಮಾಡುತ್ತ ಮೇಲುಸ್ತುವಾರಿ ಮಾಡುತ್ತಿರಬೇಕು. ಇದರಲ್ಲಿ ಪಂಚಾಯತಿಯೂ, ರೈತ ಸಂಘಟನೆಗಳು ಮತ್ತು ಇತರ ನಾಗರಿಕ ಸಂಘಟನೆಗಳೂ ಇರಬೇಕು. ಪುನರ್ವಸತಿ ಮತ್ತು ಮನಸ್ಸ್ವಾಸ್ಥ್ಯಕ್ಕೆ ಹೋಬಳಿ ಮಟ್ಟದ ಗ್ರಾಮೀಣ ಜೀವನೋಪಾಯ ಮಿಶನ್‌ಗಳ ಬಳಕೆಯಾಗಬೇಕು. ಹಳೆಯ ಕೇಸುಗಳನ್ನು ಪುನಃ ಹೊರತೆಗೆದು ಗ್ರಾಮಸಭೆಗಳ ಮೂಲಕ ಆ ಕೇಸುಗಳನ್ನು ಸರಿಯಾಗಿ ಇತ್ಯರ್ಥಮಾಡಬೇಕು.

13. ಹಿಂದಿನ ಉದ್ಯೋಗದಲ್ಲೇ ಮುಂದುವರೆಯುತ್ತಿರುವ ಮಹಿಳೆಗೆ ಅಲ್ಲಿಯವರೆಗೆ ಇದ್ದ ಎಲ್ಲಾ ಸಾಲದ್ದೂ ಮನ್ನಾ – ಆಗಬೇಕಾದ್ದು ಬಹಳ ಅವಶ್ಯವಿದೆ. ಸರಕಾರವು ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಆತ್ಮಹತ್ಯಾ ಕುಟುಂಬಗಳು ಸಂಪೂರ್ಣ ಸಾಲ ಮುಕ್ತವಾಗುವಂತೆ ಮಾಡಬೇಕು.

14. ಆತ್ಮಹತ್ಯಾ ಕುಟುಂಬದ ಹೆಣ್ಣುಗಳಿಗೆ ಮುಂದಿನ ಜೀವನವು ಸುಭದ್ರವಾಗಿರುವಂತೆ ಮಾಡಲು, ಸಾಲಮುಕ್ತ ಮಾಡುವುದರ ಜೊತೆಗೆ ಸರಕಾರವು ಆ ಆಸ್ತಿಗೆ ಅವಳನ್ನು ಹಕ್ಕುದಾರಳನ್ನಾಗಿ ಮಾಡುವುದರ ಜೊತೆಗೆ ಇನ್ನೂ ಒಂದು. ಪರ್ಯಾಯ ಆದಾಯ ಬರುವಂಥಹ ಚಟುವಟಿಕೆಯನ್ನು ಕಲ್ಪಿಸಿಕೊಡಬೇಕು. ಬಹುವಾಗಿ ಆತ್ಮಹತ್ಯೆಗೆ ಅತಿಯಾದ ಒಳಸುರಿ ಮತು ರಾಸಾಯನಿಕ ಕ್ಷಿಯೇ ಕಾರಣವಾಗಿರುವುದರಿಂದ ರೈತಾಪಿ ಉದ್ಯೋಗವನ್ನು ಮುಂದುವರೆಸುವ ಮಹಿಳೆಗೆ ರಾಸಾಯನಿಕ ರಹಿತ, ಸಾಲರಹಿತ ಕೃಷಿ ಪದ್ಧತಿಯನ್ನು ಕಲಿಸಲು ವ್ಯವಸ್ಥೆಯಾಗಬೇಕು. ಅವಳ ಮತ್ತು ಕುಟುಂಬದವರು ಒಳಗಾದ ಮಾನಸಿಕ ಅಘಾತಕ್ಕೆ ಸಮಾಧಾನ ಮಾಡುವಂಥ ವ್ಯವಸ್ಥೆಗಳೂ ಇರಬೇಕು.

15. ಕಿಸಾನ ಮಿತ್ರದಂಥ ಸಹಾಯವಾಣಿಗಳಂಥ ಆತ್ಮಹತ್ಯೆ ತಡೆ ಯೋಜನೆಗಳು ಒಂದೊಂದೇ ಜಿಲ್ಲೆಯಲ್ಲಿ ಜಾರಿಯಲ್ಲಿ ಬರಬೇಕು.

ರೈತ ಆತ್ಮಹತ್ಯೆ ಮತ್ತು ಕುಟುಂಬ ಸೌಕರ್ಯ ಕುರಿತು ಸಂಕ್ಷಿಪ್ತ ವಿವರಗಳು 2003 ರಿಂದ 2020 ಜನವರಿ ಅಂತ್ಯದವರೆಗೆ

1. ಉಪ ವಿಭಾಗಾಧಿಕಾರಿಗಳ ಸಮಿತಿ: ಸರ್ಕಾರಿ ಆದೇಶ ದಿನಾಂಕ–18.07.2003
- ಅಧ್ಯಕ್ಷರು – ಅಸಿಸ್ಟೆಂಟ್ ಕಮಿಷನರ್
- ಕಾರ್ಯದರ್ಶಿಗಳು, ಸಹಾಯಕ ಕೃಷಿ ನಿರ್ದೇಶಕರು, ತಾಲ್ಲೂಕು ತಹಸೀಲ್ದಾರ್ ಇತರೆ ಸದಸ್ಯ ಅಧಿಕಾರಿಗಳು / ಇಲಾಖೆ ಬ್ಯಾಂಕ್ (ಲೀಡ್ ಬ್ಯಾಂಕ್ ಮ್ಯಾನೆಜರ್), ಪಿ.ಎಲ್.ಡಿ. ಬ್ಯಾಂಕ್ ಕಾರ್ಯದರ್ಶಿ, ಆರೋಗ್ಯ, ಕಂದಾಯ, ಪೊಲೀಸ್ (ಡಿ.ಎಸ್.ಪಿ) ಇಲಾಖೆ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆ, ಸಹಕಾರಿ ಸಂಘಗಳ ಅಭಿವೃದ್ಧಿ ಅಧಿಕಾರಿ.
- ಅರ್ಜಿ ಸಲ್ಲಿಸಲು ಕಾಲ ಮಿತಿ ಮರಣದ ಮೂರು ತಿಂಗಳ ಒಳಗೆ

2. ಮೇಲ್ಮನವಿ ಪ್ರಾಧಿಕಾರ ಸಮಿತಿ – ಸರ್ಕಾರಿ ಆದೇಶ ದಿನಾಂ:29.08.2017
- ಉಪ ವಿಭಾಗಾಧಿಕಾರಿ (ಅಧ್ಯಕ್ಷರು)
- ಜಂಟಿ ನಿರ್ದೇಶಕರು – ಕಾರ್ಯದರ್ಶಿಗಳು, ಇತರೆ ಸದಸ್ಯ ಅಧಿಕಾರಿಗಳು, ಜಿಲ್ಲಾ ವೈದ್ಯಾಧಿಕಾರಿಗಳು, ಅಡ್ ಬ್ಯಾಂಕ್ ಮ್ಯಾನೇಜರ್, ಡೆಸ್ಟೂಟ ಸೂಪರ್‌ಡೆಂಟ್ ಆಫ್ ಪೊಲೀಸ್, ಸರ್ಕಲ್ ಇನ್ಸೆಕ್ಟರ್, ತಶೀಲ್ದಾರ್, (ಅಡ್ ಬ್ಯಾಂಕ್ ಮ್ಯಾನೆಜರ್, ಪಿ.ಎಲ್.ಡಿ ಬ್ಯಾಂಕ್ ಕಾರ್ಯದರ್ಶಿ, ಸಹಾಯಕ ಕೃಷಿ ನಿರ್ದೇಶಕರು
- ಅರ್ಜಿ ಸಲ್ಲಿಸಲು ಕಾಲ ಮಿತಿ ಮರಣದ ಮೂರು ತಿಂಗಳ ನಂತರ ಮತ್ತು ಆರು ತಿಂಗಳ ಒಳಗೆ – ಸರ್ಕಾರಿ ಆದೇಶ ದಿನಾಂಕ 31.10.2019

3. ಅರ್ಜಿ ಪರಿಗಣಿಸಲು ಮಾನದಂಡಗಳು – ಸರ್ಕಾರಿ ಆದೇಶ ದಿನಾಂಕ: 25.11.2015 – ಪರಿಷ್ಕೃತ ಆದೇಶ 01.04.2015
- ಸಾಲದ ಹೊರೆ, ರೈತ / ಕುಟುಂಬದ ಮತ್ತು ಯಾವುದೇ ಸದಸ್ಯರ ಹೆಸರಿನಲ್ಲಿದರೆ ಪರಿಗಣಿಸುವುದು.
- ಸಾಲವನ್ನು ಬ್ಯಾಂಕ್ ಅಲ್ಲದೆ ಚಿಟ್ ಫಂಡ್, ಖಾಸಗಿ ಲೇವಾದಾರರು, ಇನ್ನಿತರೆ ರಿಜಿಸ್ಟರ್ ಸಂಸ್ಥೆಗಳಿಂದ ಸಾಲ ಪಡೆದಿದ್ದರೆ ಪರಿಗಣಿಸುವುದು.
- ಕೃಷಿ ಕಾರ್ಮಿಕರು ಬೇರೆಯವರ ಜಮೀನನ್ನು ಭೋಗ್ಯ ಪಡೆದು ಕೃಷಿ ಮಾಡುತ್ತಿದ್ದು ಅಂತಹವರು ಆತ್ಮಹತ್ಯೆ ಮಾಡಿಕೊಂಡಲ್ಲಿ ಪರಿಶೀಲಿಸಿ ಪರಿಗಣಿಸುವುದು.

ಶತಮಾನೋತ್ಸವ ಲೇಖನ ಮಾಲೆ-16

ಕೆಂಬಾವುಟದ ಮುನ್ನಡೆ 1937–39

ರೈತರು, ಕಾರ್ಮಿಕರು ಮತ್ತು ಇತರ ದುಡಿಯುವ ಜನವಿಭಾಗದಲ್ಲಿ ಮೂಡುತ್ತಿದ್ದ ಆಸೆ ಆಕಾಂಕ್ಷೆಗಳಿಗೆ ಸಂಘಟನಾ ರೂಪ ನೀಡುವಲ್ಲಿ ಕಮ್ಯುನಿಸ್ಟರು, ಸೋಶಿಯಲಿಸ್ಟರು ಹಾಗೂ ಕಾಂಗ್ರೆಸ್ಸಿನ ಎಡಪಂಥೀಯರು ಶ್ರಮಿಸಿದರು. ಸಾಮಾಜಿಕ ಬದಲಾವಣೆಗಾಗಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆಂದು ಮತ್ತು ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಹಾಗೂ ಅಧಿಕೃತ ದಸ್ತಾವೇಜುಗಳಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಬೇಕೆಂದು ಒತ್ತಡ ತರಲಾಯಿತು. ಕಮ್ಯುನಿಸ್ಟ್ ಪಕ್ಷ ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಯಲ್ಲಿ ಕಾರ್ಮಿಕ ವರ್ಗದ ನಾಯಕತ್ವವನ್ನು ಕ್ರೋಢೀಕರಿಸಲು ಮತ್ತು ಬಂಡವಾಳಶಾಹಿ ನಾಯಕತ್ವದ ನೀತಿಗಳ ವಿರುದ್ಧ ರೈತರು ಮತ್ತು ಇತರ ದುಡಿಯುವ ಜನರಿಗೆ ನಾಯಕತ್ವ ನೀಡಲು ಯತ್ನಿಸಿತು. ಇದರಿಂದಾಗಿ 1937–39ರ ಅವಧಿಯಲ್ಲಿ ಅದು ಒಂದು ಸ್ವತಂತ್ರ ಸಂಘಟಿತ ನೆಲೆಯಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಒಂದು ಗಮನಾರ್ಹ ಶಕ್ತಿಯಾಗಿ ಬೆಳೆಯಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಸಂಯುಕ್ತ ರಂಗ ಕಾರ್ಯತಂತ್ರದ ಭಾಗವಾಗಿ, ಕಮ್ಯುನಿಸ್ಟರು ಕಾಂಗ್ರೆಸ್ಸಿನೊಳಗಡೆ ಕೆಲಸ ಮಾಡಲು ಪ್ರಾರಂಭಿಸಿದರು ಮತ್ತು ಹಲವಾರು ಸಾಮೂಹಿಕ ಹಾಗೂ ವರ್ಗ ಸಂಘಟನೆಗಳನ್ನು ಕಟ್ಟುವ ಕೆಲಸಕ್ಕೆ ಒತ್ತು ನೀಡಿದರು. ಕೆಂಬಾವುಟದ ಮುನ್ನಡೆ ಸಾಗಿತ್ತು, ಕಾರ್ಮಿಕರು, ರೈತರು ಮತ್ತು ವಿಚಾರವಂತರ ಕ್ರಿಯಾಶೀಲ ಭಾಗವಹಿಸುವಿಕೆಯಿಂದ ಸಾಮ್ರಾಜ್ಯಶಾಹಿಯ ವಿರುದ್ಧ ಸಂಯುಕ್ತ ರಂಗವು ಒಂದು ಬಲಶಾಲಿಯಾದ ಶಕ್ತಿಯಾಗಿ ಹೊರಹೊಮ್ಮುತ್ತಿತ್ತು. ಕಾರ್ಮಿಕ ಸಂಘ ಮತ್ತು ರೈತ ಸಂಘಗಳ ಚಟುವಟಿಕೆಗಳ ಹೆಚ್ಚಳದ ಪ್ರಭಾವವು ಕಾರ್ಮಿಕ ವರ್ಗದ ಹಾಗೂ ರೈತಾಪಿ ಜನಗಳ ಅನೇಕ ಹಕ್ಕೊತ್ತಾಯಗಳನ್ನು 1937ರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸುವಂತೆ ಕಾಂಗ್ರೆಸ್ಸಿನ ಮೇಲೆ ಒತ್ತಡ ಹೇರಿತು.

ಕಮ್ಯುನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಚುನಾವಣಾ ಚಟುವಟಿಕೆಗಳನ್ನು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟವನ್ನು ಬಲಪಡಿಸುವ ಒಂದು ಬಹು ಮುಖ್ಯ ಸಾಧನವನ್ನಾಗಿ ಪರಿಗಣಿಸಿದವು. ಶಾಸನಸಭೆಗಳ ಒಳಗಡೆಯ ಬಹುಮತ ಮತ್ತು ಶಾಸನಸಭೆಯ ಹೊರಗಡೆ ಜನಚಳುವಳಿ ಇವೆರಡನ್ನೂ ಒಂದುಗೂಡಿಸಿ ಒಂದು ಕ್ರಾಂತಿಕಾರಿ ಸಾಮೂಹಿಕ ಚಳುವಳಿಯನ್ನಾಗಿ ರೂಪಿಸಬೇಕೆಂದು ಅವರು ಬಯಸಿದರು. ಜನಬಲದೊಂದಿಗೆ ರಾಜ್ಯವ್ಯವಸ್ಥೆಯನ್ನು ಭಗ್ನಗೊಳಿಸಿ ಜನರಿಂದಲೇ ರಚಿಸಲ್ಪಟ್ಟ ಸಂವಿಧಾನ ಸಭೆಯ ಮೂಲಕ ಭಾರತಕ್ಕೊಂದು ಹೊಸ ಸಂವಿಧಾನವನ್ನು ರೂಪಿಸಬೇಕೆಂಬ ದೃಷ್ಟಿಕೋನವನ್ನು ಅವರು ಅಳವಡಿಸಿಕೊಂಡರು.

ಕಮ್ಯುನಿಸ್ಟರ ಮುತುವರ್ಜಿಯಿಂದಾಗಿ 1937ರಲ್ಲಿ ಕಾರ್ಮಿಕ ವರ್ಗದ ಕಾರ್ಯಾಚರಣೆಗಳು ಬಿರುಸಾದವು. ಮುಷ್ಕರಗಳ ಸಂಖ್ಯೆ 307ಕ್ಕೆ ತಲುಪಿ 1921ರ ನಂತರದ ಅತ್ಯಂತ ಹೆಚ್ಚಿನ ಮಟ್ಟಕ್ಕೆ ಹೋದವು; 6,06,000 ಕಾರ್ಮಿಕರು ಅವುಗಳಲ್ಲಿ ಭಾಗವಹಿಸಿದ್ದರು. ಬಂಗಾಳದಲ್ಲಿ ಭಾರಿ ಸಾರ್ವಜನಿಕ ಮುಷ್ಕರವು 2,25,000 ಕಾರ್ಮಿಕರನ್ನು ಒಳಗೊಂಡಿತ್ತು; 40,000 ಕಾರ್ಮಿಕರನ್ನು ಒಳಗೊಂಡಿದ್ದ ಕಾನ್ಪುರದ ಜವಳಿ ಮುಷ್ಕರವು ಕಾರ್ಮಿಕರ ವಿಶಾಲ ಐಕ್ಯತೆಗೆ ಇಂಬು ನೀಡಿತು. ಈ ಮುಷ್ಕರವು 55 ದಿನಗಳವರೆಗೆ ನಡೆದು ಒಂದು ಗಮನಾರ್ಹ ಗೆಲುವನ್ನು ತಂದುಕೊಟ್ಟಿತು. ಕಾನ್ಪುರ ಮುಷ್ಕರವು ಕಾರ್ಮಿಕರ ಕಾರ್ಯಾಚರಣೆಗೆ ದೇಶಾದ್ಯಂತ ಒಂದು ಮಾದರಿಯಾಗಿ ಪರಿಣಮಿಸಿತು. ಈ ಮುಷ್ಕರವು ಕಮ್ಯುನಿಸ್ಟರ, ಸೋಶಿಯಲಿಸ್ಟರ ಮತ್ತು ಸಾಮಾನ್ಯ ಕಾಂಗ್ರೆಸ್ಸಿಗರ ಐಕ್ಯತೆಯ ಶಕ್ತಿ ಏನೆಂಬುದನ್ನು ಮತ್ತು ಐಕ್ಯತೆಯ ಮೂಲಕ ಏನನ್ನು ಸಾಧಿಸಬಹುದು ಎನ್ನುವುದನ್ನು ದೇಶದ ಎಲ್ಲಾ ಸಾಮ್ರಾಜ್ಯಶಾಹಿ–ವಿರೋಧಿಗಳಿಗೆ ಸಾಬೀತುಪಡಿಸಿತು. ಇದನ್ನು ಅನುಸರಿಸಿ ದೇಶಾದ್ಯಂತ ಮುಷ್ಕರಗಳ ದೊಡ್ಡ ಅಲೆಯೇ ಎದ್ದಿತು. ಅನೇಕ ರೈತ ಜಾತಾಗಳನ್ನು ಸಂಘಟಿಸಲಾಯಿತು, ಇದು ಎಡಪಂಥೀಯರ ಶಕ್ತಿ ಬೆಳೆಯುತ್ತಿರುವುದನ್ನು ತೋರಿಸಿತು.

ಇದೇ ಸಂದರ್ಭದಲ್ಲಿ ರಾಜರುಗಳ ಆಡಳಿತ ಇರುವ ಪ್ರದೇಶಗಳಲ್ಲಿ ನಿರಂಕುಶ ಪ್ರಭುತ್ವದ ವಿರುದ್ಧ ಮತ್ತು ಪ್ರಾತಿನಿಧಿಕ ಸರ್ಕಾರಕ್ಕಾಗಿ ಹೋರಾಟಗಳು ಆರಂಭವಾದವು. ತಿರುವಾಂಕೂರು, ಕೊಚಿನ್, ಹೈದರಾಬಾದ್ ಮತ್ತಿತರ ಕಡೆಗಳಂತಹ ಸಂಸ್ಥಾನಗಳಲ್ಲಿ ಈ ಹೊಸ ಚಳುವಳಿಗಳು ಬೆಳೆಯುವಲ್ಲಿ ಕಮ್ಯುನಿಸ್ಟರು ಗಮನಾರ್ಹ ಕೊಡುಗೆ ನೀಡಿದರು. ಈ ಚಳುವಳಿಗಳ ಅನುಭವಗಳು ಅನೇಕ ಪ್ರಜಾಪ್ರಭುತ್ವ ಮನಸ್ಸಿನ ಜನರನ್ನು ಎಡಪಂಥದತ್ತ ಸೆಳೆದವು. ಬಲಪಂಥೀಯ ಕಾಂಗ್ರೆಸ್ ನಾಯಕತ್ವವು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮತ್ತು ಚುನಾವಣೆ ಗೆಲ್ಲುವ ಕೆಲಸದಲ್ಲಿ ನಿರತರಾಗಿದ್ದರೆ, ಅತ್ತ ಎಡಪಂಥೀಯರು, ಸಾಮ್ರಾಜ್ಯಶಾಹಿ–ವಿರೋಧಿ ಸಾಮೂಹಿಕ ಚಳುವಳಿಯನ್ನು ಇನ್ನೂ ಬಲಪಡಿಸಲು ಚುನಾವಣಾ ಪ್ರಚಾರವನ್ನು ರಾಜಕೀಯವಾಗಿ ಹಾಗೂ ಸಂಘಟನಾತ್ಮಕವಾಗಿ ಬಳಕೆ ಮಾಡಿಕೊಂಡರು.

ಫೈಜ್‌ಪುರದ ಕಾಂಗ್ರೆಸ್ ವಾರ್ಷಿಕ ಅಧಿವೇಶನದ ಹೊರಗಡೆಯಲ್ಲಿ ಕಮ್ಯುನಿಸ್ಟರು, ಸೋಶಿಯಲಿಸ್ಟರು ಮತ್ತು ಎಡಪಂಥೀಯ ವಿಭಾಗಗಳು ನಡೆಸಿದ ಚಟುವಟಿಕೆಗಳು ವಿಶಾಲ ನೆಲೆ ಹೊಂದಿದ್ದವು; ಅವು ಕಾಂಗ್ರೆಸ್ ಅಧಿವೇಶನದಲ್ಲಿ ಔಪಚಾರಿಕವಾಗಿ ಅಂಗೀಕರಿಸಿದ ನಿರ್ಣಯಗಳಿಗಿಂತ ಹೆಚ್ಚು ಯಶಸ್ವಿಯಾಗಿದ್ದವು. ಈ ಅಧಿವೇಶನದ ಇಡೀ ವಾತಾವರಣ ಕಾರ್ಮಿಕರು ಹಾಗೂ ರೈತರ ಹಕ್ಕುಗಳ ಮೇಲೆ ಒತ್ತು ಕೊಡುವ, ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂ ವಿರುದ್ಧದ ಸಮಾಜವಾದಿ ಘೋಷಣೆಗಳಿಂದ ತುಂಬಿ ಹೋಯಿತು.

1937ರ ಚುನಾವಣೆಗಳ ನಂತರ ರಚಿಸಲಾದ ಕಾಂಗ್ರೆಸ್ ಸರ್ಕಾರಗಳು ಜನರ ಆಸೆ ಆಕಾಂಕ್ಷೆಗಳಿಗೆ ತಕ್ಕಂತೆ ಕ್ರಮ ತೆಗೆದುಕೊಳ್ಳಲಿಲ್ಲ, ಅವು ಜನರ ವಿರುದ್ಧವೂ ಹೋದವು. ಕಾರ್ಮಿಕರು ಮತ್ತು ರೈತರ ಹೋರಾಟಗಳ ಕುರಿತು ಪ್ರಾಂತೀಯ ಕಾಂಗ್ರೆಸ್ ಮಂತ್ರಿಮಂಡಲಗಳ ಧೋರಣೆ ಮತ್ತು ರಾಜರುಗಳ ಸಂಸ್ಥಾನಗಳಲ್ಲಿ ಜನರ ಪ್ರಜಾಸತ್ತಾತ್ಮಕ ಹೋರಾಟಗಳ ಬಗ್ಗೆ ಗಾಂಧಿ ಮತ್ತಿತರ ಬಲಪಂಥೀಯ ನಾಯಕರುಗಳ ನಕಾರಾತ್ಮಕ ಧೋರಣೆಗಳು ಎಡಪಂಥೀಯರ ಅತೃಪ್ತಿಗೆ, ಚಡಪಡಿಕೆಗಳಿಗೆ ಕಾರಣವಾದವು.. ದೇಶಾದ್ಯಂತ ಕಾರ್ಮಿಕರ ಮುಷ್ಕರಗಳು, ರೈತರ ಸತ್ಯಾಗ್ರಹಗಳು ಮತ್ತಿತರ ನೇರ ಕಾರ್ಯಾಚರಣೆಗಳು ನಡೆದವು. ಕಮ್ಯುನಿಸ್ಟರು ಮತ್ತು ಕಾಂಗ್ರೆಸ್ ಸೋಶಿಯಲಿಸ್ಟರ ಜತೆ ಸಾಮಾನ್ಯ ಕಾಂಗ್ರೆಸ್ಸಿಗರೂ ಈ ಪ್ರತಿಭಟನೆಗಳಲ್ಲಿ ಕೈಜೋಡಿಸಿದರು. ಇವು ಸಾಮಾನ್ಯ ಜನರ ಬೇಗುದಿಯ ಅಭಿವ್ಯಕ್ತಿಯಾಗಿದ್ದವು.

ಕಾಂಗ್ರೆಸ್ ಸರ್ಕಾರಗಳ ದಮನಕಾರಿ ಕ್ರಮಗಳು ಕಾಂಗ್ರೆಸ್ಸೇತರ ಸರ್ಕಾರಗಳಿಗಿಂತ ಯಾವುದೇ ರೀತಿಯಲ್ಲೂ ಭಿನ್ನವಾಗಿರಲಿಲ್ಲ. ಬೊಂಬಾಯಿಯ ಗೃಹ ಸಚಿವರಾಗಿದ್ದ ಕೆ.ಎಂ.ಮುನ್ಶಿಯವರು ದೊರೆಗಿಂತ ತಾನೇನು ಕಡಿಮೆ ಇಲ್ಲ ಎನ್ನುವ ರೀತಿಯಲ್ಲಿ ಕಮ್ಯುನಿಸ್ಟರು ಮತ್ತಿತರ ಎಡ ಮುಖಂಡರುಗಳನ್ನು ದಸ್ತಗಿರಿ ಮಾಡಿದರು. ಬೊಂಬಾಯಿಯ ಸುತ್ತಮುತ್ತ ಇರುವ ಕಮ್ಯುನಿಸ್ಟರೊಂದಿಗೆ ವ್ಯವಹರಿಸಲು ಸಿಐಡಿಯನ್ನು ಬಳಸಬೇಕೆಂದು ವೈಸ್‌ರಾಯ್‌ರನ್ನು ಕೋರಿಕೊಂಡರು, ಅದು ವೈಸ್‌ರಾಯ್‌ರಿಗೇ ಅಚ್ಚರಿಯುಂಟು ಮಾಡಿತು.

ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು ಮತ್ತು ದಮನಕಾರಿ ಕಾನೂನುಗಳನ್ನು ತಡೆಹಿಡಿಯಬೇಕು ಎಂಬುದೇ ಕಾಂಗ್ರೆಸ್ ಸಚಿವರುಗಳು ಮತ್ತು ಎಡ ಚಳುವಳಿಗಳ ನಡುವಿನ ತಿಕ್ಕಾಟಗಳಲ್ಲಿನ ಮೊದಲ ವಿಚಾರವಾಗಿತ್ತು. ಬೊಂಬಾಯಿ ಮತ್ತು ಮದ್ರಾಸನ್ನೂ ಒಳಗೊಂಡಂತೆ ಅನೇಕ ಪ್ರಾಂತಗಳಲ್ಲಿ, ರಾಜಕೀಯ ಕಾರ್ಯಕರ್ತರ ವಿರುದ್ಧದ ದಮನಕಾರಿ ಕ್ರಮಗಳನ್ನು ಯಾವುದೇ ಹಿಂಜರಿಕೆಯಿಲ್ಲದೇ ಮತ್ತೆ ಪ್ರಾರಂಭಿಸಲಾಯಿತು. ಎಡಪಂಥೀಯರ ಪತ್ರಿಕೆಗಳು ಮತ್ತು ಮುದ್ರಣಾಲಯಗಳ ಮೇಲೆ ದಾಳಿ ಮಾಡಲು ಕಾಂಗ್ರೆಸ್ ಸರ್ಕಾರಗಳು ಮುಂದಾದವು.

ಈ ಎಲ್ಲಾ ದಮನಕಾರಿ ಕ್ರಮಗಳ ಮಧ್ಯೆಯೂ ಕಾರ್ಮಿಕರ, ರೈತರ ಹಾಗೂ ವಿದ್ಯಾರ್ಥಿಗಳ ಸಂಘ ಹಾಗೂ ಹೋರಾಟಗಳು ಮುಂದುವರಿಯುತ್ತಿದ್ದವು. ಈ ಹೋರಾಟಗಳಿಗೆ ಒಂದು ಸಂಘಟಿತ ರೂಪ ನೀಡಲು ಮತ್ತು ಆ ಮೂಲಕ ಸಾಮ್ರಾಜ್ಯಶಾಹಿ–ವಿರೋಧಿ ರಂಗವನ್ನು ಬಲಪಡಿಸಲು ಕಮ್ಯುನಿಸ್ಟರು ಮತ್ತು ಸೋಶಿಯಲಿಸ್ಟರು ಶ್ರಮವಹಿಸಿದರು. ಈ ಎಲ್ಲಾ ಹೋರಾಟಗಳ ಒತ್ತಡದ ಕಾರಣದಿಂದಾಗಿ, ಅನೇಕ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳು, ಕಾರ್ಮಿಕರು ಮತ್ತು ರೈತರ ಸಮಸ್ಯೆಗಳು ಮತ್ತು ಅವರ ಹಕ್ಕೊತ್ತಾಯಗಳ ಬಗ್ಗೆ ತಿಳಿದುಕೊಳ್ಳಲು ಆಯೋಗಗಳನ್ನು ನೇಮಕ ಮಾಡಿದವು. ಕೆಲವು ನಿರ್ದಿಷ್ಟ ಪ್ರಸಂಗಗಳಲ್ಲಿ, ಕಾರ್ಮಿಕರ ಕೆಲವು ಬೇಡಿಕೆಗಳನ್ನು ಒಪ್ಪಲೇಬೇಕಾದ ಒತ್ತಡಕ್ಕೆ ಸಿಲುಕಿದ ಕಾಂಗ್ರೆಸ್ ಸರ್ಕಾರಗಳು ಕೆಲವು ಕ್ರಮಗಳನ್ನು ಕೈಗೊಂಡವು.

1937–39 ರಲ್ಲಿ ಶೇಕಡಾ 50 ಕ್ಕೂ ಹೆಚ್ಚಿನ ಮುಷ್ಕರಗಳು ಭಾಗಶಃ ಅಥವಾ ಸಂಪೂರ್ಣ ಯಶಸ್ವಿಯಾದವು. ಈ ಅವಧಿಯಲ್ಲಿ, ಮುಷ್ಕರಗಳು ಮತ್ತು ಕಾರ್ಮಿಕ ಸಂಘಗಳ ಸದಸ್ಯತ್ವ ಗಣನೀಯವಾಗಿ ಏರಿಕೆ ಕಂಡವು. 1936ರಲ್ಲಿ 241 ಇದ್ದ ಕಾರ್ಮಿಕ ಸಂಘಗಳು 1939ರಲ್ಲಿ 562 ಕ್ಕೆ ಏರಿದವು ಮತ್ತು ಸದಸ್ಯತ್ವವು 2,68,000 ರಿಂದ 3,90,000 ಕ್ಕೆ ಏರಿತು. ಕಾರ್ಮಿಕ ಸಂಘಗಳಲ್ಲಿ ಎಡಪಂಥೀಯರ ನೇತೃತ್ವದ ಎಐಟಿಯುಸಿ ದಾಪುಗಾಲು ಹಾಕಿತು. ಕಾರ್ಮಿಕ ವರ್ಗದಿಂದ ದೂರ ಉಳಿದಿದ್ದ, ಸೌಮ್ಯವಾದಿಗಳ ನೇತೃತ್ವದ ನ್ಯಾಷನಲ್ ಟ್ರೇಡ್ ಯೂನಿಯನ್ ಫೆಡರೇಷನ್(ಎನ್.ಟಿ.ಯು.ಎಫ್) ಮತ್ತವುಗಳ ಅಡಿಯಲ್ಲಿದ್ದ ಸಂಘಗಳು ತಮ್ಮ ಸಂಘಟನೆಗಳನ್ನು ಎಐಟಿಯುಸಿಯಲ್ಲಿ ವಿಲೀನಗೊಳಿಸಿದವು.

ಈ ಅವಧಿಯು ರೈತರ ಸಂಘ ಮತ್ತು ಹೋರಾಟಗಳ ಕಾಲವೂ ಆಗಿತ್ತು. 1938ರಲ್ಲಿ 6,00,000 ಸದಸ್ಯತ್ವ ಹೊಂದಿದ್ದ ಎಐಕೆಎಸ್ ಸದಸ್ಯ ಸಂಖ್ಯೆ 1939ರಲ್ಲಿ 8,00,000ಕ್ಕೆ ಏರಿತು. ಕಾಂಗ್ರೆಸ್ ಸಚಿವರು ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಕಿಸಾನ್ ಸಭಾದ ಬೆಳವಣಿಗೆಯು ಕಾಂಗ್ರೆಸ್ ಸಚಿವರುಗಳ ಮತ್ತು ಬಲಪಂಥೀಯ ಕಾಂಗ್ರೆಸ್ ನಾಯಕತ್ವದ ಕಣ್ಣು ಕೆಂಪಗಾಗಿಸಿತ್ತು. ರೈತರ ಕೆಲವು ಬೇಡಿಕೆಗಳನ್ನು ಪರಿಗಣಿಸುವ ಮೂಲಕ ಅವರ ದಾರಿ ತಪ್ಪಿಸಲೂ ಪ್ರಯತ್ನ ಮಾಡಿದರು. ಆ ನಿಟ್ಟಿನಲ್ಲಿ ಶಾಸನಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲೇ ಅದಕ್ಕೆ ಸಮಾನಾಂತರದಲ್ಲಿ ದಮನಕಾರಿ ಕ್ರಮಗಳನ್ನು ತೆಗೆದುಕೊಳ್ಳುವ ಯತ್ನಗಳನ್ನೂ ಮಾಡಿದರು.

ಬಲಪಂಥೀಯ ಕಾಂಗ್ರೆಸ್ ನಾಯಕತ್ವದ ಆಶಯಕ್ಕೆ ವಿರುದ್ಧವಾಗಿ ಮತ್ತು ಅವರ ವಿರೋಧದ ನಡುವೆಯೂ ಆಲ್ ಇಂಡಿಯ ಸ್ಟೂಡೆಂಟ್ಸ್ ಫೆಡೆರೇಷನ್ ಕೂಡ ಈ ಅವಧಿಯಲ್ಲಿ ಪ್ರಗತಿ ಸಾಧಿಸಿತು. 1938ರಲ್ಲಿ 40,000 ಇದ್ದ ಸದಸ್ಯತ್ವ 1939ರಲ್ಲಿ 1,00,000ಕ್ಕೆ ಏರಿತ್ತು.

1938ರಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದ್ದಾಗ, ಸಿಪಿಐ ಒಂದು ಪ್ರಣಾಳಿಕೆಯನ್ನು ಸಿದ್ಧಪಡಿಸಿ ರಾಜರ ಸಂಸ್ಥಾನಗಳಲ್ಲಿ ಜನರ ಹೋರಾಟಗಳ ಬಗೆಗಿನ ಅವರ ನಿಲುವನ್ನು ಟೀಕೆ ಮಾಡಿತ್ತು. ಜನಸಮುದಾಯವನ್ನು ಅಣಿನೆರೆಸಲು ಪ್ರಚಾರ ಕೈಗೊಳ್ಳಲು ಪಕ್ಷ ಕರೆ ನೀಡಿತು; ಜನಚಳುವಳಿಯ ವಿರುದ್ಧ ದಮನಕಾರಿ ಕಾನೂನುಗಳ ಜಾರಿಯನ್ನು ತಡೆಯಬೇಕು, ಜೈಲಿನಲ್ಲಿರುವ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು, ಕಿಸಾನ್ ಸಭಾ ಕುರಿತು ಸ್ಪಷ್ಟ ನಿಲುವು ತಳೆಯಬೇಕು ಎಂದು ಸಚಿವರನ್ನು ಒತ್ತಾಯಿಸಲಾಗಿತ್ತು. ಕಾರ್ಮಿಕ ಸಂಘಗಳ ಮತ್ತು ಜನರ ಚಳುವಳಿಗೆ ಬೆಂಬಲ ನೀಡಬೇಕೆಂದು ಒತ್ತಾಯ ಮಾಡಲಾಯಿತು.

ಕಮ್ಯುನಿಸ್ಟರು ಜನರ ನಡುವೆ ಸಮಾಜವಾದ ಮತ್ತು ಕಮ್ಯುನಿಸಂನ ಸಿದ್ಧಾಂತಗಳನ್ನು ಪ್ರಚಾರ ಮಾಡಲು ಕಿಸಾನ್ ಸಭಾವನ್ನು ಬಳಸಿಕೊಳ್ಳುತ್ತಿದ್ದುದರಿಂದ ಮತ್ತು ಕಾಂಗ್ರೆಸಿನಿಂದ ಸ್ವತಂತ್ರವಾದ ಸಂಘಟನೆಗಳಲ್ಲಿ ರೈತರನ್ನು ಸಂಘಟಿಸುತ್ತಿದ್ದುದರಿಂದ ಕಾಂಗ್ರೆಸ್ಸಿನ ಬಲಪಂಥೀಯ ನಾಯಕತ್ವವು ಗಾಬರಿಗೊಂಡಿತ್ತು. ಕೇವಲ ಕಿಸಾನ್ ಸಭಾ ಬಗ್ಗೆ ಮಾತ್ರವಲ್ಲ, ಕಾರ್ಮಿಕ ಸಂಘ ಹಾಗೂ ವಿದ್ಯಾರ್ಥಿ ಸಂಘಗಳ ಬಗ್ಗೆಯೂ ಅವರಿಗೆ ದಿಗಿಲುಂಟಾಗಿತ್ತು. ಈ ಸಿದ್ಧಾಂತಗಳ ಆಧಾರದಲ್ಲಿ ಮುಷ್ಕರಗಳನ್ನು ಮತ್ತು ಹೋರಾಟಗಳನ್ನು ನಡೆಸುತಿದ್ದ ಸಂಗತಿ ಕೇವಲ ದೊಡ್ಡ ಭೂಮಾಲಕರು ಮತ್ತು ಬ್ರಿಟಿಷ್ ಆಳರಸರಿಗೆ ಮಾತ್ರವಲ್ಲ ಕಾಂಗ್ರೆಸ್ ಸಚಿವರಿಗೂ ಮುನಿಸುಂಟುಮಾಡಿತ್ತು. ಈ ಅವಧಿಯಲ್ಲಿ ಸಮಾಜವಾದ ಮತ್ತು ಕಮ್ಯುನಿಸಂ ಸಂದೇಶ ವ್ಯಾಪಕವಾಗಿ ಹರಡಿತು; ಬೆಳೆಯುತಿದ್ದ ಹೋರಾಟಗಳಿಗೆ ನಾಯಕತ್ವ ನೀಡುತ್ತಾ ಕಮ್ಯುನಿಸ್ಟ್ ಮತ್ತು ಸೋಶಿಯಲಿಸ್ಟ್ ಪಕ್ಷಗಳ ಶಕ್ತಿಯೂ ಹೆಚ್ಚಾಯಿತು.

ರೈತರು, ಕಾರ್ಮಿಕರು ಮತ್ತು ಇತರ ದುಡಿಯುವ ಜನವಿಭಾಗದಲ್ಲಿ ಮೂಡುತ್ತಿದ್ದ ಆಸೆ ಆಕಾಂಕ್ಷೆಗಳಿಗೆ ಸಂಘಟನಾ ರೂಪ ನೀಡುವಲ್ಲಿ ಕಮ್ಯುನಿಸ್ಟರು, ಸೋಶಿಯಲಿಸ್ಟರು ಹಾಗೂ ಕಾಂಗ್ರೆಸ್ಸಿನ ಎಡಪಂಥೀಯರು ಶ್ರಮಿಸಿದರು. ಸಾಮಾಜಿಕ ಬದಲಾವಣೆಗಾಗಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆಂದು ಮತ್ತು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹಾಗೂ ಅಧಿಕೃತ ದಸ್ತಾವೇಜುಗಳಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಬೇಕೆಂದು ಕಾಂಗ್ರೆಸ್ಸಿನ ಮೇಲೆ ಒತ್ತಡ ತರಲಾಯಿತು. ಕಾಂಗ್ರೆಸ್ ಸರ್ಕಾರಗಳು ಅಧಿಕಾರಕ್ಕೆ ಬಂದಮೇಲೆ ಸಿಕ್ಕ ಅಲ್ಪಸ್ವಲ್ಪ ಅವಕಾಶಗಳನ್ನು ಅವರು ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡರು; ಆ ಮೂಲಕ ಜನಾಂದೋಲನಗಳನ್ನು ಸಂಘಟಿಸಿದರು, ಕಾರ್ಮಿಕ ಸಂಘಗಳು ಮತ್ತು ರೈತ ಸಂಘಗಳನ್ನು ರಚಿಸಿಕೊಂಡರು ಮತ್ತು ಆ ಮೂಲಕ ಎಡ ಚಳುವಳಿಯನ್ನು ಬೆಳೆಸಿದರು.

ಕಮ್ಯುನಿಸ್ಟ್ ಪಕ್ಷ, ಸಿ.ಎಸ್.ಪಿ., ಹೊಸತಾಗಿ ಸ್ಥಾಪಿಸಲ್ಪಟ್ಟಿದ್ದ ಸುಭಾಶ್ ಚಂದ್ರ ಬೋಸರ ಫಾರ್ವರ್ಡ್ ಬ್ಲಾಕ್, ರಾಯಿಸ್ಟ್ ಗುಂಪು ಮತ್ತು ಅಖಿಲ ಭಾರತ ಕಿಸಾನ್ ಸಭಾ ಇವುಗಳನ್ನು ಸೇರಿಸಿ ಒಂದು ಎಡಪಂಥೀಯ ಸಮನ್ವಯ ಸಮಿತಿಯನ್ನು ರಚಿಸುವಲ್ಲಿ ಕಮ್ಯುನಿಸ್ಟರು ಮುಂದಾಳತ್ವ ವಹಿಸಿದರು. ಕಾಂಗ್ರೆಸ್ಸಿನೊಳಗಿನ ಬಲಪಂಥೀಯರ ವಿರುದ್ಧ ಹಲವಾರು ಪ್ರತಿಭಟನಾ ಕಾರ್ಯಕ್ರಮಗಳನ್ನು ಆಚರಿಸಲು ಅವರೆಲ್ಲರೂ ಸೇರಿ ಜನರಿಗೆ ಕರೆ ನೀಡಿದರು.

ಕಾರ್ಮಿಕ ವರ್ಗದ ನೇತೃತ್ವದಲ್ಲಿ ಇಡೀ ಜನಸಮುದಾಯವನ್ನು ಅಣಿನೆರೆಸಿ ಒಂದು ಕ್ರಾಂತಿಕಾರಿ ಚಳುವಳಿಯನ್ನು ರೂಪಿಸಲು ಕಮ್ಯುನಿಸ್ಟ್ ಪಕ್ಷ ಪ್ರಯತ್ನಿಸುತ್ತಿತ್ತು. ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಯಲ್ಲಿ ಕಾರ್ಮಿಕ ವರ್ಗದ ನಾಯಕತ್ವವನ್ನು ಕ್ರೋಢೀಕರಿಸಲು ಮತ್ತು ಬಂಡವಾಳಶಾಹಿ ನಾಯಕತ್ವದ ನೀತಿಗಳ ವಿರುದ್ಧ ರೈತರು ಮತ್ತು ಇತರ ದುಡಿಯುವ ಜನರಿಗೆ ನಾಯಕತ್ವ ನೀಡಲು ಅದು ಯತ್ನಿಸಿತು. ಬೇರೆಲ್ಲಾ ಎಡ ಪಕ್ಷಗಳಿಗಿಂತ ಕಮ್ಯುನಿಸ್ಟ್ ಪಕ್ಷ ಹೇಗೆ ಭಿನ್ನ ಎನ್ನುವುದನ್ನು ಇದು ಸಾಬೀತುಮಾಡಿತು.

ಹಿಂದೆ 'ಬಾಂಬ್ ರಾಜಕೀಯ'ದಲ್ಲಿ ನಂಬಿಕೆಯಿಟ್ಟಿದ್ದ ಹಳೆಯ ಕ್ರಾಂತಿಕಾರಿಗಳು ಮತ್ತು ಖೈದಿಗಳು, ಕಮ್ಯುನಿಸ್ಟ್ ಹಾಗೂ ಸೋಶಿಯಲಿಸ್ಟ್ ಸಾಹಿತ್ಯದ ಪರಿಚಯ ಮಾಡಿಕೊಂಡರು ಮತ್ತು ತಮ್ಮ ಬಿಡುಗಡೆಯಾದ ನಂತರ ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡರು, ಪ್ರಮುಖ ಕಮ್ಯುನಿಸ್ಟ್ ಮುಖಂಡರುಗಳಾದರು. ಇದು ಸಮಾಜವಾದ ಮತ್ತು ಕಮ್ಯುನಿಸಂಗೆ ದೊರೆತ ಗೆಲುವು, ಏಕೆಂದರೆ ಕಾಂಗ್ರೆಸ್‌ನ ಒಳಗಡೆ ಮತ್ತು ಹೊರಗಡೆ ಇದ್ದ ಕ್ರಾಂತಿಕಾರಿ ಶಕ್ತಿಗಳು ಕಾರ್ಮಿಕ ವರ್ಗ, ರೈತಾಪಿಗಳು ಮತ್ತು ಇತರ ದುಡಿಯುವ ಜನರ ಸಂಘಟಿತ ಕ್ರಾಂತಿಕಾರಿ ಶಕ್ತಿಯ ಆಧಾರದಲ್ಲಿ ಕಾರ್ಯನಿರ್ವಹಿಸುವ ಧೋರಣೆಯನ್ನು ಅಳವಡಿಸಿಕೊಳ್ಳಲು ಶುರುಮಾಡಿದರು.

ಕಮ್ಯುನಿಸ್ಟ್ ಪಕ್ಷದೊಂದಿಗಿನ ಐಕ್ಯ ಕಾರ್ಯಾಚರಣೆಯು ಸಿ.ಎಸ್.ಪಿ. ಯಲ್ಲಿ ಪರಿವರ್ತನೆಯನ್ನು ತಂದಿತು. ಸಿ.ಎಸ್.ಪಿ.ಯಲ್ಲಿನ ಒಂದು ವಿಭಾಗವು ತಮ್ಮ ಕಮ್ಯುನಿಸ್ಟ್ ವಿರೋಧಿ ಮತ್ತು ಸೋವಿಯತ್ ವಿರೋಧಿ ನಿಲುವನ್ನು ತೊರೆಯಿತು. ವರ್ಗದ ಆಧಾರದಲ್ಲಿ ಬಲಪಂಥೀಯ ನಾಯಕತ್ವವನ್ನು ವಿಮರ್ಶೆಮಾಡಿ, ಅವರ ಬಂಡವಾಳಶಾಹಿ ಸ್ವಭಾವವನ್ನು ಗ್ರಹಿಸಲು ಅವರು ಆರಂಭಿಸಿದರು. ಕ್ರಮೇಣವಾಗಿ ಅವರು ಕಮ್ಯುನಿಸ್ಟರಾಗಿ ಪರಿವರ್ತನೆಗೊಂಡರು. ಕೇರಳದ ಸಿ.ಎಸ್.ಪಿ.ಯು ಇಡಿಯಾಗಿ ಕಮ್ಯುನಿಸ್ಟ್ ಪಕ್ಷವಾಗಿ ಬದಲಾಯಿತು. ದೇಶದ ಇನ್ನಿತರ ಪ್ರದೇಶಗಳಲ್ಲಿಯೂ ಇದೇ ರೀತಿಯ ಬೆಳವಣಿಗೆಗಳು ನಡೆದವು.

ಈ ರೀತಿಯಲ್ಲಿ, ಕಾಂಗ್ರೆಸ್ ಸೋಶಿಯಲಿಸ್ಟರು ಮತ್ತು ಕಮ್ಯುನಿಸ್ಟ್ ಪಕ್ಷದ ನಡುವಿನ ಸಹಕಾರವು ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಕಾರಣವಾಯಿತು. ಪಕ್ಷವು ಒಂದು ಸ್ವತಂತ್ರ ಸಂಘಟಿತ ನೆಲೆಯಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಒಂದು ಗಮನಾರ್ಹ ಶಕ್ತಿಯಾಗಿ ಬೆಳೆಯಿತು.

ಹಾಸ್ಟೇಲ್ ಹೊರಗುತ್ತಿಗೆ ಸಿಬ್ಬಂಧಿಗಳನ್ನು ಸೇವೆಯಲ್ಲಿ ಮುಂದುವರೆಸಲು ಆಗ್ರಹ



ಹಾವೇರಿ: ಶಿಗ್ಗಾಂವಿ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಹಾಸ್ಟೆಲುಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ 11 ಮಂದಿ ಬಡ ಹೊರಗುತ್ತಿಗೆ ಸಿಬ್ಬಂದಿಗಳನ್ನು ತಾಲೂಕಾ ವಿಸ್ತೀರ್ಣಾಧಿಕಾರಿಗಳು ಹೆಚ್ಚುವರಿ ಎಂಬ ನೆಪ ತೋರಿಸಿ ಈಗ ಐದಾರು ತಿಂಗಳಿಂದ ಕೆಲಸದಿಂದ ಬಿಡುಗಡೆ ಮಾಡಿದ್ದು, ಸೇವೆಯಿಂದ ತೆಗೆದು ಹಾಕಿದ ಸಿಬ್ಬಂದಿಗೆ ಮರಳಿ ಕೆಲಸ ಕೊಡಬೇಕೆಂದು ಒತ್ತಾಯಿಸಿ ಇಂದು ಹಾವೇರಿ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಮನವಿ ನೀಡಲಾಯಿತು.

ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಮಾತನಾಡಿ, ಈ ಸಿಬ್ಬಂದಿಗಳು ತುಂಬ ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ. ವಾಸಕ್ಕೆ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ಸೇವೆಯಲ್ಲಿ ಇವರು ಜೇಷ್ಠತೆಯನ್ನು ಹೊಂದಿದವರಾಗಿದ್ದಾರೆ. ಆದರೆ ಅವರಿಗಿಂತ ಕಡಿಮೆ ವರ್ಷ ಸೇವೆ ಸಲ್ಲಿಸಿದವರನ್ನು ನೇಮಿಸಿಕೊಂಡು ಹೆಚ್ಚು ಸೇವೆ ಸಲ್ಲಿಸಿರುವ ಇವರನ್ನು ಸೇವೆಯಿಂದ ಬಿಡುಗಡೆ ಮಾಡಿರುವುದು ಸರಿಯಲ್ಲ ಎಂದರು.

ಈ ಸಿಬ್ಬಂಧಿಗಳಲ್ಲಿ ಹೆಚ್ಚಿನವರು ಮಹಿಳೆಯರೇ ಆಗಿದ್ದು ದಲಿತ ಹಿಂದುಳಿದ ವರ್ಗಗಳಿಗೆ ಸೇರಿದವರು. ಇವರಿಗೆ ಸೇವೆಯಲ್ಲಿ ಮುಂದುವರೆಯಲು ಅವಕಾಶ ನೀಡದಿದ್ದರೆ ಅವರೆಲ್ಲರೂ ಬೀದಿ ಪಾಲಾಗುತ್ತಾರೆ. ಕೆಲವು ಅಧಿಕಾರಿಗಳು ಈ ನೌಕರರಿಗೆ ಅನಗತ್ಯವಾಗಿ ಕಿರುಕುಳ ಕೊಡುತ್ತಾ ಬಂದಿದ್ದಾರೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಕಡಿಮೆ ಸೇವೆ ಸಲ್ಲಿಸಿದವರನ್ನು ನೇಮಿಸಿಕೊಂಡು ಹೆಚ್ಚುಸೇವೆ ಸಲ್ಲಿಸಿರುವವರನ್ನು ಹೊರ ಹಾಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾನವೀಯ ನೆಲಗಟ್ಟಿನಲ್ಲಿ ಈ ಸಿಬ್ಬಂದಿಗಳಿಗೆ ಕೂಡಲೇ ಬಾಕಿ ವೇತನವನ್ನು ಸಂದಾಯಮಾಡಿ ಸೇವೆಯಲ್ಲಿ ಮುಂದುವರೆಸಲು ಅವಕಾಶ ಕಲ್ಪಿಸಬೇಕು ಇಲ್ಲವಾದಲ್ಲಿ ತೀವ್ರ ತೆರನಾದ ಹೋರಾಟಕ್ಕೆ ಮುಂದಾಗಬೇಕಾಗುತ್ತೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಸೇವೆಯಿಂದ ವಜಾಗೊಂಡ ಸಿಬ್ಬಂದಿಗಳಾದ ಶಾಂತಕ್ಕ ಗಡ್ಡಿ, ರೇಣುಕಾ ದ್ಯಾಮನಗೌಡ್ರ, ಶಾಂತವ್ವ ಸಿಂಗಾಪೂರು, ಶಾಂತಮ್ಮ ತುಪ್ಪದ, ಸುಜಾತಾ ಆರೆಗೊಪ್ಪ, ಶಶಿಕಲಾ ಜೋಗಣ್ಣವರ, ಶಾಂತಾ ಕಲಾಲ, ರಿಂದವ್ವ ಭಜಂತ್ರಿಯವರು ಉಪಸ್ಥಿತರಿದ್ದರು.

ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆ:

ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ತಾಲೂಕುಗಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲುಗಳಿಂದ ತೆರವುಗೊಳಿಸಲಾದ ನೂರಾರು ಸಿಬ್ಬಂದಿಗಳು ಮಾರ್ಚ್ 5 ರಂದು ಇಡೀ ದಿನ ಬೆಳಗ್ಗೆಯಿಂದ ಸಂಜೆವರೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಎದುರು ಧರಣಿ ನಡೆಸಿ ತಮಗೆ 7–8 ತಿಂಗಳಿಂದ ಬಾಕಿ ಇರುವ ವೇತನವನ್ನು ಸಂದಾಯ ಮಾಡಬೇಕು ಮತ್ತು ನಿವೃತ್ತಿವರೆಗೆ ಸೇವೆಯಲ್ಲಿ ಮುಂದುವರೆಸಬೇಕೆಂದು ಒತ್ತಾಯಿಸಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಆಂಜನೇಯ ರೆಡ್ಡಿ, ಹಾಸ್ಟೆಲ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಮುನಿಯಪ್ಪ ಹೋರಾಟದ ನೇತೃತ್ವ ವಹಿಸಿದ್ದರು. ರಾತ್ರಿಯಾಗುತ್ತಿದ್ದಂತೆ ನೌಕರರು ತಮ್ಮ ಹೋರಾಟವನ್ನು ಅಹೋರಾತ್ರಿ ಮುಂದುವರೆಸಲು ನಿರ್ಧರಿಸಿದರು. ಅಷ್ಟರಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಕಚೇರಿಗೆ ಆಗಮಿಸಿದರು. ಆಗ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರ ನೇತೃತ್ವದ ನಿಯೋಗ ಸಿ.ಇ.ಓ. ಬಳಿಗೆ ಹೋಗಿ ಮನವಿಯನ್ನು ಸಲ್ಲಿಸಿ ಚರ್ಚಿಸಿದರು. ನಂತರ ಮಾತನಾಡಿದ ಸಿ.ಇ.ಓ.ರವರು ಕೆಲವು ನೌಕರರಿಗೆ ಬಾಕಿ ಇರುವ ಅರಿಯರ್ಸ್ ಹಣವನ್ನು ತಕ್ಷಣ ಪಾವತಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದರು.

ಬಾಕಿ ಇರುವ ವೇತನ ಹಾಗೂ ಸೇವೆಯಲ್ಲಿ ಮುಂದುವರೆಸುವ ಕುರಿತು ಬೇಡಿಕೆ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿಕೊಡುವುದಾಗಿ ಭರವಸೆ ನೀಡಿದರು. ಹೋರಾಟವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡರು.



ಮಳವಳ್ಳಿ ತಾಲೂಕು ಅಗಸನಪುರ ಗ್ರಾಮ ಪಂಚಾಯತಿ ಮುಂದೆ ಕುಡಿಯುವ ನೀರಿನ ಸಮರ್ಪಕವಾಗಿ ನೀಡಲು ಹಾಗೂ ದುರಸ್ತಿಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನ ಪುನಶ್ಚೇತನಗೊಳಿಸಲು ಒತ್ತಾಯಿಸಿ ಸಿಪಿಐ(ಎಂ) ಕೋಡಿಪುರ ಶಾಖೆಯಿಂದ ಪ್ರತಿಭಟನೆ ನಡೆಸಲಾಯಿತು.

ಹೋರಾಟದ ಒಂದು ವಿಶಿಷ್ಠ ಆಯಾಮ 'ಅಂತಿಗೊನೆ'... ಪುಟ 16 ರಿಂದ

ಸಂಭವಿಸಬಹುದಾಗಿದ್ದ ಯುದ್ಧಗಳನ್ನು ತಪ್ಪಿಸಬಹುದಾಗಿತ್ತು ಎಂದು ಎನ್ಲೈಟ್‌ಮೆಂಟ್ ಚಲನಚಿತ್ರವೂ ವರ್ತಮಾನದಲ್ಲಿ ತನ್ನ ಘೋರ ಇತಿಹಾಸವನ್ನು ಚಿತ್ರಿಸುತ್ತದೆ.

ಅಂತಿಗೊನೆ

ಲೆಬನಾನಿನಿಂದ ಮಾಂಟ್ರಿಯಾಲ್‌ಗೆ ವಲಸೆ ಬಂದ ಕುಟುಂಬವೊಂದು ಜೀವನ ನಡೆಸುತ್ತಿರುತ್ತದೆ. ಅನಿರೀಕ್ಷಿತ ಸನ್ನಿವೇಶದಲ್ಲಿ ಪೊಲೀಸರು ಗುಂಡಿಕ್ಕಿ ಒಬ್ಬನನ್ನು ಕೊಲೆ ಮಾಡುತ್ತಾರೆ. ಇಡೀ ಕುಟುಂಬ ನ್ಯಾಯಕ್ಕಾಗಿ ಹೋರಾಡುತ್ತದೆ. ಅಣ್ಣನನ್ನು ಕಳೆದುಕೊಂಡ 'ಅಂತಿಗೊನೆ' ಪೊಲೀಸರ ಸಂಘರ್ಷದಲ್ಲಿ ಬಂಧನಕ್ಕೊಳಗಾದ ಮತ್ತೊಬ್ಬ ಸಹೋದರರನ್ನು ಹೊರತರುವ ಪ್ರಯತ್ನ.

'ಅಂತಿಗೊನೆ' ಎಂಬ ಹದಿಯರೆಯದ ಹುಡುಗಿಯು ಸಹೋದರನಂತೆ ವೇಷ ಬದಲಿಸಿಕೊಂಡು ಜೈಲಿನಲ್ಲಿರುವ ಅಣ್ಣನು ತಪ್ಪಿಸಿಕೊಳ್ಳುವಂತೆ ಮಾಡಿ ತಾನು ಜೈಲಿನೊಳಗಿದ್ದು ನ್ಯಾಯಾಲಯದಲ್ಲಿ ಹೋರಾಟ ನಡೆಸುವ ಕೆನಡಾ ದೇಶದ ಫ್ರೆಂಚ್ ಭಾಷೆಯ ಸಿನಿಮಾ 'ಅಂತಿಗೊನೆ'.

ಜೈಲಿನೊಳಗಿದ್ದುಕೊಂಡೆ ಹೋರಾಟ ಮಾಡುವ ಅಂತಿಗೊನೆಗೆ ಜೈಲಿನ ಒಳಗೂ ಮತ್ತು ಹೊರಗು ವಿಶೇಷವಾಗಿ ವಿದ್ಯಾರ್ಥಿ ವಿಭಾಗದಿಂದ ಹೋರಾಟದ ತೀವ್ರತೆ ವ್ಯಕ್ತವಾಗುತ್ತದೆ. ಹೋರಾಟ ವಿವಿಧ ಮಾರ್ಗಗಳನ್ನು ತಿಳಿಸುವ ಈ ಚಿತ್ರದಲ್ಲಿ ನ್ಯಾಯಕ್ಕಾಗಿನ ಹೋರಾಟದ ದಿಟ್ಟ ಹೆಜ್ಜೆ ಎಂದಿಗೂ ಹಿಂದೆ ಸರಿಯುವಂತೆ ಮಾಡುವುದಿಲ್ಲ ಎಂದು ತಿಳಿಸುತ್ತದೆ.

ಸಿನಿಮಾ ಡಾಂಕಿ

ಸಿನಿಮೋತ್ಸವದ ಉದ್ಘಾಟನಾ ಸಿನಿಮಾ ಇರಾನ್ ದೇಶದ ಪರ್ಷಿಯನ್ ಭಾಷೆಯ 'ಸಿನಿಮಾ ಡಾಂಕಿ'. ಚಲನಚಿತ್ರವನ್ನು ನಿರ್ಮಿಸಬೇಕೆಂಬ ಹೊಸ ತಂಡಕ್ಕೆ ಕತ್ತೆಯ ಅವಶ್ಯಕತೆ ಇರುತ್ತದೆ. ಚಲನಚಿತ್ರವನ್ನು ನಾವೆಷ್ಟು ನೈಜತೆಯನ್ನು ಒಳಗೊಳ್ಳಬೇಕೆಂದುಕೊಂಡಿದ್ದರೂ ಸಹ ಎಲ್ಲವೂ ವಾಸ್ತವವನ್ನು ಪ್ರದರ್ಶಿಸುವುದಿಲ್ಲ. ಅನುಭವದ ಕೊರತೆ, ಕಡಿಮೆ ಬಂಡವಾಳ ಮತ್ತು ಮಾನವೀಯ ಸಂದೇಶ ಸಾರುವ ಚಿತ್ರ ನಿರ್ಮಿಸಬೇಕೆಂಬ ಚಿತ್ರತಂಡಕ್ಕೆ ಅವರದೇ ಆದ ಶ್ರದ್ಧೆತೆ ಯನ್ನು ಈ ಚಿತ್ರದಲ್ಲಿ ಅತ್ಯಂತ ಹಾಸ್ಯಭರಿತವಾಗಿ ಈ ಚಿತ್ರ ಪ್ರದರ್ಶನಗೊಂಡಿತು.

'ದಿ ಅನಾರ್ಥಡಾಕ್ಸ್' ಇಸ್ರೇಲ್‌ನ ಸಿನಿಮಾವು ಯಾಕೊವ್ ಕೋಹೆನ್ ಎಂಬ ಸಾಮಾನ್ಯ ವ್ಯಕ್ತಿ ಜನಾಂಗೀಯ ಕಾರಣದಿಂದ ತೊಂದರೆಗೊಳಗಾಗುವನು. ಅವುಗಳನ್ನು ಎದುರಿಸಲು ಇಬ್ಬರು ಸ್ನೇಹಿತರೊಂದಿಗೆ ತನ್ನದೇ ಸೆಫಾರ್ಡಿಕ್ ಯೆಹೂದ್ಯರು ಜನಾಂಗದ ರಾಜಕೀಯ ಪಕ್ಷವನ್ನು ಸ್ಥಾಪಿಸುವನು ಮತ್ತು ಸ್ಥಳೀಯ ಚುನಾವಣೆಯಲ್ಲಿ ಜಯಶೀಲನಾಗುತ್ತಾನೆ. ಪಕ್ಷದೊಳಗಿನ ರಾಜಕೀಯ ಕಾರಣದಿಂದಾಗಿ ಇತರರು ಅವನನ್ನೇ ಉಚ್ಚಾಟನೆ ಮಾಡುತ್ತಾರೆ. ಈ ಕಥಾವಸ್ತು ಒಳಗೊಂಡಿರುವ ಹಾಸ್ಯಭರಿತ ಚಿತ್ರವಾಗಿದೆ.

ಆಳುವ ವರ್ಗದ ಯುದ್ಧ ನೀತಿಗಳು, ಯುದ್ಧ ಪ್ರದೇಶ ಮತ್ತು ಗೆರಿಲ್ಲಾ ಪಡೆಗಳ ಮತ್ತು ಮಿಲಿಟರಿ ಪಡೆಗಳ ನರಕಯಾತನೆಯನ್ನು ಒಳಗೊಂಡಿರುವ ಕೊಲಂಬಿಯಾದ ಸ್ಪ್ಯಾನಿಷ್ ಭಾಷೆಯ 'ಮೋನೋಸ್' ಮತ್ತು ಉಕ್ರೇನ್ ಮತ್ತು ಪೋಲಾಂಡ್‌ನ ಉಕ್ರೇನಿಯನ್ ಮತ್ತು ರಷ್ಯಾ ಭಾಷೆಯ 'ಯು311 ಚೆರಾಸ್ಕಿ' ಚಲನಚಿತ್ರ, ಯುದ್ಧವೆಂಬುದು ಪ್ರಾರಂಭದಲ್ಲಿ ಅತ್ಯಂತ ಉಲ್ಲಾಸ ಭರಿತವಾಗಿ ಇರುವಂತೆ ಇದ್ದರೂ ಅಂತಿಮವಾಗಿ ಹೇಗೆ ಭೀಕರತೆಯನ್ನು ಸೃಷ್ಠಿ ಮಾಡುತ್ತದೆ ಎಂದು ತಿಳಿಸಿಕೊಡುತ್ತದೆ.

ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಕುರಿತಾದ 'ಮೇಡ್ ಇನ್ ಬಾಂಗ್ಲಾದೇಶ್' ದಲಿತ ಮತ್ತು ಮೇಲ್ವರ್ಗದ ನಡುವಿನ ಕುರಿತಾದ 'ಪಿಂಗಾರ', ಎರಡು ಕುಟುಂಬದ ಮಾನವೀಯ ಸಂಬಂಧಗಳ ಕುರಿತಾದ ಆಸ್ಕರ್ ಪ್ರಶಸ್ತಿ ಪಡೆದ 'ಪ್ಯಾರಸೈಟ್' ಚಲನಚಿತ್ರಗಳು. ಚರಿತ್ರಾರ್ಹ ವ್ಯಕ್ತಿಗಳ ಕುರಿತು ಮತ್ತು ದಿನನಿತ್ಯದ ಬದುಕಿನ ಜಂಜಾಟ ಮತ್ತು ಪ್ರತಿದಿನ ಎದುರಾಗುವ ಆತಂಕ ಮತ್ತು ತುಡಿತದ ಕುರಿತಾದ ಹಲವು ಚಿತ್ರಗಳು ಈ ಬಾರಿ ಪ್ರದರ್ಶನಗೊಂಡವು.


ವಿಶ್ವದಲ್ಲಿ ಜಾತ್ಯಾತೀತ ಮೌಲ್ಯಗಳು ಮತ್ತು ಪ್ರಭುತ್ವ ಮತ್ತು ಸಾಮಾನ್ಯ ಜನವಿಭಾಗಗಳ ನಡುವಿನ ಅಂತರ ದೂರ ಸರಿಯುತ್ತಿರುವ ಇಂದಿನ ಸಂದರ್ಭ. ಪ್ರಭುತ್ವದ ಮೇಲೆ ಹಿಡಿತ ಸಾಧಿಸುತ್ತಿರುವ ಧಾರ್ಮಿಕ ಕೇಂದ್ರಗಳು ತಮ್ಮ ಅಸಹನೆಯನ್ನು ತೋರ್ಪಡಿಸುವ ಹಲವು ಚಲನಚಿತ್ರಗಳು. ದೇಶದ ಇಪ್ಪತ್ತಕ್ಕೂ ಹೆಚ್ಚು ಭಾಷೆಯ ಮತ್ತು ವಿದೇಶದ ಹಲವು ಚಲನಚಿತ್ರಗಳು ಉತ್ಸವದಲ್ಲಿ ಇದ್ದವು. ವ್ಯಕ್ತಿ ವಿಶೇಷವಾಗಿ ಅನಂತನಾಗ್ ರವರನ್ನು ಗೌರವಿಸಲಾಗಿದ್ದು. ಅವರ ಮರಾಠಿ, ಹಿಂದಿ, ಕನ್ನಡ ಒಳಗೊಂಡ ಹಲವು ಚಲನಚಿತ್ರಗಳು ಸಹ ಪರದೆಯ ಮೇಲೆ ಬಂದವು.

ಚಿತ್ರರಂಗದ 125 ವರ್ಷದ ಇತಿಹಾಸದಲ್ಲಿ ಸದಾಕಾಲ ಅಚ್ಚಳಿಯದೇ ಉಳಿಯುವ ದಶಕಗಳ ಹಿಂದಿನ ಹಲವು ಚಲನಚಿತ್ರಗಳು ಸಿನಿಮೋತ್ಸವದಲ್ಲಿ ಇದ್ದವು.

ಎಂಟು ದಿನ ನಡೆದ ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವದಲ್ಲಿ 200ಕ್ಕೂ ಹೆಚ್ಚು ಸಿನಿಮಾಗಳು ಒಟ್ಟು 14 ಪರದೆಯಲ್ಲಿ ಪ್ರದರ್ಶನಗೊಂಡವು. ಸುಮಾರು 12 ಸಾವಿರಕ್ಕೂ ಹೆಚ್ಚು ಜನತೆ ಉತ್ಸವದ ಪಾಸ್‌ಗಳನ್ನು ಪಡೆದಿದ್ದರು. ಸಿನಿಮೋತ್ಸವದಲ್ಲಿ ಬಹುತೇಕ ಜನತೆ ಕೇವಲ ಒಂದು ಇಡೀ ಸಿನಿಮಾವನ್ನು ಪೂರ್ತಿಯಾಗಿ ನೋಡುವುದಿಲ್ಲ ಅಥವಾ ಒಂದು ಪರದೆಯಿಂದ ಮತ್ತೊಂದು ಪರದೆಗೆ ಪಲಾಯನ ಮಾಡುವಂತಹದೇ ಹೆಚ್ಚಾಗಿ ಕಂಡುಕೊಳ್ಳಲಾಯಿತು.

ದೇಶದಲ್ಲಿ ಬದಲಾದ ರಾಜಕೀಯ ಸನ್ನಿವೇಶಗಳು ಮತ್ತು 2019ರಲ್ಲಿ ದೇಶದ ಸಿನಿಮಾ ರಂಗ ಅದಕ್ಕೆ ಹೇಗೆ ಪ್ರತಿಕ್ರಿಯೆ ನೀಡಿತು ಅಥವಾ ನೀಡಲಿಲ್ಲ. ಎಂಬ ಕುರಿತಾಗಿ ಯಾವುದೇ ಚರ್ಚೆ ಒಳಗೊಳ್ಳಲಿಲ್ಲ. ಬದಲಾಗಿ ಆಧುನಿಕ ತಂತ್ರಜ್ಞಾನ, ಡಿಜಿಟಲ್ ವ್ಯವಸ್ಥೆ, ಚಿತ್ರರಂಗದ ಕೆಲವೇ ವಿಷಯಗಳ ಕುರಿತು ಮಾತ್ರ ಚರ್ಚೆ ಮತ್ತು ಸಂವಾದಗಳು ನಡೆದವು. ಅಂತೂ ಈ ವರ್ಷದ ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ ಮುಗಿಯಿತು.

ಅರ್ಥವ್ಯವಸ್ಥೆ ಗಂಭೀರ ಸ್ಥಗಿತತೆಯತ್ತ ಜಾರುತ್ತಿದೆ
ಮೋದಿ ಅಂಡ್ ಕೊ ಗೆ ಇದರ ಪರಿವೆಯೂ ಇಲ್ಲ



ಸರಕಾರ ಅಂಕಿ-ಅಂಶಗಳಲ್ಲಿ ಏನೇ ಕಸರತ್ತು ಮಾಡಿದರೂ, 2019-20ರ ಹಣಕಾಸು ವರ್ಷದ ಜಿಡಿಪಿ ವೃದ್ಧಿದರ 5ಶೇ.ಕ್ಕಿಂತ ಹೆಚ್ಚಾಗುವ ಸಾಧ್ಯತೆ ಇಲ್ಲ ಎಂದು ಈಗ ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿ (ಎನ್‌ಎಸ್‌ಒ) ಹೇಳುತ್ತಿದೆ. ಇದು ಕಳೆದ 11 ವರ್ಷಗಳಲ್ಲೇ ಅತೀ ಕಡಿಮೆ ವೃದ್ಧಿದರ. ವಿವಿಧ ಹಣಕಾಸು ಸಂಸ್ಥೆಗಳ ಈ ಕುರಿತ ಅಂದಾಜುಗಳು ಇನ್ನೂ ಕೆಳಮಟ್ಟದಲ್ಲಿ ಇವೆ. ನಮ್ಮ ಮೇಲೀಗ ಒಂದು ಗಂಭೀರ ಆರ್ಥಿಕ ಸ್ಥಗಿತತೆಯ ಹೊರೆ ಬಿದ್ದಿದೆ. ಇದನ್ನು ನಿವಾರಿಸಿಕೊಳ್ಳಬೇಕಾದರೆ, ನವ-ಉದಾರವಾದದ ಒಪ್ಪಿಗೆಯನ್ನು ಲೆಕ್ಕಿಸದೆ, ಅದನ್ನು ಮೀರಿ ಬಹಳ ದೂರ ಹೋಗುವ ಒಂದು ಶಕ್ತಿಶಾಲೀ ಹಣಕಾಸು ಮಧ್ಯಪ್ರವೇಶವನ್ನು ಮಾಡಬೇಕಾಗುತ್ತದೆ. ಬೇಸರದ ಸಂಗತಿಯೆಂದರೆ ಮೋದಿ ಮತ್ತು ಕಂಪನಿಗೆ ಇದರ ಯೋಚನೆಯೂ ಇಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ವಿ.

ಭಾರತೀಯ ಅರ್ಥವ್ಯವಸ್ಥೆಯನ್ನು ಕುರಿತ ಅಂಕಿ-ಅಂಶಗಳು ಅವನ್ನು ಅಂದಾಜು ಮಾಡುವ ವಿಧಾನಗಳಲ್ಲಿ ಮಾಡುತ್ತಿರುವ ಬದಲಾವಣೆಗಳಿಂದಾಗಿ ಹೆಚ್ಚೆಚ್ಚು ತಬ್ಬಿಬ್ಬುಗೊಳಿಸುವಂತದ್ದಾಗಿ ಬಿಡುತ್ತಿವೆ. ಅಲ್ಲದೆ, ಈ ಅಂಕಿ-ಅಂಶಗಳು ಅರ್ಥವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ತೋರಿಸಿದಾಗಲೆಲ್ಲ ಬಿಜೆಪಿ ಸರಕಾರ ಅದನ್ನು ಬಚ್ಚಿಟ್ಟು ಬಿಡುತ್ತದೆ. ಆದರೆ ಭಾರತದ ಅರ್ಥವ್ಯವಸ್ಥೆ ಒಂದು ಗಂಭೀರ ಸ್ಥಗಿತತೆಯ ಸ್ಥಿತಿಗೆ ಜಾರುತ್ತಿದೆ ಎಂಬುದನ್ನು ಕಾಣದಂತೆ ಮಾಡುವುದು ಯಾವುದರಿಂದಲೂ ಸಾಧ್ಯವಿಲ್ಲ.

ಈ ಹಣಕಾಸು ವರ್ಷದ 3ನೇ ತ್ರೈಮಾಸಿಕದ(ಅಕ್ಟೋಬರ್-ಡಿಸೆಂಬರ್) ಜಿಡಿಪಿ ಕಳೆದ ವರ್ಷದಲ್ಲಿ ಈ ಅವಧಿಯಲ್ಲಿನ ಬೆಳವಣಿಗೆಗೆ ಹೋಲಿಸಿದರೆ 4.7ಶೇ.ದಷ್ಟು ಮಾತ್ರ ಬೆಳೆದಿದೆ. ಎರಡನೇ ತ್ರೈಮಾಸಿಕದಲ್ಲಿ ಈ ಬೆಳವಣಿಗೆ ದರ 4.5ಶೇ. ಇತ್ತು. 2019-20ರ ಹಣಕಾಸು ವರ್ಷದ ಜಿಡಿಪಿ ವೃದ್ಧಿದರ 5ಶೇ.ಕ್ಕಿಂತ ಹೆಚ್ಚಾಗುವ ಸಾಧ್ಯತೆ ಇಲ್ಲ ಎಂದು ಈಗ ರಾಷ್ಟ್ರೀಯ ಅಂಕಿ-ಅಂಶಗಳ ಕಚೇರಿ (ಎನ್‌ಎಸ್‌ಒ)ಯ ನಂಬಿಕೆ. ವಿವಿಧ ಹಣಕಾಸು ಸಂಸ್ಥೆಗಳ ಈ ಕುರಿತ ಅಂದಾಜುಗಳು ಇನ್ನೂ ಕೆಳಮಟ್ಟದಲ್ಲಿ ಇವೆ.

5ಶೇ. ಎಂದೇ ಇಟ್ಟುಕೊಂಡರೂ, ಇದು ಕಳೆದ 11 ವರ್ಷಗಳಲ್ಲೇ ಅತೀ ಕಡಿಮೆ ವೃದ್ಧಿದರ. ಜಿಡಿಪಿಯನನು ಅಂದಾಜು ಮಾಡುವ ಹೊಸ ವಿಧಾನ ವೃದ್ಧಿದರವನ್ನು ಗಂಭೀರವಾಗಿ ಮೇಲಂದಾಜು ಮಾಡುತ್ತದೆ ಎಂಬುದೀಗ ಬಹಳ ಸ್ಪಷ್ಟವಾಗಿರುವ ಸಂಗತಿ. ನಿಜ ಹೇಳಬೇಕೆಂದರೆ, ಆರ್ಥಿಕ ಮಂದಗತಿ ಆರಂಭವಾಗುವ ಮೊದಲಿನ ಅವಧಿಯಲ್ಲಿ 7ಶೇ. ವೃದ್ಧಿದರ ಇತ್ತು ಎಂದು ಹೇಳಿಕೊಂಡಿದ್ದರೂ ನಿಜವಾದ ವೃದ್ಧಿದರ ಸುಮಾರು 4.5ಶೇ.ದಷ್ಟು ಇದ್ದಿರಬಹುದು ಎಂದು ಮಾಜಿ ಮುಖ್ಯ ಆರ್ಥಿಕ ಸಲಹೆಗಾರರೊಬ್ಬರು ಸೂಚಿಸಿದ್ದರು. ಇದರ ಅರ್ಥ, 5ಶೇ. ಅಧಿಕೃತ ವೃದ್ಧಿದರ ವಾಸ್ತವವಾಗಿ ಅದಕ್ಕಿಂತ ಕಡಿಮೆ, ಬಹುಶಃ ಸುಮಾರು 3ರಿಂದ 3.5ಶೇ. ದಾಟಲಾರದ ದರವನ್ನು ಸೂಚಿಸುತ್ತಿರಬಹುದು. ಇದನ್ನು ಈ ಹಿಂದಿನ ದಿನಗಳಲ್ಲಿ 'ಹಿಂದೂ ವೃದ್ಧಿ ದರ' ಎಂದು ಕುಚೋದ್ಯ ಮಾಡಲಾಗುತ್ತಿತ್ತು.

ಹಿಂದುತ್ವ ಶಕ್ತಿಗಳ ಉಚ್ಛ್ರಾಯ ವೃದ್ಧಿದರವನ್ನೂ ಕೂಡ 'ಹಿಂದೂಕರಿಸಿ'ದಂತೆ ಕಾಣುತ್ತದೆ! ಆದರೆ ಈ 3.5ಶೇ. ವೃದ್ಧಿ ಮತ್ತು ಆ ಹಳೆಯ ದಿನಗಳ 3.5ಶೇ.ದ ನಡುವೆ ಕೆಲವು ಮಹತ್ವದ ವ್ಯತ್ಯಾಸಗಳಿವೆ. ಅವುಗಳಲ್ಲಿ ಕನಿಷ್ಟ ಮೂರನ್ನು ಗಮನಿಸಲೇ ಬೇಕಾಗಿದೆ.

ಮೊದಲನೆಯದಾಗಿ, ಆ ಹಳೆಯ ದಿನಗಳ 3.5ಶೇ. ಜಿಡಿಪಿ ವೃದ್ಧಿದರದೊಂದಿಗೆ ಅದಕ್ಕಿಂತ ಬಹಳ ಹೆಚ್ಚಿನ ಉದ್ಯೋಗ ವೃದ್ಧಿ ದರಗಳು ಇರುತ್ತಿದ್ದವು. ಏಕೆಂದರೆ ಆಗ ಶ್ರಮವನ್ನು ಹೊರಹಾಕುವ ತಂತ್ರಜ್ಞಾನ-ಸಂರಚನಾ ಬದಲಾವಣೆಗಳನ್ನು ತರುವುದರ ಮೇಲೆ ನಿರ್ಬಂಧಗಳಿದ್ದವು.

ಎರಡನೆಯದಾಗಿ, ಆದಾಯ ವಿತರಣೆಯಲ್ಲಿನ ಅಸಮಾನತೆ ಈ ದಿನಗಳಲ್ಲಿ ಹೆಚ್ಚುತ್ತಿರುವಂತೆ ಆ ಕಾಲದಲ್ಲಿ ಇರಲಿಲ್ಲ. ನಿಜಸಂಗತಿಯೆಂದರೆ, ಪಿಕೆಟಿ ಮತ್ತು ಚಾನ್ಸೆಲ್ ಆದಾಯ ತೆರಿಗೆ ದತ್ತಾಂಶಗಳ ಆಧಾರದಲ್ಲಿ ಅಂದಾಜು ಮಾಡಿರುವಂತೆ 1980ರ ದಶಕದ ಆರಂಭದಲ್ಲಿ ಅತ್ಯಂತ ಮೇಲಿನ 1ಶೇ. ಕುಟುಂಬಗಳ ಪಾಲು 6ಶೇ.ದಷ್ಟು ಕಡಿಮೆ ಮಟ್ಟದಲ್ಲಿತ್ತು. ಅದೀಗ 2013-14 ರವೇಳೆಗೆ 22ಶೇ.ಕ್ಕೆ ಜಿಗಿದಿದೆ. 1922ರಲ್ಲಿ ಭಾರತದಲ್ಲಿ ಆದಾಯ ತೆರಿಗೆಯನ್ನು ಆರಂಭಿಸಿದ ನಂತರ ಎಂದೂ ಅದು ಈ ಮಟ್ಟಕ್ಕೆ ಏರಿರಲಿಲ್ಲ.


ಮೂರನೆಯದಾಗಿ, ಕೃಷಿಯಲ್ಲಿ, ಅದರಲ್ಲೂ ಆಹಾರಧಾನ್ಯಗಳ ಗಮನಾರ್ಹ ವೃದ್ಧಿದರ ಒಟ್ಟಾರೆ ವೃದ್ಧಿದರವನ್ನು ಉಳಿಸಿಕೊಂಡು ಬರುತ್ತಿತ್ತು. ಈ ಮೂಲಕ ವಸಾಹತುಶಾಹೀ ಆಳ್ವಿಕೆಯ ಕೊನೆಯ ಅರ್ಧ ಶತಮಾನದಲ್ಲಿದ್ದ ತೀವ್ರ ಬರದ ಪ್ರವೃತ್ತಿ ಬದಲಾಗಿ ತಲಾ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಲಭ್ಯತೆ ಗಮನಾರ್ಹವಾಗಿ ಹೆಚ್ಚಿದ್ದವು. ತಲಾ ಲಭ್ಯತೆ 1900ರಲ್ಲಿ 200 ಕೆ.ಜಿ. ಇದ್ದದ್ದು ಸ್ವಾತಂತ್ರ್ಯದ ವೇಳೆಗೆ 140 ಕೆ.ಜಿ.ಗೆ ಇಳಿದಿತ್ತು. 1980ರ ದಶಕದ ವೇಳೆಗೆ ಅದು 180 ಕೆ.ಜಿ. ಬಳಿ ತಲುಪಿತ್ತು. ಆನಂತರ ಮತ್ತೆ ಇಳಿದಿದೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಉದಾರೀಕರಣದ ಹಿಂದಿನ ಅವಧಿಯಲ್ಲಿ ಜಿಡಿಪಿ ವೃದ್ಧಿದರ ಕಡಿಮೆಯಿದ್ದರೂ, ವಿತರಣೆಯಲ್ಲಿನ ಅಸಮಾನತೆ ಕಡಿಮೆಯಿತ್ತು, ಮತ್ತು ಹಸಿವನ್ನು, ನವ-ಉದಾರವಾದ ಶಿಖರಕ್ಕೇರಿದ್ದ ಅವಧಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಶಮನ ಗೊಳಿಸಿತ್ತು. ಈಗ ಮಂದಗತಿಯನ್ನು ಕಾಣುತ್ತಿರುವಾಗಲಂತೂ ಹೇಳುವಂತೆಯೆ ಇಲ್ಲ.

2018-19ರಲ್ಲಿ ವೃದ್ಧಿ ದರ 6.1ಶೇ. ಎಂದು ಅಂದಾಜು ಮಾಡಲಾಗಿತ್ತು. ಇದಕ್ಕೆ ಹೋಲಿಸಿದರೆ 2019-20ರ ಮಂದಗತಿಯ ಬೆಳವಣಿಗೆಗೆ ಮುಖ್ಯವಾಗಿ ಕಾರಣ ಕೃಷಿಯೇತರ ವಲಯದಲ್ಲಿನ ಮಂದಗತಿ. ಕೃಷಿವಲಯದಲ್ಲಿನ ವೃದ್ಧಿ ದರ 2019-20ರಲ್ಲಿ ಹಿಂದಿನ ವರ್ಷದಲ್ಲಿ ಇದ್ದಷ್ಟೇ ಇರುತ್ತದೆ ಎಂದು ಅಂದಾಜು ಮಾಡಲಾಗಿದೆ. ಅಂದರೆ ಕಳೆದ ವರ್ಷ 2.88ಶೇ. ಇದ್ದರೆ ಈ ವರ್ಷ 2.9ಶೇ. ಇರಬಹುದು. ಅಂದರೆ ಸುಮಾರಾಗಿ ಸ್ಥಿರವಾಗಿದೆ. ಬೇರೆ ವಲಯಗಳಲ್ಲಿ ಮಾತ್ರ ವೃದ್ಧಿದರ ಮಂದಗತಿಗಿಳಿದಿದೆ, ಇದರಿಂದಾಗಿ ಒಟ್ಟಾರೆ ವೃದ್ಧಿದರ 5ಶೇ.ಕ್ಕೆ ಇಳಿಯಬಹುದೆಂದು ಹೇಳಲಾಗುತ್ತಿದೆ. ವಿಶೇಷವಾಗಿ ಎದ್ದು ಕಾಣುತ್ತಿರುವ ಸಂಗತಿಯೆಂದರೆ ಕೈಗಾರಿಕಾ ವೃದ್ಧಿ, ಅದರಲ್ಲೂ ತಯಾರಿಕಾ ವಲಯದ ಬೆಳವಣಿಗೆ ನಿಧಾನಗೊಳ್ಳುತ್ತಿದೆ.

ಸರಕಾರ ಕೈಗಾರಿಕಾ ವೃದ್ಧಿ ದರ ಸುಮಾರು 2ಶೇ.ದಷ್ಟಿರಬಹುದು ಎಂದು ನಿರೀಕ್ಷಿಸುತ್ತಿದೆ. ಆದರೆ ಎರಡನೇ ಮತ್ತು ಮೂರನೇ ತ್ರೈಮಾಸಿಕದಲ್ಲಿ ವಾಸ್ತವವಾಗಿ ವೃದ್ಧಿದರ ನಕಾರಾತ್ಮಕವಾಗಿತ್ತು. ಹೀಗಿರುವಾಗ 2ಶೇ. ವೃದ್ಧಿಯ ಸಂಭವವೂ ಬಹಳ ಕಡಿಮೆ. ಕೃಷಿ ವಲಯದ ವೃದ್ಧಿದರ ಬದಲಾಗದಿರುವಾಗ ಕೈಗಾರಿಕಾ ವಲಯದಲ್ಲಿ ಮಂದಗತಿ ಮೇಲ್ನೋಟಕ್ಕೆ ವಿಚಿತ್ರವೆನಿಸಬಹುದು. ಆದರೆ ಇದಕ್ಕೆ ಮೂರು ಮೂಲ ಕಾರಣಗಳಿವೆ.

ಒಂದು, ಕೃಷಿ ವೃದ್ಧಿ ದರ ಮತ್ತು ಗ್ರಾಮೀಣ ಬಳಕೆ ಖರ್ಚುಗಳ ವೃದ್ಧಿ ದರ ಎರಡೂ ಒಂದೇ ಅಲ್ಲ. ಕೃಷಿ ವೃದ್ಧಿ ದರ ಹೆಚ್ಚಿದ್ದಾಗಲೂ ಗ್ರಾಮೀಣ ಬಳಕೆ ಖರ್ಚುಗಳ ಏರಿಕೆಯಲ್ಲಿ ಮಂದಗತಿ ಕಾಣ ಬಹುದು.



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ಇದಕ್ಕೆ 2017-18 ಒಂದು ಒಳ್ಳೆಯ ಉದಾಹರಣೆ. ಅದು ಬಂಪರ್ ಬೆಳೆ ಬಂದ ವರ್ಷವಾಗಿತ್ತು. ಆದರೂ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ದತ್ತಾಂಶಗಳ ಪ್ರಕಾರ ಆ ವರ್ಷ ಗ್ರಾಮೀಣ ಭಾರತದಲ್ಲಿ ತಲಾ ನಿಜ ವೆಚ್ಚ 2011-12ಕ್ಕೆ ಹೋಲಿಸಿದಾಗ ಬಹಳ ಕಮ್ಮಿಯಿತ್ತು, ಸುಮಾರು 8ಶೇ.ದಷ್ಟು. ಇದು ಕೃಷಿ ವೃದ್ಧಿ ಅಂದಾಜುಗಳಲ್ಲಿನ ದೌರ್ಬಲ್ಯಗಳಿಂದ ಆಗಿರಬಹುದು, ಅಥವ ಹೆಚ್ಚು ಮಹತ್ವದ್ದೆಂದರೆ, ರೈತರು ಮತ್ತು ಕೃಷಿ ಕೂಲಿಕಾರರ ಜೀವನ ವೆಚ್ಚ ಸೂಚ್ಯಂಕ ನಿಜ ಚಿತ್ರವನ್ನು ಇದ್ದುದಕ್ಕಿಂತ ಬಹಳ ಕೆಳಗಿನ ಮಟ್ಟದಲ್ಲಿ ಲೆಕ್ಕ ಹಾಕಿರುವುದರಿಂದಾಗಿ ಇರಬಹುದು. ಏಕೆಂದರೆ ಅದು ಶಿಕ್ಷಣ ಮತ್ತು ಆರೋಗ್ಯಪಾಲನೆಯ ಖಾಸಗೀಕರಣದಿಂದಾಗುವ ವೆಚ್ಚದ ಹೆಚ್ಚಳದ ಪರಿಣಾಮಗಳನ್ನು ಗಮನಕ್ಕೆ ತಗೊಂಡಿಲ್ಲ.

ಎರಡು, ಒಂದು ನವ-ಉದಾರವಾದಿ ಅರ್ಥವ್ಯವಸ್ಥೆಯಲ್ಲಿ ಹೊರಗಣ ಮಾರುಕಟ್ಟೆಯ ಪಾತ್ರ ಆಂತರಿಕ ಮಾರುಕಟ್ಟೆಗೆ ಹೋಲಿಸಿದರೆ ಬಹಳಷ್ಟು ಹೆಚ್ಚುತ್ತದೆ. ಏಕೆಂದರೆ, ಅಂತರ್ರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ಉತ್ತಮ ಪಡಿಸುವುದಕ್ಕಾಗಿ ಕೂಲಿ/ಸಂಬಳಗಳನ್ನು ಕೆಳಮಟ್ಟದಲ್ಲಿ ಇಡುವುದರ ಪರಿಣಾಮವಾಗಿ ಆಂತರಿಕ ಮಾರುಕಟ್ಟೆಯ ಮೇಲೆ ಉದ್ದೇಶಪೂರ್ವಕವಾಗಿಯೇ ನಿರ್ಬಂಧ ಉಂಟಾಗುತ್ತದೆ. ಇದು ಭಾರತೀಯ ಅರ್ಥವ್ಯವಸ್ಥೆಯಲ್ಲಿ ಚಟುವಟಿಕೆಯ ಮಟ್ಟದ ಮೇಲೆ ವಿಶ್ವ ಆರ್ಥಿಕ ಬಿಕ್ಕಟ್ಟು ಹೇಗೆ ಪರಿಣಾಮ ಬೀರುತ್ತದೆ ಎಂಬುದಕ್ಕೆ ದಾರಿ ಒದಗಿಸುತ್ತದೆ. ರಫ್ತು ವೃದ್ಧಿ ನಿಜವಾಗಿಯೂ ನಿಧಾನಗೊಂಡಿದೆ. ಇದು ಕೈಗಾರಿಕಾ ವಲಯವೂ ಸೇರಿದಂತೆ ಒಟ್ಟು ಅರ್ಥ ವ್ಯವಸ್ಥೆಯ ಮೇಲೆ ಹಲವಾರು ರೀತಿಗಳಲ್ಲಿ ಪರಿಣಾಮ ಬೀರಿದೆ.

ಇಲ್ಲಿ ಭಾರತದ ಅರ್ಥವ್ಯವಸ್ಥೆಯ ಒಂದು ವಿಲಕ್ಷಣತೆಯನ್ನು ಗಮನಿಸಬೇಕು. ಜಾಗತಿಕ ಸರಕು ಮತ್ತು ಬಂಡವಾಳ ಹರಿವಿಗೆ ತನ್ನನ್ನು 'ತೆರೆದು'ಕೊಳ್ಳುವ ಮೂಲಕ ಭಾರತದ ಹಲವಾರು ಸೇವಾವಲಯದ ಉತ್ಪನ್ನಗಳ, ವಿಶೇಷವಾಗಿ ಐಟಿ-ಸಂಬಂಧಿತ ಸೇವೆಗಳ ರಫ್ತುಗಳು ಹೆಚ್ಚುವುದು ನಿಜವಾಗಿಯೂ ಸಾಧ್ಯವಾಗಿದೆ. ಆದರೆ ಕೈಗಾರಿಕಾ ವಲಯಕ್ಕೆ ಸಂಬಂಧಿಸಿದಂತೆ ಈ ರೀತಿ 'ತೆರೆ'ದಿಟ್ಟದ್ದರಿಂದ ಭಾರತೀಯ ಅರ್ಥವ್ಯವಸ್ಥೆಗೆ ಯಾವುದೇ ನಿವ್ವಳ ಪ್ರಯೋಜನ ಆಗಿಲ್ಲ, ತದ್ವಿರುದ್ಧವಾಗಿ, ನಿವ್ವಳವಾಗಿ ನಕಾರಾತ್ಮಕ ಪರಿಣಾಮವೇ ಉಂಟಾಗಿರಬಹುದು. ನಿಜ ಹೇಳಬೇಕೆಂದರೆ ಕೈಗಾರಿಕಾ ವೃದ್ಧಿದರ ಇಡೀ ನವ-ಉದರವಾದೀ ಅವಧಿಯಲ್ಲಿ, ಅದಕ್ಕೆ ಮೊದಲಿದ್ದ ನಿರ್ಬಂಧಗಳ ಅವಧಿಗಿಂತ ಹೆಚ್ಚೇನೂ ಇರಲಿಲ್ಲ.

ಭಾರತೀಯ ಕೈಗಾರಿಕೆಗಳಿಗೆ ಆಂತರಿಕ ಮಾರುಕಟ್ಟೆಯಲ್ಲಿ, ಪೂರ್ವ ಏಷ್ಯಾದ, ಅದರಲ್ಲೂ ಚೀನಾದ ಸ್ಪರ್ಧೆಯನ್ನು ಎದುರಿಸಿ ನಿಲ್ಲಲು ಕಷ್ಟವೆನಿಸಿದ್ದು ಒಂದೆಡೆಯಾದರೆ, ರಫ್ತು ಮಾರುಕಟ್ಟೆಯಲ್ಲೂ ಬಹಳೇನೂ ಮುಂದೊತ್ತಲು ಆಗಲಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಅರ್ಥವ್ಯವಸ್ಥೆಯನ್ನು 'ತೆರೆದಿಟ್ಟ' ಪರಿಣಾಮವಾಗಿ ಕೆಲವು ಸೇವೆಗಳಿಗೆ ಉತ್ತೇಜನೆ ಸಿಕ್ಕಿದರೂ, ಕೈಗಾರಿಕಾ ಬೆಳವಣಿಗೆಯನ್ನು ದಬಾಯಿಸಿಟ್ಟಂತಾಯಿತು.

ಈಗ ನವ-ಉದಾರವಾದಕ್ಕೆ ಮುಂದೆ ದಾರಿಗಾಣದೆ ಜಾಗತಿಕ ಆರ್ಥಿಕ ವ್ಯವಸ್ಥೆ ಒಂದು ಮಂದಗತಿಯ ಅವಧಿಯನ್ನು ಪ್ರವೇಸಿಸಿರುವಾಗ, ಈ ಕೈಗಾರಿಕಾ ದಬಾವಣೆ, ಒಂದು ಕೈಗಾರಿಕಾ ಹಿನ್ನಡೆಯಾಗಿ ಪರಿವರ್ತನೆಗೊಂಡಿದೆ, ಅತ್ತ ಸೇವಾವಲಯಕ್ಕಿದ್ದ ಉತ್ತೇಜನೆ ಕೊನೆಗೊಳ್ಳುತ್ತಿದೆ. ಇದು ಒಟ್ಟು ಅರ್ಥವ್ಯವಸ್ಥೆಯನ್ನು ಒಂದು ಸುದೀರ್ಘವಾದ ಸ್ಥಗಿತತೆಯ ಅವಧಿಯತ್ತ ನೂಕುತ್ತಿದೆ. ಇಲ್ಲಿಯೇ ಕೈಗಾರಿಕಾ ಸ್ಥಗಿತತೆಯ ಮೂರನೆಯ ಅಂಶ ಕೆಲಸ ಮಾಡಲಾರಂಭಿಸಿರುವುದು. ಇದು ಹೂಡಿಕೆಯಲ್ಲಿ ಕಡಿತಕ್ಕೆ ಸಂಬಂಧಪಟ್ಟ ಅಂಶ. ಈ ಹೂಡಿಕೆ ಇಳಿಕೆ ಕೈಗಾರಿಕಾ ಸ್ಥಗಿತತೆಯ ಕಾರಣವೂ ಹೌದು, ಪರಿಣಾಮವೂ ಹೌದು. ಈ ಹೂಡಿಕೆ ಕಡಿತ ಬಂಡವಾಳ ಸರಕು ವಲಯವನ್ನಂತೂ ಬಹಳವಾಗಿ ತಟ್ಟಿದೆ.

ಭಾರತದ ಅರ್ಥವ್ಯವಸ್ಥೆಗೆ ಹೇಗೆ ಮತ್ತೆ ಜೀವ ತುಂಬುವುದು ಎಂಬುದರ ಒಂದೇ ಒಂದು ಹೊಳಹು ಕೂಡ ಬಿಜೆಪಿ ಸರಕಾರಕ್ಕೆ ಇಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಅದು ಕೊಟ್ಟ ಕಾರ್ಪೊರೇಟ್ ತೆರಿಗೆಗಳ ಕಡಿತ, ಮೊದಲೇ ನಿರೀಕ್ಷಿಸದಂತೆ, ಖಾಸಗಿ ಕಾರ್ಪೊರೇಟ್ ಹೂಡಿಕೆಯಲ್ಲಿ ಒಂದಿನಿತೂ ವ್ಯತ್ಯಾಸವನ್ನು ತಂದಿಲ್ಲ. ಏಕೆಂದರೆ, ಇಂತಹ ಹೂಡಿಕೆಗಳು ಮಾರುಕಟ್ಟೆಯ ಬೆಳವಣಿಗೆ ಎಷ್ಟರ ಮಟ್ಟಿಗೆ ಆಗುತ್ತದೆ ಎಂಬ ನಿರೀಕ್ಷೆಯನ್ನು ಅವಲಂಬಿಸಿರುತ್ತವೆ. ಮಾರುಕಟ್ಟೆಯ ವೃದ್ಧಿಯನ್ನು ಚುರುಕುಗೊಳಿಸದೇ ಇರುವ ವರೆಗೆ, ಎಷ್ಟೇ ತೆರಿಗೆ ಕಡಿತಗಳನ್ನೂ ಕೊಟ್ಟರೂ, ಹೆಚ್ಚಿನ ಹೂಡಿಕೆಗಳೇನೂ ಆಗುವುದಿಲ್ಲ. ತದ್ವಿರುದ್ಧವಾಗಿ, ಇಂತಹ ಕಡಿತಗಳಿಂದಾಗಿ ಹಣಕಾಸು ಕೊರತೆಯ ಗುರಿಯನ್ನು ತಲುಪುವುದಕ್ಕಾಗಿ ಸರಕಾರದ ವೆಚ್ಚಗಳಲ್ಲಿ ಇಳಿಕೆಯಾದರೆ, ಆಗ ಉತ್ಪಾದನಾ ಸಾಮರ್ಥ್ಯದಬಳಕೆಯೂ ಇಳಿಯುತ್ತದೆ, ಖಾಸಗಿ ಕಾರ್ಪೊರೇಟ್ ಹೂಡಿಕೆಗಳೂ ಇಂತಹ ಕಡಿತಗಳಿಂದಾಗಿ ಇಳಿಯುತ್ತವೆ.

ಅದರ ಇತರ ಕ್ರಮಗಳು, ಜಿಎಸ್‌ಟಿ ದರಗಳಲ್ಲಿ ಕೈಯಾಡಿಸುವುದು, ಮತ್ತು "ಮೇಕ್ ಇನ್ ಇಂಡಿಯಾ' ಪ್ರಚಾರ ಕೂಡ ಅಷ್ಟೇ ದೋಷಪೂರ್ಣವಾಗಿವೆ. ಇದರಿಂದೇನೂ ನೆರವು ಸಿಗುವುದಿಲ್ಲ. ಮತ್ತು ಇದರಿಂದ ರೆವಿನ್ಯೂ ಆದಾಯಗಳು ಕಡಿಮೆಯಾದರೆ ಮತ್ತು ಅದರಿಂದಾಗಿ, ಮತ್ತೆ ಹಣಕಾಸು ಕೊರತೆಯ ಗುರಿಯನ್ನು ತಲುಪಲಿಕ್ಕಾಗಿ ವೆಚ್ಚಗಳಲ್ಲಿ ಕಡಿತವಾದರಂತೂ, ನೆರವಿನ ಬದಲು ತೊಂದರೆಯೇ ಉಂಟಾಗುತ್ತದೆ.

ಇನ್ನು 'ಮೇಕ್ ಇಂಡಿಯಾ'ದ ಬಗ್ಗೆ ಹೇಳುವುದಾದರೆ, ಜಾಗತಿಕ ಅರ್ಥಿಕ ಬಿಕ್ಕಟ್ಟಿನಿಂದಾಗಿ ಹೆಚ್ಚೇನೂ ಹೂಡಿಕೆಗಳು ನಡೆಯದೇ ಇರುವಾಗ, ಭಾರತದೊಳಕ್ಕೆ ಹೆಚ್ಚಿನ ಹೂಡಿಕೆಗಳನ್ನು ಪಡೆಯುವ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಈಗ ಸಿಎಎ ಮತ್ತು ಎನ್‌ಆರ್‌ಸಿ ಉಂಟು ಮಾಡಿರುವ ಸಾರ್ವತ್ರಿಕ ಸಾಮಾಜಿಕ ಅಸಂತೃಪ್ತಿ, ಅದಕ್ಕೂ ಮೇಲಾಗಿ ಮುಸ್ಲಿಮರ ವಿರುದ್ಧ ಹತ್ಯಾಕಾಂಡ, ಇಂತಹ ಹೂಡಿಕೆಗಳನ್ನು ಆಕರ್ಷಿಸುವ ಬದಲು, ಹೊಡೆದೋಡಿಸುತ್ತದಷ್ಟೇ.

ಸಂಕ್ಷಿಪ್ತವಾಗಿ, ನಮ್ಮ ಮೇಲೀಗ ಒಂದು ಗಂಭೀರ ಆರ್ಥಿಕ ಸ್ಥಗಿತತೆಯ ಹೊರೆ ಬಿದ್ದಿದೆ. ಇದನ್ನು ನಿವಾರಿಸಿಕೊಳ್ಳಬೇಕಾದರೆ, ನವ-ಉದಾರವಾದದ ಒಪ್ಪಿಗೆಯನ್ನು ಲೆಕ್ಕಿಸದೆ, ಅದನ್ನು ಮೀರಿ ಬಹಳ ದೂರ ಹೋಗುವ ಒಂದು ಶಕ್ತಿಶಾಲೀ ಹಣಕಾಸು ಮಧ್ಯಪ್ರವೇಶವನ್ನು ಮಾಡಬೇಕಾಗುತ್ತದೆ. ಬೇಸರದ ಸಂಗತಿಯೆಂದರೆ ಮೋದಿ ಮತ್ತು ಕಂಪನಿಗೆ ಇದರ ಯೋಚನೆಯೂ ಇಲ್ಲ. ಇದು ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ಕೊರೊನ ವೈರಸ್‌ನ ಪರಿಣಾಮವನ್ನು ಇನ್ನೂ ಲೆಕ್ಕಕ್ಕೆ ತಗೊಳ್ಳದೇ ಇರುವಾಗಿನ ಪರಿಸ್ಥಿತಿ ಎಂಬುದನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು.



ತಾಲಿಬಾನ್-ಅಮೆರಿಕ ದೋಹಾ ಒಪ್ಪಂದ

ಅಫ್ಘಾನಿಸ್ತಾನ ಮತ್ತೆ ತಾಲಿಬಾನಿಸ್ತಾನ್?

ಜಗದ ಸುತ್ತ

ವಸಂತರಾಜ ಎನ್.ಕೆ.

ಅಮೆರಿಕದ ಇತಿಹಾಸದಲ್ಲೇ ನಡೆದ (19 ವರ್ಷಗಳ) ಅತ್ಯಂತ ದೀರ್ಘಯುದ್ಧ ಎಂದು ಕುಖ್ಯಾತವಾದ 'ಅಫ್ಘಾನಿಸ್ತಾನ ಯುದ್ಧ' ಕೊನೆಗೊಳಿಸುವ ಒಪ್ಪಂದಕ್ಕೆ ಅಮೆರಿಕ ಸರಕಾರ ಫೆಬ್ರವರಿ 29ರಂದು ದೋಹಾದಲ್ಲಿ ಸಹಿ ಹಾಕಿದೆ.ಈ ಒಪ್ಪಂದ ಅಫ್ಘಾನಿಸ್ತಾನವನ್ನು ತಾಲಿಬಾನಿನ ತೆಕ್ಕೆಗೆ ಹಾಕುವಂತೆ ಅಥವಾ ಇನ್ನೊಂದು ಅಂತರ್ಯುದ್ಧದತ್ತ ತಳ್ಳುವಂತೆ ಕಾಣುತ್ತಿದೆ. ಅಫ್ಗನ್ ಜನತೆ ತಮ್ಮ ರಾಜಕೀಯ ಭವಿಷ್ಯವನ್ನು ತಾವೇ ಶಾಂತಿಯುತವಾಗಿ ರೂಪಿಸಿಕೊಳ್ಳುವಂತೆ ಮಾಡುವುದು ದೋಹಾ ಒಪ್ಪಂದದ ಉದ್ದೇಶವೇ ಆಗಿದ್ದಂತೆ ಕಾಣುವುದಿಲ್ಲ.ಅಫ್ಗನ್ ಜನತೆ ಮತ್ತು ಸರಕಾರ ಮಾತ್ರವಲ್ಲ, ಭಾರತ ಸಹ ದೋಹಾ ಒಪ್ಪಂದದಿಂದ ತೀವ್ರ ಹಿನ್ನಡೆ ಅನುಭವಿಸಿದೆ. ಅಫ್ಘಾನಿಸ್ತಾನದಲ್ಲಿ ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಅಮೆರಿಕ ಪೂರ್ಣವಾಗಿ ನಿರ್ಲಕ್ಷಿಸಿದೆ.ಹಲವಾರು ವರ್ಷಗಳ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ಮತ್ತು ಇಡೀ ಪ್ರದೇಶದಲ್ಲಿ ಇಸ್ಲಾಮಿಕ್ ಮೂಲಭೂತವಾದದ ವಿರುದ್ಧ ಭಾರತದ ಹೋರಾಟಕ್ಕೆ ಈ ಒಪ್ಪಂದ ತಣ್ಣೀರೆರಚಿದೆ. ಟ್ರಂಪ್ ಭಾರತ ಭೇಟಿಯ ಮೊದಲೆ ಒಪ್ಪಂದವನ್ನು ಮಾಡಿಕೊಂಡು ಭಾರತಕ್ಕೆ ತೀವ್ರ ನಿರ್ಲಕ್ಷ, ಅವಮಾನವನ್ನು ಮಾಡಿದ್ದಾರೆ.ಅಮೆರಿಕದ 'ಜೂನಿಯರ್ ಪಾರ್ಟನರ್' ಆಗಿರುವ ಈಗಿನ ವಿದೇಶಾಂಗ ನೀತಿ ಮುಂದುವರೆಸಿದರೆ ಸ್ವ-ಹಿತಾಸಕ್ತಿಗಳಿಗೆ ಇಂತಹ ತೀವ್ರ ಧಕ್ಕೆ, ಅವಮಾನ, ನಿರ್ಲಕ್ಷಗಳನ್ನಷ್ಟೇ ಭಾರತ ಪಡೆಯಬಲ್ಲುದು. ಇನ್ನೇನನ್ನಲ್ಲ ಎಂದು ಮತ್ತೊಮ್ಮೆ ರುಜುವಾತಾಗಿದೆ.

ಅಮೆರಿಕದ ಇತಿಹಾಸದಲ್ಲೇ ನಡೆದ (19 ವರ್ಷಗಳ) ಅತ್ಯಂತ ದೀರ್ಘಯುದ್ಧ ಎಂದು ಕುಖ್ಯಾತವಾದ 'ಅಫ್ಘಾನಿಸ್ತಾನ ಯುದ್ಧ' ಕೊನೆಗೊಳಿಸುವ ಒಪ್ಪಂದಕ್ಕೆ ಅಮೆರಿಕ ಸರಕಾರ ಫೆಬ್ರವರಿ 29ರಂದು ದೋಹಾದಲ್ಲಿ ಸಹಿ ಹಾಕಿದೆ. ಈ ಒಪ್ಪಂದವನ್ನು 'ಅಫ್ಘಾನಿಸ್ತಾನ ಒಪ್ಪಂದ' ಎಂದು ಕರೆದರೂ ಇದರಲ್ಲಿ ಅಫ್ಘಾನಿಸ್ತಾನ ಸರಕಾರಕ್ಕೆ ಯಾವುದೇ ಪಾತ್ರವಿರಲಿಲ್ಲ. ಈ ಒಪ್ಪಂದ ಆಗಿರುವುದು ಈಗಲೂ ಭಯೋತ್ಪಾದಕ ಉಗ್ರ ಸಂಘಟನೆಗಳ ಪಟ್ಟಿಯಲ್ಲಿರುವ 'ತಾಲಿಬಾನ್' ಎಂದು ಕರೆಯಲಾಗುವ 'ಇಸ್ಲಾಮಿಕ್ ಎಮಿರೇಟ್ ಆಫ್ ಅಫ್ಘಾನಿಸ್ತಾನ' ಮತ್ತು ಅಮೆರಿಕನ್ ಸರಕಾರದ ನಡುವೆ ಎನ್ನುವುದು ಆಶ್ಚರ್ಯಕರವಾಗಿ ಕಾಣಬಹುದು. ಆದರೆ ಕಳೆದ ಕೆಲವು ದಶಕಗಳ ಅಫ್ಘಾನಿಸ್ತಾನ ಯುದ್ಧಗಳ ಇತಿಹಾಸ ಗೊತ್ತಿರುವವರಿಗೆ ಇದು ಅಷ್ಟೇನೂ ಆಶ್ಚರ್ಯಕರವಲ್ಲ.

ಯಾಕೆಂದರೆ 'ತಾಲಿಬಾನ್' 1990ರ ದಶಕದಲ್ಲಿ ಅಮೆರಿಕದ ಸಿ.ಐ.ಎ ಮತ್ತು ಪಾಕಿಸ್ತಾನದ ಐ.ಎಸ್.ಐ ಗೂಢಚಾರ ಸಂಸ್ಥೆಗಳುಹುಟ್ಟು ಹಾಕಿದ ಇಸ್ಲಾಮಿಕ್ ಮೂಲಭೂತವಾದಿ ಭಯೋತ್ಪಾದಕ ಗುಂಪು. ತಾಲಿಬಾನ್ 1980ರ ದಶಕದಲ್ಲಿದ್ದ ಅಫ್ಘಾನಿಸ್ತಾನ ಪ್ರಗತಿಪರ ಸರಕಾರವನ್ನು ಸಿ.ಐ.ಎ–ಐ.ಎಸ್.ಐ ಹಣ–ಮಿಲಿಟರಿ ಬೆಂಬಲಗಳೊಂದಿಗೆ ಉರುಳಿಸಿ ಅಧಿಕಾರಕ್ಕೆ ಬಂದಿತ್ತು.ನಂತರ ಬೆಳೆದು ಹುಟ್ಟಿಸಿದವರನ್ನೇ ಅಟ್ಟಿಸಿಕೊಂಡು ಹೋಗುವ ಭಸ್ಮಾಸುರವಾಗಿತ್ತು. ಅಮೆರಿಕದ ಮೇಲೆ 9/11 ಭಯೋತ್ಪಾದಕ ದಾಳಿಯ ನಂತರ ಅಕ್ಟೋಬರ್ 2001ರಲ್ಲಿ, 'ಇಸ್ಲಾಮಿಕ್ ಮೂಲಭೂತವಾದವನ್ನು ಮಟ್ಟ ಹಾಕುವ' 'ಎಂದೂ ಮಿಗಿಯದ ಯುದ್ಧ'ದ ಘೋಷಣೆಯೊಂದಿಗೆ ಭೀಕರ ಬಾಂಬ್ ದಾಳಿಗಳೊಂದಿಗೆ, ಇತ್ತೀಚಿನ ಸುತ್ತಿನ ಅಫ್ಘಾನಿಸ್ತಾನ ಯುದ್ಧವನ್ನು ಆಮೆರಿಕ ಆರಂಭಿಸಿತ್ತು. ತಾಲಿಬಾನ್ ಸರಕಾರವನ್ನು ಉರುಳಿಸಿ, ಹಲವು ಕೈಗೊಂಬೆ ಸರಕಾರಗಳನ್ನು ಸ್ಥಾಪಿಸಿ ಬೆಂಬಲಿಸಿದರೂ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅಥವಾ ಇಸ್ಲಾಮಿಕ್ ಮೂಲಭೂತವಾದವನ್ನು ಮಟ್ಟ ಹಾಕಲು ಅದಕ್ಕೆ ಸಾಧ್ಯವಾಗಿರಲಿಲ್ಲ. ತಾಲಿಬಾನ್ ಮತ್ತು ಇತರ ಕೆಲವು ಇಸ್ಲಾಮಿಕ್ ಗುಂಪುಗಳು ಅಮೆರಿಕನ್ ಬೆಂಬಲಿತ ಸರಕಾರ ಮತ್ತು ಪಡೆಗಳ ವಿರುದ್ಧ ನಿರಂತರ ಗೆರಿಲ್ಲಾ ಹೋರಾಟವನ್ನು ಮುಂದುವರೆಸಿವೆ. ಈಗಲೂ ಅಫ್ಘಾನಿಸ್ತಾನದ ಸುಮಾರು ಅರ್ಧ ಪ್ರದೇಶವನ್ನು ನಿಯಂತ್ರಿಸುತ್ತಿವೆ. 19 ವರ್ಷಗಳ ಕಾಲ ತಾನೇ ಹುಟ್ಟು ಹಾಕಿ ಪೋಷಿಸಿದ್ದ ತಾಲಿಬಾನ್ ಮತ್ತು ಇಸ್ಲಾಮಿಕ್ ಮೂಲಭೂತವಾದವನ್ನು ನಾಶ ಮಾಡಲು ಪ್ರಯತ್ನಿಸಿದ ಅಮೆರಿಕ ಈಗ ಹತಾಶವಾಗಿ ಈ ಒಪ್ಪಂದಕ್ಕೆ ಸಹಿ ಹಾಕಿದೆ.

ಒಪ್ಪಂದದ ಮುಖ್ಯಾಂಶಗಳು

ಅಫ್ಘಾನಿಸ್ತಾನದಿಂದ ಅಮೆರಿಕದ ಸೇನೆ ಮತ್ತು ನ್ಯಾಟೊ ಪಡೆಗಳ ವಾಪಸಾತಿಈ ಒಪ್ಪಂದದ ಮುಖ್ಯ ಭಾಗ. ಒಪ್ಪಂದಕ್ಕೆ ಸಹಿ ಹಾಕಿದ 135 ದಿನಗಳ ಒಳಗೆ ಅಫ್ಘಾನಿಸ್ತಾನದಲ್ಲಿರುವ ಅಮೆರಿಕದ ಸೈನಿಕರ ಸಂಖ್ಯೆಯನ್ನು 8,600ಕ್ಕೆ ಇಳಿಸುವುದು, ಎಲ್ಲ ಒಪ್ಪಂದದ ಪ್ರಕಾರ ನಡೆದರೆ, 14 ತಿಂಗಳ ಒಳಗೆ ಅಮೆರಿಕದ ಎಲ್ಲಾ ಸೈನಿಕರನ್ನು ವಾಪಸ್ ಕರೆಸಿಕೊಳ್ಳುವುದು ಎಂದು ಒಪ್ಪಂದ ಹೇಳುತ್ತದೆ. ಇದಕ್ಕೆ ಪ್ರತಿಯಾಗಿ ಅಲ್ ಕೈದಾ ಉಗ್ರ ಸಂಘಟನೆ ಮತ್ತು ಇತರ ಉಗ್ರ ಸಂಘಟನೆಗಳು ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳ ವಿರುದ್ಧ ಭಯೋತ್ಪಾದನಾ ಚಟುವಟಿಕೆಗಳಿಗೆ ಅಫ್ಘಾನಿಸ್ತಾನದ ನೆಲವನ್ನು ಬಳಸಿಕೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ ತಾಲಿಬಾನ್‌ನದ್ದು. ಅಫ್ಘಾನಿಸ್ತಾನದ ವಿವಿಧ ಜೈಲುಗಳಲ್ಲಿ ಬಂಧನದಲ್ಲಿರುವ ತಾಲಿಬಾನಿನ 5,000 ಉಗ್ರರನ್ನು ಮತ್ತು ತಾಲಿಬಾನ್ ಬಂಧನದಲ್ಲಿರುವ 1,000 ಮಂದಿ ಅಫ್ಘಾನಿಸ್ತಾನದ ಸೈನಿಕರನ್ನು ಮಾರ್ಚ್ 10ರ ಒಳಗೆ ಬಿಡುಗಡೆ ಮಾಡಬೇಕು, ಅಂದರೆ ಬಂಧಿಗಳ ವಿನಿಮಯ ಆಗಬೇಕು. ತಾಲಿಬಾನ್ ಉಗ್ರರ ಮೇಲೆ ವಿಶ್ವಸಂಸ್ಥೆ ವಿಧಿಸಿರುವ ನಿರ್ಬಂಧಗಳನ್ನು ಮತ್ತು ಹಣಕಾಸು ದಿಗ್ಬಂಧನಗಳನ್ನು ತೆರವು ಮಾಡಿಸುವ ಜವಾಬ್ದಾರಿ ಅಮೆರಿಕದ್ದು. ಮಾರ್ಚ್10ರಿಂದ ತಾಲಿಬಾನ್–ಅಫ್ಘಾನಿಸ್ತಾನದ ಚ ುನಾಯಿತಸರ್ಕಾರದಮಧ್ಯೆಮಾತುಕತೆನಡೆಯಬೇಕ ು. ಅಧಿಕಾರಹಂಚಿಕೆಸಂಬಂಧ ಒಮ್ಮತಕ್ಕೆಬರಬೇಕು. ಇವು ಒಪ್ಪಂದದ ಮುಖ್ಯಾಂಶಗಳು.

ಈ ಒಪ್ಪಂದಕ್ಕೆ 2018 ಸೆಪ್ಟೆಂಬರ್ ರಿಂದಲೇ ಅಮೆರಿಕನ್ ಸರಕಾರ ಮತ್ತು ತಾಲಿಬಾನ್ ನಡುವೆ ದೀರ್ಘ ಮಾತುಕತೆಗಳು ನಡೆದಿವೆ. ಹಲವು ಬಾರಿ ಮುರಿದು ಬಿದ್ದಿವೆ. ಮತ್ತೆ ಆರಂಭವಾಗಿವೆ. ಆದರೆ ಈ ಮಾತುಕತೆಗಳ ಯಾವುದೇ ಹಂತದಲ್ಲೂ ಅಫ್ಗನ್ ಸರಕಾರವನ್ನು ತೊಡಗಿಸಿಕೊಂಡಿರಲಿಲ್ಲ. ಯಾಕೆಂದರೆ ಅಫ್ಗನ್ ಸರಕಾರವು ಮಾತುಕತೆಯ ಭಾಗವಾಗಿದ್ದರೆ ತಾನು ಭಾಗವಹಿಸುವುದಿಲ್ಲವೆಂದು ತಾಲಿಬಾನ್ ಹೇಳಿತ್ತು. ಈಗಿನ ಅಫ್ಗನ್ ಸರಕಾರಕ್ಕೆ ಪರೋಕ್ಷವಾಗಿ ಸಹ ಮಾನ್ಯತೆ ಕೊಡಲು ಅದು ನಿರಾಕರಿಸಿತ್ತು. ಅಫ್ಗನ್ ಸರಕಾರವನ್ನು ಈ ಮಾತುಕತೆ ಹಾಗೂ ಒಪ್ಪಂದದಲ್ಲಿ ತೊಡಗಿಸುವ ಗಂಭೀರ ಪ್ರಯತ್ನವನ್ನು ಸಹ ಅಮೆರಿಕ ಮಾಡಲಿಲ್ಲ.

ಯಾವುದೇ 'ಶಾಂತಿ' ಒಪ್ಪಂದ ಸಾಮಾನ್ಯವಾಗಿ ಒಳಗೊಳ್ಳುವ ಶಾಶ್ವತ ಕದನ ವಿರಾಮ ಸಹ ಈ ಒಪ್ಪಂದದಲ್ಲಿ ಇಲ್ಲ. ಬರಿಯ 'ಒಂದು ವಾರ ಸಂಘರ್ಷ ಕಡಿಮೆ ಮಾಡುವ' ಅಂಶವಷ್ಟೇ ಇತ್ತು. ಈ ಒಂದು ವಾರದ ನಂತರ ತಾಲಿಬಾನ್ ತನ್ನ ಸಶಸ್ತ್ರ ದಾಳಿಗಳನ್ನು ಮತ್ತೆ ಆರಂಭಿಸಿದೆ. ಒಪ್ಪಂದ ಸಹಿ ಹಾಕಿದ ನಂತರದ 24 ಗಂಟೆಗಳಲ್ಲಿ 16 ಪ್ರಾಂತ್ಯಗಳಲ್ಲಿ 33 ದಾಳಿಗಳು ನಡೆದವು. ತಮ್ಮ ಸರಕಾರ ಈ ಒಪ್ಪಂದದ ಭಾಗವಾಗಿಲ್ಲದಿರುವುದರಿಂದ ಮಾರ್ಚ್ 10ರೊಳಗೆ ತಾಲಿಬಾನ್ ಬಂಧಿಗಳನ್ನು ಬಿಡುಗಡೆ ಮಾಡಬೇಕಾಗಿಲ್ಲ ಎಂದು ಅಫ್ಗನ್ ಅಧ್ಯಕ್ಷ ಘನಿ ಹೇಳಿದ್ದಾರೆ. ತಾಲಿಬಾನ್ ಇದನ್ನು ಖಂಡಿಸಿ ತನ್ನ ದಾಳಿಗಳ ತೀವ್ರತೆಯನ್ನು ಹೆಚ್ಚಿಸಿದೆ. ಇದರಿಂದಾಗಿ ಅಫ್ಗನ್ ಜನತೆಯ ದೃಷ್ಟಿಯಿಂದ ಒಪ್ಪಂದದ ಮುಖ್ಯ ಅಂಶವಾದ ದೇಶದ ರಾಜಕೀಯ ಶಕ್ತಿಗಳು ಪರಸ್ಪರ ಮಾತುಕತೆ ನಡೆಸಿ ಶಾಂತಿಯುತ ರಾಜಕೀಯ ಭವಿಷ್ಯದ ಕುರಿತು ಒಮ್ಮತ ಸಾಧಿಸುವ ಸಾಧ್ಯತೆಯೇ ಇರುವಂತೆ ಕಾಣುವುದಿಲ್ಲ.

ತಾಲಿಬಾನ್ ಗೆ ದೊಡ್ಡ ರಾಜಕೀಯ ವಿಜಯ?

ಬದಲಿಗೆ ಈ ಒಪ್ಪಂದ ತಾಲಿಬಾನ್ ಗೆ ದೊಡ್ಡ ರಾಜಕೀಯ ವಿಜಯ ಮತ್ತು ಮುಂದಿನ ಮಿಲಿಟರಿ ವಿಜಯದ ಸೋಪಾನವಾಗುವಂತೆ ಕಾಣುತ್ತದೆ. ತಾಲಿಬಾನ್ ಇದು ತನ್ನ ಭಾರೀ ವಿಜಯ ಎಂದು ಘೋಷಿಸಿದೆ ಕೂಡಾ. ಯಾಕೆಂದರೆ ಯಾವುದೇ ಪ್ರಮುಖ ರಿಯಾಯಿತಿ ಕೊಡದೆ ಅದಕ್ಕೆ ಬೇಕಾದ ಎಲ್ಲವೂ ಸಿಕ್ಕಿದೆ. ಅದರ 'ಜಾಗತಿಕ ಭಯೋತ್ಪಾದಕ' ಪಟ್ಟ ಮತ್ತು ರಾಜಕೀಯ–ಆರ್ಥಿಕ ದಿಗ್ಬಂಧನಗಳು ಹೋಗಿ, ಅಫ್ಗನ್ ಜನತೆಯ ಪ್ರಮುಖ ರಾಜಕೀಯ ಶಕ್ತಿಯೆಂಬ ಮಾನ್ಯತೆ ಸಿಕ್ಕಿದೆ. ಇದಕ್ಕಾಗಿ ಪ್ರಸಕ್ತ ಅಫ್ಗನ್ ಸಂವಿಧಾನ, ಸರಕಾರ, ಪ್ರಜಾಪ್ರಭುತ್ವ ಮುಂತಾದ ಉದಾರವಾದಿ ಮೌಲ್ಯಗಳನ್ನು ಅಥವಾ ಇತರ ರಾಜಕೀಯ ಶಕ್ತಿಗಳನ್ನು ಮನ್ನಿಸುವ ಅಥವಾ ಒಪ್ಪಿಕೊಳ್ಳುವ ಅಗತ್ಯ ಬಿದ್ದಿಲ್ಲ. ಅದರ ರಾಜಕೀಯ ಹಾದಿಯಲ್ಲಿ ದೊಡ್ಡ ತೊಡಕಾಗಿದ್ದ ಸರಕಾರವನ್ನು ಅಮೆರಿಕ ಹೆಚ್ಚು ಕಡಿಮೆ ಅಮಾನ್ಯ ಮಾಡಿದಂತಾಗಿದೆ. ಇದಕ್ಕಾಗಿ ಅದು ಮಿಲಿಟರಿ ದಾಳಿಗಳನ್ನು ನಿಲ್ಲಿಸಿ ಕದನ ವಿರಾಮಕ್ಕೆ ಒಪ್ಪಿಕೊಳ್ಳುವ ಅಗತ್ಯ ಸಹ ಬಿದ್ದಿಲ್ಲ. ಅಲ್ ಕೈದಾ ಮತ್ತು ಇತರ ಉಗ್ರ ಸಂಘಟನೆಗಳು 'ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳ ವಿರುದ್ಧ' ಭಯೋತ್ಪಾದನಾ ಚಟುವಟಿಕೆಗಳನ್ನು ನಿಲ್ಲಿಸಬೇಕೆಂಬುದಷ್ಟೇ ಅದು ಪಾಲಿಸಬೇಕಾದ ಷರತ್ತು. ಅಫ್ಗನ್ ಸರಕಾರ ಅಥವಾ ಇತರ ರಾಜಕೀಯ ಶಕ್ತಿಗಳ ವಿರುದ್ಧ ಭಯೋತ್ಪಾದನಾ ಚಟುವಟಿಕೆಗಳನ್ನು ನಿಲ್ಲಿಸಬೇಕಾಗಿಲ್ಲ ಎಂಬುದನ್ನು ಗಮನಿಸಬೇಕು. ಅಫ್ಗನ್ ರಾಜಕೀಯ ಶಕ್ತಿಗಳಲ್ಲಿ ಅತ್ಯಂತ ಪ್ರಬಲ ಸ್ವತಂತ್ರ ಮಿಲಿಟರಿ ಶಕ್ತಿ ಹೊಂದಿರುವ ಅದು, ಅಫ್ಗನ್ ರಾಜಕೀಯ ಭವಿಷ್ಯವನ್ನು ರೂಪಿಸುವ ಕೀಲಿಕೈಯನ್ನು ಹೊಂದಿದೆ. ಅದು ಈಗ ಕಾಬೂಲಿನಲ್ಲಿ ಇರುವ ಸರಕಾರ ಉರುಳಿಸಿ ಅಧಿಕಾರ ಕಸಿದುಕೊಳ್ಳುವತ್ತ ತನ್ನ ದೃಷ್ಟಿ ನೆಟ್ಟಿದೆ.

ದೋಹಾ ಒಪ್ಪಂದವು ಅಫ್ಗನ್ ಸರಕಾರವನ್ನು ಅತ್ಯಂತ ಇಕ್ಕಟ್ಟಿಗೆ ಸಿಲುಕಿಸಿದೆ. ಅಮೆರಿಕದ ಸೈನ್ಯ ವಾಪಸು ಹೋದರೆ ತಾಲಿಬಾನನ್ನು ಎದುರಿಸುವ ಅದರ ಮಿಲಿಟರಿ ಸಾಮರ್ಥ್ಯ ಕುಗ್ಗುತ್ತದೆ. ಅದರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಾಜಕೀಯ ಮಾನ್ಯತೆ ಸಂದಿಗ್ಧ ಸ್ಥಿತಿಯಲ್ಲಿದೆ. ಒಪ್ಪಂದವನ್ನು ಮನ್ನಿಸಿದರೆ ಸರಕಾರ ಮತ್ತು ತಾಲಿಬಾನೇತರ ರಾಜಕೀಯ ಶಕ್ತಿಗಳು ರಾಜಕೀಯ ಆತ್ಮಹತ್ಯೆ ಮಾಡಿಕೊಂಡಂತೆ. ಒಪ್ಪಂದವನ್ನು ಧಿಕ್ಕರಿಸಿದರೆ ತಾಲಿಬಾನ್ ಜತೆ ದೀರ್ಘ ಅಂತರ್ಯುದ್ಧಕ್ಕೆ ಸಿದ್ಧವಾಗಿರಬೇಕು. ಅಧ್ಯಕ್ಷೀಯ ಚುನಾವಣೆ ಮೊದಲು ಮತ್ತು ನಂತರ ಕಂಡು ಬಂದಂತೆ ತಾಲಿಬಾನೇತರ ರಾಜಕೀಯ ಶಕ್ತಿಗಳಲ್ಲಿ ತಾಲಿಬಾನ್ ಎದುರಿಸುವ ರಾಜಕೀಯ–ಮಿಲಿಟರಿ ಶಕ್ತಿಯಾಗಲಿ ಐಕ್ಯತೆಯಾಗಲಿ ಇಲ್ಲ. ಆದರೂ ಅದು ಎರಡನೇ ಹಾದಿಯನ್ನು ಆರಿಸಿಕೊಳ್ಳುವ







ಪುಟ 7 ರಿಂದ

ದಿಲ್ಲಿ ಹಿಂಸಾಚಾರ ಚುನಾವಣಾ ಸೋಲನ್ನು ದ್ವೇಷದ ವಿಜಯವಾಗಿ ಪರಿವರ್ತಿಸುವ ಪ್ರಯತ್ನ

ಎಗ್ಗಿಲ್ಲದೆ ಹಲ್ಲೆ ಮಾಡುವಲ್ಲಿ ಯಾವ ಮಿತಿಗಳೂ ಅಡ್ಡ ಬರುವುದಿಲ್ಲ ಎಂಬುದು ಸ್ಪಷ್ಟ.

ಹಲವೆಡೆಗಳಲ್ಲಿ ಪೋಲೀಸರು ಹಿಂಸಾಚಾರವನ್ನು ಹತೋಟಿಗೆ ತರುವ ಬದಲು ತಾವೇ ಸಕ್ರಿಯವಾಗಿ ಭಾಗವಹಿಸಿದರು. ಇದರಿಂದಾಗಿ ಇದೆಲ್ಲ ಅಲ್ಪಸಂಖ್ಯಾತರ ಮೇಲೆ ಏಕಪಕ್ಷೀಯ ಸರ್ವತೋಮುಖಿ ಹಲ್ಲೆಯಾಗಿ ಬಿಟ್ಟಿತು. ಸಮವಸ್ತ್ರ ಧರಿಸಿದ ಮಂದಿ, ಅದಾಗಲೇ ಗಾಯಗೊಂಡಿದ್ದ ಐದು ಜನಗಳಿಗೆ ಬಡಿಯುತ್ತ ರಾಷ್ಟ್ರಗೀತೆ ಹೇಳಿ, ಭಾರತ್ ಮಾತಾಕೀ ಜೈ ಹೇಳಿ ಎನ್ನುತ್ತಿರುವ ವೈರಲ್ ಆದ ವೀಡಿಯೋ ಇದರ ಪ್ರತೀಕವಾಗಿದೆ. ಈ ಐವರಲ್ಲಿ ಒಬ್ಬ, ಫೈಝಾನ್, ಕೆಲವು ದಿನಗಳ ನಂತರ ಗಾಯಗಳಿಂದಾಗಿ ಅಸು ನೀಗಿದ. ಆತನ ತಾಯಿ ಕಿಸ್ಮತೂನ್, ಆತ ಮೂರು ವರ್ಷದವನಿದ್ದಾಗಲೇ ವಿಧವೆಯಾದವಳು. ಮನೆಗೆಲಸ, ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡು ಮಕ್ಕಳನ್ನು ದೊಡ್ಡವರಾಗಿ ಮಾಡಿದಳು. ಈ ವಯಸ್ಸಿನಲ್ಲೀಗ ಫೈಜಾನ್ ಆಕೆಯ ಏಕಮಾತ್ರ ಆಸರೆಯಾಗಿದ್ದ. ಹೇಗೆ ಆತನನ್ನು ಪೋಲೀಸ್ ಠಾಣೆಗೆ ಒಯ್ದು ಗಾಯಗೊಂಡಿದ್ದ ಸ್ಥಿತಿಯಲ್ಲೇ ಲಾಕಪ್‌ನಲ್ಲಿ ಇಡಲಾಯಿತು ಎಂದು ಆಕೆ ಹೇಳುತ್ತಾಳೆ ಸ್ಥಿತಿ ಗಂಭೀರವಾದಾಗಲೇ ಅವನನ್ನು ಬಿಡುಗಡೆ ಮಾಡಲಾಯಿತು. "ಪೋಲಿಸರು ಶುಶ್ರೂಷೆಗೆ ಅವಕಾಶ ಕೊಟ್ಟಿದ್ದರೆ, ಅವನೀಗ ಬದುಕಿರುತ್ತಿದ್ದ" ಎನ್ನುತ್ತಾ ಆಕೆ ಅತ್ತಳು.

ದಿಲ್ಲಿ ಪೋಲೀಸರ ಒಂದು ಗಮನಾರ್ಹ ವಿಭಾಗ ಕೋಮುಗ್ರಸ್ತಗೊಂಡಿರುವುದು ಕಳೆದ ವಾರದ ಅತ್ಯಂತ ಪಕ್ಷಪಾತಪೂರ್ಣ ಪಾತ್ರದಲ್ಲಿ ಎದ್ದು ಕಾಣುತ್ತದೆ. ಬಹುಶಃ ಇದು, ಕೋಮುವಾದ ಚುನಾವಣಾ ವಿಜಯಗಳು ಮತ್ತು ಸೋಲುಗಳಿಂದ ಬಹಳ ಆಚೆಯ ವರೆಗೂ ಹೋಗುತ್ತದೆ ಎಂಬುದನ್ನು ಅತ್ಯಂತ ಕರಾಳ ರೀತಿಯಲ್ಲಿ ನೆನಪಿಸಿದೆ. ಪೋಲೀಸರ ಅತ್ಯಾಚಾರಗಳ ಮತ್ತು ಅವರು ಅಲ್ಪಸಂಖ್ಯಾತರ ವಿರುದ್ಧ ಕಲ್ಲು ತೂರಾಟದಲ್ಲಿ ಬಹಿರಂಗವಾಗಿ ಭಾಗವಹಿಸುತ್ತಿರುವ ವೀಡಿಯೋ ಸಾಕ್ಷ್ಯಗಳಿದ್ದರೂ ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂಬುದು ಅವರಿಗೆ ಶಿಕ್ಷೆಯ ಯಾವ ಭಯವೂ ಇರಲಿಲ್ಲ ಎಂಬುದನ್ನು ತೋರಿಸುತ್ತದೆ.

ಈ ಮೊದಲು ದ್ವೇಷ ಭಾಷಣಗಳನ್ನು ಮಾಡಿದ್ದ ಬಿಜೆಪಿ ಮುಖಂಡರ ವಿರುದ್ಧ ಎಫ್‌ಐಆರ್ ಹಾಕಲು ಪೋಲೀಸರು ನಿರಾಕರಿಸಿದ್ದರು. ಅನುರಾಗ್ ಠಾಕುರ್ ಮತ್ತು ಪರ್ವೇಶ್ ಮಿಶ್ರ ವಿರುದ್ಧ ಎಫ್‌ಐಆರ್ ಹಾಕಲು ಪೋಲಿಸರಿಗೆ ನಿರ್ದೇಶನ ಕೊಡಬೇಕು ಎಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಗೆ ದಿಲ್ಲಿ ಪೋಲೀಸ್ ನ್ಯಾಯಾಲಯಕ್ಕೆ ಸಲ್ಲಿಸಿದ ಉತ್ತರದಲ್ಲಿ "ಗೋಲೀ ಮಾರೋ.. ..ಕೋ" ಇತ್ಯಾದಿ ಘೋಷಣೆಗಳನ್ನು ಕೂಗುವುದು ದಂಡನೀಯ ಅಪರಾಧವಲ್ಲ, ಒಂದು ಸಮುದಾಯವನ್ನು "ಅತ್ಯಾಚಾರಿಗಳು" ಎಂದು ವರ್ಣಿಸುವುದೂ ಅಪರಾಧವಲ್ಲ ಎಂದಿದ್ದಾರೆ. ಇದು ಹಿಂಸಾಚಾರಕ್ಕೆ ಪ್ರಚೋದನೆಯಲ್ಲದೆ, ಇನ್ನೇನು?

ಇಂತಹ ಸನ್ನಿವೇಶದಲ್ಲಿ, ಕಾನೂನಿನ ಆಳ್ವಿಕೆಯನ್ನು ಜಾರಿಗೊಳಿಸುವಂತೆ ಖಾತ್ರಿಪಡಿಸುವ ಹೊಣೆ ನ್ಯಾಯಾಂಗದ ಮೇಲಿದೆ. ಎಫ್‌ಐಆರ್‌ಗಳನ್ನು ಹಾಕಬೇಕು ಎಂಬ ಇದೇ ರೀತಿಯ ಅರ್ಜಿಗಳನ್ನು ಸುಪ್ರಿಂ ಕೋರ್ಟಿನಲ್ಲಿ ಮತ್ತು ದಿಲ್ಲಿ ಹೈಕೋರ್ಟಿನಲ್ಲಿ ಸಲ್ಲಿಸಲಾಗಿತ್ತು. ಎಫ್‌ಐಆರ್ ಹಾಕಲು ದಿಲ್ಲಿ ಪೋಲೀಸರ ನಿರಾಕರಣೆಯನ್ನು ಗಂಭೀರವಾಗಿ ತಗೊಂಡು ಮಧ್ಯರಾತ್ರಿಯಲ್ಲಿ ಆದೇಶ ನೀಡಿದ ಹೈಕೋರ್ಟ್ ನ್ಯಾಯಾಧೀಶ ಎಸ್.ಮುರಳೀಧರ ಅವರನ್ನು ಇನ್ನೊಂದು ನ್ಯಾಯಾಲಯಕ್ಕೆ ವರ್ಗಾಯಿಸಲಾಯಿತು. ನ್ಯಾಯಾಲಯಗಳು ನಂತರ ದಿಲ್ಲಿ ಪೋಲಿಸರಿಗೆ ಕಾಲಾವಕಾಶ ನೀಡಿರುವುದು ವ್ಯಾಪಕ ಟೀಕೆಗೆ ಒಳಗಾಗಿದೆ. ಇದು ಭಾರತದ ಇತರ ಭಾಗಗಳಲ್ಲೂ ಇಂತಹ ಘೋಷನೆಗಳನ್ನು ಎತ್ತಲು ಪ್ರೋತ್ಸಾಹ ನೀಡಿದೆ. ಇದರ ಇತ್ತೀಚಿನ ಉದಾಹರಣೆ ಬಂಗಾಳದಿಂದ ಬಂದಿದೆ. ಅಮಿತ್ ಷಾರವರ ಸಾರ್ವಜನಿಕ ಸಭೆಗೆ ಹೋಗುತ್ತಿದ್ದ ಬಿಜೆಪಿ ಬೆಂಬಲಿಗರು ಕೊಲ್ಕತಾದ ಬೀದಿಗಳಲ್ಲು ಅವೇ ಘೋಷಣೆಗಳನ್ನು ಕೂಗಿದರು.

ಮೂರು ದಿನಗಳ ಕಾಲ ಪ್ರಧಾನ ಮಂತ್ರಿಗಳು ಮೌನವಾಗುಳಿದರು. ಗೃಹಮಂತ್ರಿಗಳಂತೂ ಗೈರು ಹಾಜರಾಗಿದ್ದರು. ಇದು ವಿಫಲತೆಯೇ ಅಥವ ಕೃಪಾಪೋಷಣೆಯೇ?

ಸಕಾರಾತ್ಮಕ ಸಂಗತಿಯೆಂದರೆ, ದಿಲ್ಲಿ ಗಮನಾರ್ಹ ಪ್ರಮಾಣದಲ್ಲಿ ಎಡಪಕ್ಷಗಳು, ಚಳುವಳಿಗಳು, ಸಾಮಾಜಿಕ ಆಂದೋಲನಗಳು, ಎನ್‌ಜಿಒಗಳಯ, ಡಾಕ್ಟರುಗಳು, ವಕೀಲರು ಅಣಿನೆರೆದಿರುವುದು. ಇದು 1984ರ ಸಿಖ್-ವಿರೋಧಿ ಹಿಂಸಾಚಾರದ ನಂತರದ ಪ್ರಯತ್ನಗಳನ್ನು ಸ್ವಲ್ಪ ಮಟ್ಟಿಗೆ ನೆನಪಿಗೆ ತಂದಿದೆ. ವಿಶೇಷವಾಗಿ ನೂರಾರು ಯುವಜನರು ಪ್ರತಿದಿನ ಹಿಂಸಾಚಾರ-ಪೀಡಿತ ಪ್ರದೇಶಗಳಲ್ಲಿ ಪರಿಹಾರಗಳನ್ನು ತರುವುದರಲ್ಲಿ, ಸೌಹಾರ್ದ ಮತ್ತು ಶಾಂತಿಗಾಗಿ ಕೆಲಸ ಮಾಡುವುದರಲ್ಲಿ ಮಗ್ನರಾಗಿದ್ದಾರೆ.

ದಿಲ್ಲಿಗೆ ಶಾಂತಿ ಬೇಕಾಗಿದೆ.

ಚುನಾವಣೆಗಳ ಸಮಯದಲ್ಲಿದ್ದಂತೆ, ಈ ಸೆಳೆತ, ಧ್ರುವೀಕರಣ, ಊಹಾಪೋಹಗಳ ಪ್ರಸಾರದ ಸಮಯದಲ್ಲೂ ದಿಲ್ಲಿಯ ಜನತೆ ತಮ್ಮ ನಗರವನ್ನು ದ್ವೇಷದ ಕೊರೊನ ವೈರಸ್‌ನಿಂದ ಕಾಪಾಡಿಕೊಳ್ಳುತ್ತಾರೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಸಾಧ್ಯತೆಯೇ ಹೆಚ್ಚು, ಇದರರ್ಥ ಅಫ್ಘನ್ ರಾಜಕೀಯ ಶಕ್ತಿಗಳ ನಡುವೆ ದೀರ್ಘ ಅಂತರ್ಯುದ್ಧ ಅಥವಾ ತೀವ್ರ ಅರಾಜಕತೆ.

ಹೀಗೆ ಈ ಒಪ್ಪಂದ ಅಫ್ಘಾನಿಸ್ತಾನವನ್ನು ತಾಲಿಬಾನಿನ ತೆಕ್ಕೆಗೆ ಹಾಕುವಂತೆ ಅಥವಾ ಇನ್ನೊಂದು ಅಂತರ್ಯುದ್ಧದತ್ತ ತಳ್ಳುವಂತೆ ಕಾಣುತ್ತಿದೆ. ಹೀಗಾಗಿ ಅಫ್ಘನ್ ಜನತೆ ತಮ್ಮ ರಾಜಕೀಯ ಭವಿಷ್ಯವನ್ನು ತಾವೇ ಶಾಂತಿಯುತವಾಗಿ ರೂಪಿಸಿಕೊಳ್ಳುವಂತೆ ಮಾಡುವುದು ದೋಹಾ ಒಪ್ಪಂದದ ಉದ್ದೇಶವೇ ಆಗಿದ್ದಂತೆ ಕಾಣುವುದಿಲ್ಲ.

ಟ್ರಂಪ್ ಮರುಆಯ್ಕೆಯ ರಾಜಕೀಯ

ಅಮೆರಿಕದ ಅಧ್ಯಕ್ಷ ಟ್ರಂಪ್ ಕಳೆದ ಚುನಾವಣೆಯಲ್ಲಿ ಅಫ್ಘಾನ್ ಮತ್ತು ಅಂತಹ 'ನಿಷ್ಪ್ರಯೋಜಕ' ಯುದ್ಧಗಳನ್ನು ನಿಲ್ಲಿಸಿ ಅಮೆರಿಕನ್ ಸೈನಿಕರನ್ನು ವಾಪಸು ಕರೆಸುವುದಾಗಿ ಭರವಸೆ ಇತ್ತಿದ್ದರು. ಇದರರ್ಥ ಹಿಂದಿನ ಅಮೆರಿಕನ್ ಅಧ್ಯಕ್ಷರುಗಳಿಗೆ ಹೋಲಿಸಿದರೆ ಟ್ರಂಪ್ 'ಶಾಂತಿಪ್ರಿಯ' ಎಂದಲ್ಲ. ಇದಕ್ಕೆ ಅಮೆರಿಕದ ಬಹುಪಾಲು ಆಳುವ ವಲಯಗಳ ಮತ್ತು ರಾಜಕೀಯ ಸಹಮತ ಇರುವಂತೆ ಕಾಣುತ್ತದೆ. ಇದಕ್ಕೆ ಕಾರಣ 19 ವರ್ಷಗಳ ನಂತರ ಇದು ಹಿಂದೆ ಆಗಿನ ಅಧ್ಯಕ್ಷ ಬುಶ್ ಘೋಷಿಸಿದಂತೆ (ಆದರೆ ಬೇರೆ ಅರ್ಥದಲ್ಲಿ) 'ಎಂದೂ ಮುಗಿಯದ ಯುದ್ಧ'ವಾಗಿ ಬಿಟ್ಟಿದೆ. 'ಯುದ್ಧದ ಸಾಧನೆ'ಯೆಂದು ತೋರಿಸಲು ಏನೂ ಇಲ್ಲ. ಈ ಯುದ್ಧಕ್ಕೆ ಅಮೆರಿಕಕ್ಕೆ 200 ಕೋಟಿ ಡಾಲರು ಖರ್ಚಾಗಿದೆ. 3500 ಅಮೆರಿಕನ್ ಮತ್ತು ನಾಟೋ ಸೈನಿಕರು ಸತ್ತಿದ್ದಾರೆ. ಸಾವಿರಾರು ಸೈನಿಕರು ಗಾಯಗೊಂಡಿದ್ದಾರೆ. ಲಕ್ಷಾಂತರ ಅಫ್ಘಾನ್ ಜನ ಸಾವು-ನೋವಿಗೆ ಒಳಗಾಗಿದ್ದಾರೆ. ಇದಲ್ಲದೆ ಅಮೆರಿಕದ ರಣನೀತಿಯಲ್ಲಿ ಅಫ್ಘಾನಿಸ್ತಾನಕ್ಕೆ ಹಿಂದಿನ ಆದ್ಯತೆಯ ಸ್ಥಾನವಿಲ್ಲ. ಸಾವಿರಾರು ಅಮೆರಿಕನ್ ಮತ್ತು ನಾಟೋ ಸೈನಿಕರ ಅಥವಾ ಲಕ್ಷಾಂತರ ಅಫ್ಘಾನ್ ಜನರ ಸಾವು-ನೋವುಗಳನ್ನು ನಿಲ್ಲಿಸುವುದು ಸಹ ಅವರ ಆದ್ಯತೆಯಲ್ಲ. ಬದಲಿಗೆ ಟ್ರಂಪ್ ತಮ್ಮ ಮರುಆಯ್ಕೆಯಲ್ಲಿ ಈ ಅನಿವಾರ್ಯ ನಿರ್ಧಾರದ ರಾಜಕೀಯ ಪ್ರಯೋಜನ ಪಡೆಯಲು ತೀವ್ರ ಉತ್ಸುಕತೆಯಿಂದಿದ್ದಾರೆ, ಅಷ್ಟೇ.

ಟ್ರಂಪ್ ಮತ್ತು ಅಮೆರಿಕಕ್ಕೆ ಬೇರೆ ಆಯ್ಕೆಗಳಿದ್ದವೇ? ಖಂಡಿತ ಇದ್ದವು. ಅಫ್ಘನ್ ಸರಕಾರವನ್ನು ಮೊದಲಿನಿಂದಲೂ ಮಾತುಕತೆಗಳಲ್ಲಿ ತೊಡಗಿಸಬೇಕಿತ್ತು. ಈಗಿನ ಚುನಾಯಿತ ಅಫ್ಘನ್ ಸರಕಾರ ಸೇರಿದಂತೆ ಎಲ್ಲ ಪ್ರಮುಖ ಅಫ್ಘನ್ ರಾಜಕೀಯ ಶಕ್ತಿಗಳ ನಡುವೆ ಕದನ ವಿರಾಮ ಮತ್ತು ರಾಜಕೀಯ ಭವಿಷ್ಯದ ಕುರಿತು ಒಪ್ಪಂದ ಮೊದಲ ಹೆಜ್ಜೆಯಾಗಬೇಕಾಗಿತ್ತು. ಇದರ ಭಾಗವಾಗಿ ಸರಕಾರಿ ಮತ್ತು ತಾಲಿಬಾನ್ ಸೈನಿಕರ ವಿನಿಮಯ ಆಗಬೇಕಾಗಿತ್ತು. ಒಪ್ಪಂದಕ್ಕೆ ಗ್ಯಾರಂಟಿ ಒದಗಿಸಲು ಭಾರತ, ಚೀನಾ, ಪಾಕಿಸ್ತಾನದಂತಹ ನೆರೆಯ ದೇಶಗಳನ್ನು ತೊಡಗಿಸಬಹುದಿತ್ತು. ಕದನ ವಿರಾಮ ಮತ್ತು ಆಂತರಿಕ ಅಫ್ಘನ್ ರಾಜಕೀಯ ಒಪ್ಪಂದ ಹಾಗೂ ಒಂದು ಅವಧಿಯವರೆಗೆ ಅದರ ಪಾಲನೆ, ತಾಲಿಬಾನ್ ಉಗ್ರರನ್ನು ಭಯೋತ್ಪಾದಕ ಪಟ್ಟಿಯಿಂದ ತೆಗೆದು ಹಾಕುವುದಕ್ಕೆ ಮತ್ತು ಆರ್ಥಿಕ ನಿರ್ಬಂಧಗಳನ್ನು ತೆಗೆದು ಹಾಕುವುದಕ್ಕೆ ಮುಖ್ಯ ಷರತ್ತು ಆಗಬೇಕಿತ್ತು. ಅಮೆರಿಕದ ಅಂತರ್‍ರಾಷ್ಟ್ರೀಯ ಮತ್ತು ಮಿಲಿಟರಿ ಬಲದ ಒತ್ತಡದಿಂದ ಹಾಗೂ ಗಂಭೀರ ರಾಜತಾಂತ್ರಿಕ ಮಾತುಕತೆಗಳಿಂದ ಇದು ಸಾಧ್ಯವಿತ್ತು. ಆದರೆ 'ತಿಕ್ಕಲು ಡ್ರಾಮಾ' ಮಾತ್ರ ಗೊತ್ತಿರುವ ಟ್ರಂಪ್ ನಿಂದ ಇದನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ.

ಭಾರತಕ್ಕೆ ಅವಮಾನ, ನಿರ್ಲಕ್ಷ

ಅಫ್ಘನ್ ಸರಕಾರ ಮಾತ್ರವಲ್ಲ, ಭಾರತ ಸಹ ದೋಹಾ ಒಪ್ಪಂದದಿಂದ ತೀವ್ರ ಹಿನ್ನಡೆ ಅನುಭವಿಸಿದೆ. ಈ ಒಪ್ಪಂದಕ್ಕೆ ಮುನ್ನ ಅಮೆರಿಕದ ಸರಕಾರ ಪಾಕಿಸ್ತಾನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದೆ. ಆದರೆ ಅಫ್ಘಾನಿಸ್ತಾನದಲ್ಲಿ ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಅಮೆರಿಕ ಪೂರ್ಣವಾಗಿ ನಿರ್ಲಕ್ಷಿಸಿದೆ. ಪಶ್ಚಿಮ ಅಫ್ಘಾನಿಸ್ತಾನದ ಹೆರಾತ್ ಪ್ರಾಂತದಲ್ಲಿ ಹಾರಿ ನದಿಗೆ ಅಡ್ಡಲಾಗಿ 'ಸ್ನೇಹ ಅಣೆಕಟ್ಟು' ಒಂದನ್ನು ಭಾರತ ಸಂಪೂರ್ಣ ಹಣಕಾಸು ನೆರವು ನೀಡಿ ಕಟ್ಟಿಕೊಟ್ಟಿದೆ. 2014ರಲ್ಲಿ ಪೂರ್ಣಗೊಂಡ ಈ ಅಣೆಕಟ್ಟು 75 ಸಾವಿರ ಹೆಕ್ಟೇರ್ ಗೆ ನೀರಾವರಿ ಮತ್ತು 42 ಮೆಗಾವಾಟ್ ಸಾಮರ್ಥ್ಯದ ಜಲವಿದ್ಯುತ್ ಘಟಕ ಒದಗಿಸಿದೆ. ಈ ಪ್ರದೇಶದಲ್ಲಿ ಭಯೋತ್ಪಾದನೆಗೆ ಕಡಿವಾಣ ಹಾಕಲು ಅಂತರ್‍ರಾಷ್ಟ್ರೀಯ ಸಹಕಾರದ ಭಾರತದ ಧೋರಣೆಗೆ ಇದು ಕೊಡಲಿಯೇಟು ನೀಡಿದೆ. ಭಯೋತ್ಪಾದಕರಿಗೆ ಬೆಂಬಲ ನೀಡುವ ದೇಶಗಳ ಎಫ್.ಟಿ.ಎಫ್ ನ ಬೂದು ಪಟ್ಟಿಯಿಂದ ಹೊರ ಬರಲು ಪಾಕಿಸ್ತಾನದ ಸರಕಾರ ತಾನೇ ಒಪ್ಪಿಕೊಂಡಂತೆ 30-40 ಸಾವಿರ ಭಯೋತ್ಪಾದಕರ ಮೇಲೆ ಕ್ರಮ ಕೈಗೊಳ್ಳಲು ಆರಂಭಿಸಿತ್ತು. ದೋಹಾ ಒಪ್ಪಂದದ ನಂತರ ಇವರನ್ನು ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗೆ ಒಪ್ಪಿಸಿ ತಾನು ಕ್ರಮಕೈಗೊಂಡಿದೆ ಎಂದು ಎಫ್.ಟಿ.ಎಫ್ ನ ಬೂದು ಪಟ್ಟಿಯಿಂದ ಹೊರ ಬರಬಹುದು. ಅದೇ ಸಮಯದಲ್ಲಿ ಈ ಭಯೋತ್ಪಾದಕರು ಪಾಕ್-ಅಫ್ಘನ್ ಗಡಿ ಪ್ರದೇಶದಿಂದ ತಮ್ಮ ಕಾರ್ಯಾಚರಣೆ ಮುಂದುವರೆಸಬಹುದು. ಮಾತ್ರವಲ್ಲ ತಾಲಿಬಾನ್ ನಾಯಕರನ್ನು ಭಯೋತ್ಪಾದಕ ಪಟ್ಟಿಯಿಂದ ತೆಗೆದು ಹಾಕಿದ ಮೇಲೆ ಈ ಭಯೋತ್ಪಾದಕರನ್ನು ಮುಂದೆ ಈ ಪಟ್ಟಿಯಿಂದ ತೆಗೆದು ಹಾಕುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿಯಿದೆ? ಹಲವಾರು ವರ್ಷಗಳ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ಮತ್ತು ಇಡೀ ಪ್ರದೇಶದಲ್ಲಿ ಇಸ್ಲಾಮಿಕ್ ಮೂಲಭೂತವಾದದ ವಿರುದ್ಧ ಭಾರತದ ಹೋರಾಟಕ್ಕೆ ಇದು ತಣ್ಣೀರೆರಚಿದಂತಾಗಿದೆ. ಟ್ರಂಪ್ ಭಾರತ ಭೇಟಿಯ ಮೊದಲೆ ಒಪ್ಪಂದವನ್ನು ಮಾಡಿಕೊಂಡು ಭಾರತಕ್ಕೆ ಇಂತಹ ತೀವ್ರ ನಿರ್ಲಕ್ಷ, ಅವಮಾನವನ್ನು ಮಾಡಿದ್ದಾರೆ. ಇದಕ್ಕೆ ಮೋದಿ ಸರಕಾರ ಯಾವ ಸೊಲ್ಲು ಎತ್ತಿಲ್ಲ. ಅಫ್ಘನ್ ಸರಕಾರಕ್ಕೆ ತನ್ನ ಬೆಂಬಲ ಸಾರಲು ವಿದೇಶಾಂಗ ಕಾರ್ಯದರ್ಶಿಯನ್ನು ಕಾಬೂಲ್ ಗೆ ಕಳಿಸಿದ ಅರ್ಥಹೀನ ಸಾಂಕೇತಿಕ ಕ್ರಮ ಬಿಟ್ಟರೆ ಏನೂ ಮಾಡಿಲ್ಲ. ಟ್ರಂಪ್ ಭೇಟಿಯನ್ನು ರದು ಮಾಡುವುದು ದೂರ ಉಳಿಯಿತು. ಅಮೆರಿಕನ್ ಸರಕಾರಕ್ಕೆ ಪ್ರತಿಭಟನೆ ಸಹ ಸಲ್ಲಿಸಿಲ್ಲ. ಜಂಟಿ ಹೇಳಿಕೆಯಲ್ಲಿ ಈ ಕುರಿತು ಸೇರಿಸಲು ಒತ್ತಾಯಿಸಿಲ್ಲ. ಬದಲಾಗಿ ಭೇಟಿಯ ಸಮಯದಲ್ಲಿ 'ಟ್ರಂಪ್ ಸಾಮ್ರಾಟ'ನ ಸಾಮಂತನಂತೆ ಮೋದಿ ಡೊಗ್ಗು ಸಲಾಮು ಹೊಡೆದರು. ಭಾರತ-ಅಮೆರಿಕ ಆಯಕಟ್ಟಿನ ಸಂಬಂಧದ ಕುರಿತು ಹಾಡಿ ಹೊಗಳಿದರು. ಅಮೆರಿಕದ 'ಜೂನಿಯರ್ ಪಾರ್ಟನರ್' ಆಗಿರುವ ಈಗಿನ ವಿದೇಶಾಂಗ ನೀತಿ ಮುಂದುವರೆಸಿದರೆ ಸ್ವ-ಹಿತಾಸಕ್ತಿಗಳಿಗೆ ಇಂತಹ ತೀವ್ರ ಧಕ್ಕೆ, ಅವಮಾನ, ನಿರ್ಲಕ್ಷಗಳನ್ನಷ್ಟೇ ಭಾರತ ಪಡೆಯಬಲ್ಲುದು. ಇನ್ನೇನನ್ನಲ್ಲ ಎಂದು ಮತ್ತೊಮ್ಮೆ ರುಜುವಾತಾಗಿದೆ. ●

JANASHAKTHI KANNADA VARA PATRIKE March 9-15, 2020 Price: Rs. 10/- Date of Publication: 6 March 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಸಿಎಎ–ಎನ್‌ಸಿಆರ್–ಎನ್‌ಪಿಆರ್ : ಭಾರತ ಸಂವಿಧಾನದ ಅಡಿಪಾಯ ಕೆಡಹುವ ಹುನ್ನಾರ–ಮೀನಾಕ್ಷಿ ಸುಂದರಮ್

ವರದಿ: **ವೆಂಕಟೇಶ ಕೋಣಿ**

ಈ ಪೌರತ್ವ ತಿದ್ದುಪಡಿ ಕಾಯಿದೆಯು–31, ಡಿಸೆಂಬರ್ 2014, ಅಪಘಾನಿಸ್ತಾನ್, ಪಾಕಿಸ್ತಾನ್ ಮತ್ತು ಬಾಂಗ್ಲಾದೇಶದಿಂದ ವಲಸೆ ಬಂದ ಹಿಂದೂ, ಮುಸ್ಲಿಂ, ಬೌದ್ಧ, ಜೈನ, ಫಾರಸಿ ಹಾಗೂ ಕ್ರಿಶ್ಚನ್ ಧರ್ಮಗಳ ಜನ ಸಮುದಾಯಗಳನ್ನು ಕಾನೂನು ಬದ್ಧವೆಂದು ಪರಿಗಣಿಸಿ ಪೌರತ್ವವನ್ನು ನೀಡುವುದಾಗಿ ಹೇಳುತ್ತಿದೆ. ಆದರೆ ಅದೇ ದೇಶಗಳಿಂದ ಅದೇ ಸಮಯಗಳಲ್ಲಿ ಬಂದ ಮುಸ್ಲಿಂ ರನ್ನು ಮಾತ್ರ ಕಾನೂನು ಬಾಹಿರ ವಲಸೆಗಾರರೆಂದು ಪರಿಗಣಿಸುತ್ತದೆ. ಇದು ಭಾರತೀಯ ಸಂವಿಧಾನದ ನಗ್ನ ಉಲ್ಲಂಘನೆಯಾಗಿದೆ. ಸರಕಾರ ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆ ನಿರಾಕರಿಸಲಾಗದು. ಪ್ರತೀ ವ್ಯಕ್ತಿಗೂ ಕಾನೂನಾತ್ಮಕ ರಕ್ಷಣೆ ಕೊಡಬೇಕು. ಕಾಯಿದೆ 2019 ರ ತಿದ್ದುಪಡಿ(ಸಿಎಎ) ವಿರುದ್ಧ ನಮ್ಮ ಆತಂಕ, ಇದರಲ್ಲಿ ಭಾರತದ ಸಂವಿಧಾನ ಕೆಡಹುವ ಹುನ್ನಾರ ಅಡಗಿದೆ ಈ ಹಿನ್ನೆಲೆಯಲ್ಲಿ ಮೆದುಳಿಗೆ ಕೆಲಸ ಕೊಟ್ಟರೆ ದೇಶದ್ರೋಹ ಪಟ್ಟ ಎದುರಿಸಬೇಕಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯ ಮುಖಂಡ ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಮ್ ಹೇಳಿದರು.

ಸಿಪಿಐ(ಎಂ) ಪಕ್ಷದ ಕರೆಯಂತೆ, ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ವಿರೋಧಿಸಿ ಜನರಲ್ಲಿ ಜಾಗೃತಿ ಮೂಡಿಸಲು ಮಾರ್ಚ್ 1 ರಿಂದ 23 ರ ವರೆಗೆ ದೇಶಾದ್ಯಂತ ಮನೆ, ಮನೆಗಳಿಗೆ ತೆರಳಿ ಅಭಿಯಾನ ನಡೆಸುವುದರ ಪೂರ್ವ ಸಿದ್ಧತೆಗಾಗಿ ಕುಂದಾಪುರ ಕಾರ್ಮಿಕ ಭವನದಲ್ಲಿ ಜರಗಿದ ಪಕ್ಷದ ಸರ್ವ ಸದಸ್ಯರ, ಕಾರ್ಯಕರ್ತರ ಉಡುಪಿ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಸಂವಿಧಾನವು–ಕಾನೂನಿನ ಮುಂದೆ ಈ ದೇಶದ ಪ್ರತಿಯೊಬ್ಬ ಪ್ರಜೆ ಸಮಾನರೆಂದು ಪರಿಗಣಿಸಿದೆ. ಕಾನೂನಿನ ರಕ್ಷಣೆಯ ವಿಚಾರವೂ ಸೇರಿದಂತೆ ಇದರಲ್ಲಿ ತಾರತಮ್ಯ ಎಸಗದಂತೆ ಪ್ರಭುತ್ವಕ್ಕೆ ಹೇಳಿದೆ. ಈ ದೇಶದ ಪ್ರಜೆಗೆ ಧರ್ಮ, ಜಾತಿ, ಭಾಷೆ, ಪ್ರದೇಶ ಹಾಗೂ ಲಿಂಗದ ಆಧಾರದ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ. ಹಿಂದಿನ ಪೌರತ್ವ ಕಾಯಿದೆಯಲ್ಲಿ ವಲಸಿಗರು 11 ವರ್ಷ ಭಾರತದಲ್ಲಿದ್ದರೆ ಪೌರತ್ವಕ್ಕೆ ಪರಿಗಣಿಸುವ ಅವಕಾಶವಿತ್ತು. ಈಗ 2019 ರ ಕಾಯಿದೆಯು ಇದನ್ನು 5 ವರ್ಷಕ್ಕೆ ಇಳಿಸಿದೆ. ಅಂದರೆ 2014 ರೊಳಗೆ ಭಾರತಕ್ಕೆ ಬಂದವರಿಗೆ ಪೌರತ್ವ ಕೊಡಲಾಗುತ್ತದೆ. ಮುಸ್ಲಿಂರನ್ನು ಕಾಯಿದೆಯಿಂದ ಹೊರಗಿಟ್ಟಿದ್ದರಿಂದ ಮುಸ್ಲಿಂಮೇತರರ ಧ್ರುವೀಕರಣ ರಾಜಕೀಯ ಇದರಲ್ಲಿದೆ. ಹೀಗಾಗಿ ಮುಸ್ಲಿಂರು ಮತ್ತು ಸಂವಿಧಾನದ ಜಾತ್ಯಾತೀತಕ್ಕೆ ಬದ್ಧರಾದವರೆಲ್ಲ ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಯನ್ನು ವಿರೋಧಿಸುತ್ತಿದ್ದಾರೆ ಎಂದು ಮೀನಾಕ್ಷಿ ಸುಂದರಮ್ ಅಭಿಪ್ರಾಯಪಟ್ಟರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ವ್ಯಾಪಕಗೊಳ್ಳುತ್ತಿದೆ. ಬಿಜೆಪಿ, ಆರ್‌ಎಸ್‌ಎಸ್ ಕೂಟ ಈ ಮೂಲಕ ಸಾಧಿಸ ಬಯಸುತ್ತಿರುವುದು ಹಿಂದೂ ರಾಷ್ಟ್ರವನ್ನೇ ಎಂಬುದು ಹೆಚ್ಚೆಚ್ಚು ಜನಗಳಿಗೆ ಮನವರಿಕೆಯಾಗುತ್ತಿದೆ. ಆದ್ದರಿಂದ ಪೌರತ್ವ ತಿದ್ದುಪಡಿ ಕಾಯಿದೆ(ಸಿಎಎ) ವಿರುದ್ಧ ಹೋರಾಟ ಇನ್ನಷ್ಟು ವಿಸ್ತಾರಗೊಳ್ಳಬೇಕು ಎಂದು ಹೇಳಿದರು.

ಸಿಪಿಐ(ಎಂ) ರಾಜ್ಯ ಮುಖಂಡ ಕೆ. ಶಂಕರ್ ಅಧ್ಯಕ್ಷೀಯ ಭಾಷಣದಲ್ಲಿ, ರಾಷ್ಟ್ರೀಯ ಪೌರರ ದಾಖಲಾತಿಗೆ (ಎನ್‌ಆರ್‌ಸಿ) ದೇಶದ 13 ರಾಜ್ಯಗಳು ವಿರೋಧ ವ್ಯಕ್ತಪಡಿಸಿದೆ ನಮ್ಮ ರಾಜ್ಯದಲ್ಲಿ ಅವಕಾಶ ಕೊಡುವುದಿಲ್ಲ ಎಂದು ಹೇಳಿವೆ. ಅಂತೆಯೇ ಸಿಪಿಐ(ಎಂ) ಪಕ್ಷದ ಕರೆಯಂತೆ ಮಾರ್ಚ್ 23 ರ ವರೆಗೆ ಜಿಲ್ಲೆಯಾದ್ಯಂತ ಪಕ್ಷದ ಕಾರ್ಯಕರ್ತರು ಮನೆ, ಮನೆಗಳಿಗೆ ತೆರಳಿ ಅಭಿಯಾನ ನಡೆಸುವುದಕ್ಕೆ ಮುಂದಾಗಬೇಕು ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಎಚ್. ನರಸಿಂಹ ಪ್ರಾಸ್ತಾವಿಕ ಭಾಷಣ ಮಾಡಿ ಎಲ್ಲರನ್ನು ಸ್ವಾಗತಿಸಿದರು. ಸುರೇಶ ಕಲ್ಲಾಗರ ವಂದಿಸಿದರು. ವೆಂಕಟೇಶ ಕೋಣಿ, ಪೌರತ್ವ ತಿದ್ದುಪಡಿ ಕಾಯಿದೆ ವಿರೋಧಿ ಕವನಗಳನ್ನು ಓದಿದರು. ಮಹಾಬಲ ವಡೇರ ಹೊಬಳಿ ಉಪಸ್ಥಿತರಿದ್ದರು. ಬೈಂದೂರು ತಾಲೂಕು ನಾಡ ಗ್ರಾಮ ಪಂಚಾಯತ್ ಸುತ್ತ ಮುತ್ತಲಿನ ಪಕ್ಷದ ಕಾರ್ಯಕರ್ತರು ಹಾಗೂ ಕೃಷಿಕೂಲಿಕಾರರ ಸಂಘದ ಗ್ರಾಮೀಣ ಉದ್ಯೋಗ ಖಾತ್ರಿ ಕೆಲಸಗಾರರ ಸಮಾವೇಶವು ನಾಡಾದ ಹಾಡಿಗರಡಿ ದೈವಸ್ಥಾನದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು. ಸಿಎಎ–ಎನ್‌ಆರ್‌ಸಿ–ಎನ್‌ಪಿಆರ್ ವಿರೋಧಿಸಿ ಮನೆ, ಮನೆ ಬೇಟಿ ಅಭಿಯಾನ ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರಾದ ಮೀನಾಕ್ಷಿ ಸುಂದರಮ್, ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ವೆಂಕಟೇಶ ಕೋಣಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪಿಲಿಪ್ ಡಿಸಿಲ್ವ, ನಾಗರತ್ನ ನಾಡ, ಶೀಲಾವತಿ ಹಡವು ಉಪಸ್ಥಿತರಿದ್ದರು. ರಾಜೀವ ಪಡುಕೋಣೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜೇಶ್ ಪಡುಕೋಣೆ ಕಾರ್ಯಕ್ರಮ ನಿರೂಪಿಸಿದರು.

ಹೋರಾಟದ ಒಂದು ವಿಶಿಷ್ಟ ಆಯಾಮ 'ಅಂತಿಗೊನೆ'

ವಿನೋದ ಶ್ರೀರಾಮಪುರ

ಒಂದು ಕಡೆ ಶಾಂತಿ ಒಪ್ಪಂದ ಅಂತಿಮ ಘಟ್ಟ. ಮತ್ತೊಂದೆಡೆ ಆತಂಕ, ತಳಮಳ ಒಳಗೊಂಡ ಒಬ್ಬ ಪ್ರತಿಭಾವಂತ ಕಾನೂನು ವಿದ್ಯಾರ್ಥಿ ಯೀಗಲ್ ಅಮೀರ್ ಎಲ್ಲಿ ತಮ್ಮ ನೆಲವನ್ನು ಕಳೆದುಕೊಳ್ಳುವೇನೊ ಎಂಬ ತುಡಿತದಲ್ಲಿ ಪ್ರಧಾನಮಂತ್ರಿ ಯಿತ್‌ಝಕ್ ರೇಬಿನ್ ಓಸ್ಲೋವನ್ನು ಕೊಲೆ ಮಾಡುವ ತೀರ್ಮಾನ.

ಇಸ್ರೇಲ್ ಮತ್ತು ಪ್ಯಾಲಸ್ತೈನ್ ದೇಶದ ನಡುವಿನ ಶಾಂತಿ ಒಪ್ಪಂದ ಸಂದರ್ಭದಲ್ಲಿನ ನೈಜ ಘಟನೆಯಾದರಿತ ಚಿತ್ರ. ಚಿತ್ರದ ಹೆಸರು ಎನ್ಲೈಟ್‌ಮೆಂಟ್. 1993 ಘಟನೆಯಾಧಾರಿತ 2019ರಲ್ಲಿ ಬಿಡುಗಡೆಗೊಂಡ ಅತ್ಯಂತ ನೈಜತೆಯಿಂದ ಕೂಡಿದ ಇಸ್ರೇಲ್ ದೇಶದ ಹಿಬ್ರೂ ಭಾಷೆಯ ಚಿತ್ರ. ಚಲನಚಿತ್ರವು ಹೆಚ್ಚಿನ ನಾಟಕೀಯತೆ ಒಳಗೊಳ್ಳದೆ ಇರುವುದೇ ವಿಶೇಷವಾಗಿತ್ತು.

ಶಾಂತಿ ಒಪ್ಪಂದ ಮಾತುಕತೆಯ ಮೂಲಕ ಆರಂಭವಾಗುವ ಚಲನಚಿತ್ರವು ಇಸ್ರೇಲ್‌ನ ಕಾನೂನು ವಿದ್ಯಾರ್ಥಿಯ ಒಳಗೆ ಆತಂಕ ಮನೆಮಾಡುತ್ತದೆ. ಆಗ ತಾನೆ ಪ್ರೌಢವಸ್ತೆಯಲ್ಲಿದ್ದ ಯುವ ವಿದ್ಯಾರ್ಥಿ ಒಳಗೆ ಆತಂಕ ಹೆಚ್ಚಾದಂತೆ ದೇಶದ ಪ್ರಭುತ್ವ ತೆಗೆದುಕೊಂಡ ನಿರ್ಧಾರ ಸರಿಯಿಲ್ಲವೆಂದು ಮನಗಂಡು ಪರ್ಯಾಯ ದಾರಿಯನ್ನು ಹುಡುಕುತ್ತಿರುತ್ತಾನೆ. ಕೌಟುಂಬಿಕವಾಗಿಯು ತನ್ನ ಆತಂಕವನ್ನು ಹೊರಹಾಕುತ್ತ ಶಾಂತಿ ಒಪ್ಪಂದದ ನಿರ್ಧಾರದ ವಿರುದ್ಧ ನಿಂತು ಗಮನಿಸುವ ಯೀಗಲ್ ಅಮೀರ್ ಅಂತಿಮವಾಗಿ ಪ್ರಧಾನಮಂತ್ರಿಯನ್ನು ಕೊಲೆ ಮಾಡುವುದರೊಂದಿಗೆ ಚಿತ್ರ ಮುಗಿಯುತ್ತದೆ. ಉಳಿದಂತೆ ಚಿತ್ರದ ನಿರ್ದೇಶಕರು ಈ ಚಿತ್ರದಲ್ಲಿ ಆಗಿನ ನೈಜ ದೃಶ್ಯಾವಳಿಗಳನ್ನು ಅಳವಡಿಸಿಕೊಂಡಿರುವುದು ವಿಶೇಷವಾಗಿತ್ತು.

ಬಹುಶಃ ಆ ಕಾಲದ ಶಾಂತಿ ಒಪ್ಪಂದ ಯಶಸ್ವಿಯಾಗಿದ್ದಲ್ಲಿ ನಂತರದ ದಶಕಗಳಲ್ಲಿ

ಪುಟ 12 ಕ್ಕೆ







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**